

# ಷಟ್ ಪ್ರಶ್ನ ಉಪನಿಷತ್

[ShatprashnOpanishad in Kannada]

[ದೇಶದ ಬೇರೆಬೇರೆ ಕಡೆಯವರಾದ ಆರು ಮಂದಿ ತತ್ತ್ವ ಜಿಜ್ಞಾಸುಗಳು, ತತ್ತ್ವವನ್ನು ತಿಳಿಯುವುದಕ್ಕೋಸ್ಕರ, ಒಳ್ಳೆಯ ತತ್ತ್ವಜ್ಞಾನಿ ಗುರುವನ್ನು ಹುಡುಕುತ್ತಾ, ಪಿಪ್ಪಲಾದರ ಕೀರ್ತಿಯನ್ನು ಕೇಳಿ ತಿಳಿದು, ಅವರ ಹತ್ತಿರ ತಮ್ಮ ತಾತ್ತ್ವಿಕ ಜಿಜ್ಞಾಸೆಯನ್ನು ಪರಿಹರಿಸಿಕೊಳ್ಳಬೇಕೆಂದು, ಪಿಪ್ಪಲಾದರ ಆಶ್ರಮದಲ್ಲಿ ಒಟ್ಟಾಗುತ್ತಾರೆ. ಈ ಆರು ಮಂದಿ ಋಷಿಗಳ ಆರು ಪ್ರಶ್ನೆಗಳಿಗೆ ಪಿಪ್ಪಲಾದರು ಕೊಡುವ ಉತ್ತರವೇ ಈ ಷಟ್ ಪ್ರಶ್ನ ಉಪನಿಷತ್.

ಪೂಜ್ಯ ಬನ್ನಂಜೆ ಗೋವಿಂದಾಚಾರ್ಯರು ತಮ್ಮ ಉಪನಿಷತ್ ಪ್ರವಚನದಲ್ಲಿ ಒಬ್ಬ ಸಾಮಾನ್ಯನಿಗೂ ಅರ್ಥವಾಗುವಂತೆ ವಿವರಿಸಿದ ಪ್ರಶ್ನೋಪನಿಷತ್ತಿನ ಅರ್ಥಸಾರವನ್ನು ಇ-ಪುಸ್ತಕ ರೂಪದಲ್ಲಿ ಸೆರೆ ಹಿಡಿದು ಆಸಕ್ತ ಭಕ್ತರಿಗೆ ತಲುಪಿಸುವ ಒಂದು ಕಿರುಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.]

Visit us @: http://prashnopanishat-in-kannada.blogspot.in/ ಚಿತ್ರಕೃಪೆ: ಅಂತರ್ಜಾಲ

# ಪರಿವಿಡಿ

ಓದುವ ಮೊದಲು ........ 2

ಪ್ರಸ್ತಾವನೆ ........ 3

ಶಾಂತಿ ಪಾಠ ........ 5

ಹಿನ್ನೆಲೆ ........ 8

ಅಥ ಪ್ರಥಮಃ ಪ್ರಶ್ನಃ ........ 11

ಅಥ ದ್ವಿತೀಯಃ ಪ್ರಶ್ನಃ........ 21

ಅಥ ತೃತೀಯಃ ಪ್ರಶ್ನಃ ........ 30

ಅಥ ಚತುರ್ಥಃ ಪ್ರಶ್ನಃ ........ 39

ಅಥ ಪಂಚಮಃ ಪ್ರಶ್ನಃ........ 55

ಪಂಚಮಃ ಪ್ರಶ್ನಃ ಪರಿಶಿಷ್ಟ-೧ ........ 62

ಷಷ್ಠಃ ಪ್ರಶ್ನಃ........ 67

# ಓದುವ ಮೊದಲು

ಪೂಜ್ಯ ಬನ್ನಂಜೆ ಗೋವಿಂದಾಚಾರ್ಯರು ಒಬ್ಬ ಸಾಮಾನ್ಯ ಮನುಷ್ಯನಿಗೂ ಅರ್ಥವಾಗುವಂತೆ ವಿವರಿಸಿದ 'ಉಪನಿಷತ್ ಪ್ರವಚನ'ವನ್ನು ಬಳಸಿಕೊಂಡು ಇಲ್ಲಿ ಷಟ್ ಪ್ರಶ್ನ ಉಪನಿಷತ್ತಿನ ವಿವರಣೆಯನ್ನು ಪ್ರಸ್ತುತಪಡಿಸಲಾಗಿದೆ. ಓದುಗರು ಸಾಧ್ಯವಾದರೆ ಆಚಾರ್ಯರ ಪ್ರವಚನದ ಧ್ವನಿಸುರುಳಿಯನ್ನು ಮೊದಲು ಕೇಳಿಸಿಕೊಳ್ಳಬೇಕಾಗಿ ಇಲ್ಲಿ ವಿನಂತಿಸಿಕೊಳ್ಳುತ್ತಿದ್ದೇವೆ. ಧ್ವನಿಸುರುಳಿಯನ್ನು ಕೇಳಲು ಸಾಧ್ಯವಾಗದೇ ಇದ್ದವರಿಗೆ ಅನುಕೂಲವಾಗಲೆಂದು ಈ ಪುಸ್ತಕವನ್ನು ಬರೆಯಲಾಗಿದೆ. ಅಧ್ಯಾತ್ಮ ಬಂಧುಗಳು ಈ ಉಪನಿಷತ್ತಿನಲ್ಲಡಗಿರುವ ಅಪೂರ್ವ ಅರ್ಥಸಾರವನ್ನು ಅರಿತು ತಮ್ಮ ಜೀವನವನ್ನು ಪಾವನಗೊಳಿಸಿಕೊಳ್ಳಬೇಕಾಗಿ ಪ್ರಾರ್ಥಿಸುತ್ತೇವೆ.

# ವಿಜ್ಞಾಪನೆ

ಈ ಇ-ಪುಸ್ತಕವನ್ನು ಅಧ್ಯಾತ್ಮದಲ್ಲಿ ಆಸಕ್ತಿಯುಳ್ಳವರಿಗಾಗಿ ನೀಡಲಾಗಿದೆ. ಆದ್ದರಿಂದ ಇದನ್ನು ಯಾವುದೇ ವ್ಯಾಪಾರಕ್ಕಾಗಿ(Commercial purpose) ಬಳಸಬಾರದಾಗಿ ಕೋರಿಕೆ. ಈ ಪುಸ್ತಕವನ್ನು ಆಚಾರ್ಯರ ಪ್ರವಚನ ಕೇಳಿಸಿಕೊಂಡು ಬರೆದಿದ್ದರೂ ಕೂಡಾ, ಬರೆಯುವಾಗ ಅನೇಕ ತಪ್ಪುಗಳಾಗಿರಬಹುದು, ಬರೆಯುವವರು ತಮಗೆ ಅರ್ಥವಾದ ರೀತಿಯಲ್ಲಿ ಬರೆದುಕೊಂಡಿರಬಹುದು. ಇಲ್ಲಿ ಹಾಗೆ ಏನಾದರೂ ತಪ್ಪು ಅಂಶ ಕಂಡುಬಂದರೆ ಅದಕ್ಕೆ ಆಚಾರ್ಯರು ಹೊಣೆಗಾರರಲ್ಲ. ಇದಕ್ಕಾಗಿ ಓದುಗರು ನೇರವಾಗಿ ಆಚಾರ್ಯರ ಪ್ರವಚನದ ಧ್ವನಿಸುರುಳಿಯನ್ನು ಕೇಳಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಈ ಪುಸ್ತಕದ ಮುಖ ಪುಟದಲ್ಲಿ ಬಳಸಲಾದ ಚಿತ್ರ ಅಂತರ್ಜಾಲದಿಂದ ತೆಗೆದುಕೊಂಡಿದ್ದು. ಒಂದು ವೇಳೆ ಆ ಬಗ್ಗೆ ಯಾರದ್ದಾದರೂ ಆಕ್ಷೇಪವಿದ್ದರೆ ದಯವಿಟ್ಟು ನಮಗೆ ಬರೆದು ತಿಳಿಸಿ. ಅದನ್ನು ತಕ್ಷಣ ತೆಗೆದು ಹಾಕಲಾಗುವುದು.

ಸಂಪರ್ಕ ಕೊಂಡಿ: http://prashnopanishat-in-kannada.blogspot.in/

# ಪ್ರಸ್ತಾವನೆ

ಆರು ಪ್ರಶ್ನೆಗಳಿಗೆ ಉತ್ತರರೂಪವಾಗಿರುವ ಈ ಉಪನಿಷತ್ತು ಅಥರ್ವ ವೇದಕ್ಕೆ ಸೇರಿದ ಉಪನಿಷತ್ತು. ಈ ಉಪನಿಷತ್ತಿಗೆ ತುಂಬಾ ಬಳಕೆಯಲ್ಲಿರುವ ಹೆಸರು 'ಪ್ರಶ್ನೋಪನಿಷತ್ತು'. ಆದರೆ ಇದರ ಪ್ರಾಚೀನ ಹೆಸರು 'ಷಟ್ ಪ್ರಶ್ನ ಉಪನಿಷತ್'. ಆರು ಋಷಿಗಳು ಕೇಳುವ ಆರು ಪ್ರಶ್ನೆಗಳಿಗೆ ಪಿಪ್ಪಲಾದರು ಕೊಡುವ ಉತ್ತರವನ್ನು ಇಲ್ಲಿ ಆರು ಅಧ್ಯಾಯ ರೂಪದಲ್ಲಿ ಕಾಣಬಹುದು.

ಉಪನಿಷತ್ತಿಗೆ ಪ್ರವೇಶಿಸುವ ಮುನ್ನ ಉಪನಿಷತ್ತಿನ ಹಿನ್ನಲೆಯನ್ನು ತಿಳಿಯುವುದು ಬಹಳ ಮುಖ್ಯ. ಮೂಲಭೂತವಾಗಿ ಎಲ್ಲಾ ವೇದಗಳಿಗೆ ಮೂಲ ಓಂಕಾರ. ಓಂಕಾರದ ಮೂರು ಅಕ್ಷರಗಳಿಂದ ಓಂ ಭೂಃ । ಓಂ ಭುವಃ । ಓಂ ಸುವಃ ॥ ಎನ್ನುವ ಮೂರು ವ್ಯಾಹೃತಿಗಳು ಸೃಷ್ಟಿಯಾದವು. ಈ ವ್ಯಾಹೃತಿಯಿಂದ ಮೂರು ಪಾದದ ಗಾಯತ್ರಿ ಸೃಷ್ಟಿಯಾಯಿತು. ಮುಂದೆ ಮೂರು ಪಾದದ ಗಾಯತ್ರಿಯಿಂದ ಮೂರು ವರ್ಗದ ಪುರುಷಸೂಕ್ತ ಸೃಷ್ಟಿಯಾಯಿತು.ಇದು ಋಗ್ವೇದದ ಹದಿನಾರು ಮಂತ್ರಗಳಿರುವ ಪುರುಷಸೂಕ್ತ. ಇಲ್ಲಿ ಮೊದಲ ಐದು, ನಂತರದ ಐದು ಹಾಗೂ ಕೊನೇಯ ಆರು ಮಂತ್ರಗಳನ್ನು ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ. ಹೀಗೆ ಸೃಷ್ಟಿಯಾದ ಪುರುಷಸೂಕ್ತದ ಮೊದಲ ವರ್ಗ ವಿಸ್ತಾರಗೊಂಡು ಋಗ್ವೇದ, ಎರಡನೇ ವರ್ಗ ವಿಸ್ತಾರವಾಗಿ ಯಜುರ್ವೇದ ಹಾಗೂ ಮೂರನೇ ವರ್ಗ ವಿಸ್ತಾರವಾಗಿ ಸಾಮವೇದದ ಜನನವಾಯಿತು. ಮುಂದೆ ಅಥರ್ವ ಮುನಿಯಿಂದ ನಾಲ್ಕನೇ ವೇದದ ಆವಿರ್ಭಾವವಾಯಿತು. ಇದು ನಮ್ಮ ವೈದಿಕ ವಾಙ್ಮಯ ಬೆಳೆದುಬಂದ ಬಗೆ. ಓಂಕಾರ ಎನ್ನುವ ಬೀಜದಿಂದ ಮಹಾವೃಕ್ಷವಾಗಿ, ಹೆಮ್ಮರವಾಗಿ ವೈದಿಕ ಸಾಹಿತ್ಯ ಬೆಳೆದಿದೆ.

ಎಲ್ಲಾ ವೇದಗಳಿಗೂ ಸಂಹಿತೆ, ಬ್ರಾಹ್ಮಣ, ಅರಣ್ಯಕ ಮತ್ತು ಉಪನಿಷತ್ತು ಎನ್ನುವ ನಾಲ್ಕು ಮುಖಗಳಿವೆ. 'ಸಂಹಿತೆ' ಅಂದರೆ ಮೂಲಪಾಠ(Text). 'ಬ್ರಾಹ್ಮಣ' ವೇದದಲ್ಲಿ ಕರ್ಮ ಭಾಗವನ್ನು ಮತ್ತು ಅದರ ಅನುಷ್ಠಾನದ ಬಗೆಯನ್ನು ವಿವರಿಸುವ ಭಾಗ. ಸಾಮಾನ್ಯವಾಗಿ ಬ್ರಹ್ಮಚಾರಿಗಳಿಗೆ 'ಸಂಹಿತೆ'ಯ ಅಧ್ಯಯನವಾದರೆ, ಮದುವೆಯಾದ ನಂತರ ಗ್ರಹಸ್ಥ ಜೀವನಕ್ಕೆ ಬೇಕಾದ ವಿವರಗಳನ್ನು ಕೊಡತಕ್ಕಂತಹ ವೇದದ ಭಾಗ 'ಬ್ರಾಹ್ಮಣ'.

ಹಿಂದಿನ ಕಾಲದಲ್ಲಿ ಗ್ರಹಸ್ಥ ಜೀವನದ ನಂತರ, ಮಕ್ಕಳು ದೊಡ್ಡವರಾದ ಮೇಲೆ, ತಂದೆ-ತಾಯಿ ಸುಮಾರು ಐವತ್ತರಿಂದ ಅರವತ್ತರ ವಯಸ್ಸಿನಲ್ಲಿ ಎಲ್ಲವನ್ನೂ ಮಕ್ಕಳ ಸ್ವಾಧೀನ ಬಿಟ್ಟು, ಕಾಡಿಗೆ ಹೋಗಿ ವಾಸ ಮಾಡುತ್ತಿದ್ದರು. ಅದನ್ನೇ ವಾನಪ್ರಸ್ಥ ಎನ್ನುತ್ತಾರೆ. ಸಾಂಸಾರಿಕ ಜೀವನದ ಬಹುಭಾಗವನ್ನು ಕಳಚಿಕೊಂಡು ಕಾಡಿನಲ್ಲಿ ವಾಸವಾಗಿರುವಾಗ ಹೆಚ್ಚು ಉಪಯೋಗಕ್ಕೆ ಬರುವ ವೇದದ ಭಾಗ 'ಅರಣ್ಯಕ'ವಾದರೆ, ಸಮಗ್ರವನ್ನೂ ತ್ಯಜಿಸಿರುವ ಸಂನ್ಯಾಸಿಗಳಿಗೆ ನಿರಂತರ ಭಗವಂತನ ಚಿಂತನೆ ಮಾಡಲು ಬೇಕಾಗಿರುವ ವೇದದ ಭಾಗವೇ 'ಉಪನಿಷತ್ತು'. ಒಟ್ಟಿನಲ್ಲಿ ಹೇಳಬೇಕೆಂದರೆ ಸಂಹಿತೆ- ಬ್ರಹ್ಮಚಾರಿಗಳಿಗೆ, ಬ್ರಾಹ್ಮಣ-ಗ್ರಹಸ್ಥರಿಗೆ, ಅರಣ್ಯಕ-ವಾನಪ್ರಸ್ಥರಿಗೆ ಮತ್ತು ಉಪನಿಷತ್ತು-ಸಂನ್ಯಾಸಿಗಳಿಗೆ. ಇದರರ್ಥ ಗ್ರಹಸ್ಥರು ಉಪನಿಷತ್ತನ್ನು ಓದಬಾರದು ಎಂದರ್ಥವಲ್ಲ. ಎಲ್ಲರೂ ಎಲ್ಲವನ್ನೂ ಓದಬೇಕು. ಆದರೆ ವಿಶೇಷ ಒತ್ತುಕೊಟ್ಟು ಮೇಲಿನ ವಿಭಾಗವಿದೆ ಅಷ್ಟೇ.

ಹಿಂದೆ ಹೇಳಿದಂತೆ ಪ್ರತಿಯೊಂದು ವೇದಗಳಿಗೂ ಬ್ರಾಹ್ಮಣ, ಅರಣ್ಯಕ ಮತ್ತು ಉಪನಿಷತ್ತುಗಳಿವೆ. ಐತರೇಯ ಬ್ರಾಹ್ಮಣ, ಐತರೇಯ ಅರಣ್ಯಕ ಮತ್ತು ಐತರೇಯ ಉಪನಿಷತ್ತು ಋಗ್ವೇದಕ್ಕೆ ಸಂಬಂಧಪಟ್ಟಿದ್ದು. ಯಜುರ್ವೇದದಲ್ಲಿ ಪ್ರಮುಖವಾಗಿ ಎರಡು ಶಾಖೆಗಳಿವೆ ಮತ್ತು ಅಲ್ಲಿ ಪ್ರತೀ ಶಾಖೆಗೂ ಎರಡು ಉಪನಿಷತ್ತುಗಳಿವೆ. ಶುಕ್ಲಯಜುರ್ವೇದದಲ್ಲಿ

ಈಶಾವಾಸ್ಯ ಮತ್ತು ಬೃಹದಾರಣ್ಯಕ ಎನ್ನುವ ಎರಡು ಉಪನಿಷತ್ತುಗಳಿವೆ. ಅದೇ ರೀತಿ ಕೃಷ್ಣ ಯಜುರ್ವೇದದಲ್ಲಿ ತೈತ್ತಿರೀಯ ಮತ್ತು ಕಾಠಕ ಎನ್ನುವ ಎರಡು ಉಪನಿಷತ್ತುಗಳಿವೆ. ಇನ್ನು ಸಾಮವೇದದಲ್ಲಿ ಕೂಡಾ ಎರಡು ಉಪನಿಷತ್ತುಗಳಿವೆ. ಅವುಗಳೆಂದರೆ ಕೇನೋಪನಿಷತ್ತು ಮತ್ತು ಛಂದೋಗ ಉಪನಿಷತ್ತು.

ಅಥರ್ವವೇದದಲ್ಲಿ ಮೂರು ಉಪನಿಷತ್ತುಗಳಿವೆ. ಅವುಗಳೆಂದರೆ: ಅಥರ್ವವೇದೊಪನಿಷತ್ತು, ಮಾಂಡೂಕ ಉಪನಿಷತ್ತು ಮತ್ತು ಷಟ್ ಪ್ರಶ್ನ ಉಪನಿಷತ್ತು. ಇಲ್ಲಿ ನಾವು ನೋಡುತ್ತಿರುವ ಉಪನಿಷತ್ತು ಈ ಮೇಲಿನ ದಶೋಪನಿಷತ್ತುಗಳಲ್ಲಿ ಒಂದಾದ ಅಥರ್ವವೇದದ "ಷಟ್ ಪ್ರಶ್ನ ಉಪನಿಷತ್ತು".

ಪ್ರಶ್ನೋಪನಿಷತ್ತಿನಲ್ಲಿ ಪ್ರತಿಪಾಧ್ಯವಾಗಿರುವ ಮುಖ್ಯ ಸಂಗತಿ ಪ್ರಾಣತತ್ತ್ವ ಮತ್ತು ಪ್ರಾಣನನ್ನು ನಿಯಂತ್ರಿಸುವ ನಾರಾಯಣ. ಮುಖ್ಯವಾಗಿ ಈ ಎರಡು ಉಪಾಸನೆಯನ್ನು 'ಪ್ರಶ್ನೋಪನಿಷತ್ತು' ವಿವರಿಸುತ್ತದೆ. ಉಪನಿಷತ್ತಿನ ಛಂದಸ್ಸನ್ನು ನೋಡಿದರೆ ಇಲ್ಲಿ ಹೆಚ್ಚಿನ ಭಾಗ ಗದ್ಯರೂಪದಲ್ಲಿದೆ ಹಾಗೂ ನಡುವೆ ಕೆಲವು ಪದ್ಯಗಳನ್ನೂ ನಾವು ನೋಡಬಹುದು. ಹೆಸರೇ ಸೂಚಿಸುವಂತೆ ಆರು ಮಂದಿ ಋಷಿಗಳು ಪಿಪ್ಪಲಾದರನ್ನು ಪ್ರಶ್ನೆ ಮಾಡುತ್ತಾರೆ ಹಾಗೂ ಪಿಪ್ಪಲಾದರು ಅವರ ಪ್ರಶ್ನೆಗೆ ಕೊಡುವ ಉತ್ತರ ಇಲ್ಲಿ ಉಪನಿಷತ್ತಿನ ರೂಪದಲ್ಲಿ ಮೂಡಿಬಂದಿದೆ. ಆದ್ದರಿಂದ ಈ ಏಳುಮಂದಿ ಋಷಿಗಳು ಈ 'ಉಪನಿಷತ್ತಿನ ಋಷಿಗಳು'. [ಈ ಋಷಿಗಳ ಪರಿಚಯ ಮುಂದೆ ಉಪನಿಷತ್ತಿನಲ್ಲೇ ಬರುತ್ತದೆ].

ಎಲ್ಲಾ ಉಪನಿಷತ್ತುಗಳಲ್ಲೂ ನಾವು ಪ್ರಶ್ನೆಗಳನ್ನು ಕಾಣುತ್ತೇವೆ. ಆದರೆ ಇಲ್ಲಿ ಒಂದು ವಿಶೇಷವಿದೆ. ಇದು ಪ್ರಶ್ನೆಯನ್ನು ಹೇಳುವ ಉಪನಿಷತ್ತಲ್ಲ. ಇದು ಆರು ಮಂದಿ ಋಷಿಗಳು ಹಾಕಿದ ಆರು ಪ್ರಶ್ನೆಗೆ ಉತ್ತರಕೊಡುವ ಉಪನಿಷತ್ತು. ಆದ್ದರಿಂದ ಈ ಉಪನಿಷತ್ತನ್ನು ಕೇವಲ 'ಪ್ರಶ್ನೋಪನಿಷತ್ತು' ಎಂದು ಹೇಳದೇ 'ಷಟ್ ಪ್ರಶ್ನ ಉಪನಿಷತ್ತು' ಎಂದು ಹೇಳುವುದು ಹೆಚ್ಚು ಸಮಂಜಸ.

ದೇಶದ ಬೇರೆಬೇರೆ ಕಡೆಯವರಾದ ಆರು ಮಂದಿ ತತ್ತ್ವ ಜಿಜ್ಞಾಸುಗಳು, ತತ್ತ್ವವನ್ನು ತಿಳಿಯುವುದಕ್ಕೋಸ್ಕರ, ಒಳ್ಳೆಯ ತತ್ತ್ವಜ್ಞಾನಿ ಗುರುವನ್ನು ಹುಡುಕುತ್ತಾ , ಪಿಪ್ಪಲಾದರ ಕೀರ್ತಿಯನ್ನು ಕೇಳಿ ತಿಳಿದು, ಅವರ ಹತ್ತಿರ ತಮ್ಮ ತಾತ್ತ್ವಿಕ ಜಿಜ್ಞಾಸೆಯನ್ನು ಪರಿಹರಿಸಿಕೊಳ್ಳಬೇಕೆಂದು, ಪಿಪ್ಪಲಾದರ ಆಶ್ರಮದಲ್ಲಿ ಒಟ್ಟಾಗುತ್ತಾರೆ. ಹೀಗೆ ಆರು ಮಹತ್ತರವಾದ ಪ್ರಶ್ನೆಗಳನ್ನು ಹೊತ್ತು ತಂದ ಆರು ಮಂದಿ ಋಷಿಗಳಿಗೆ ಉತ್ತರ ಕೊಟ್ಟವರು ಪಿಪ್ಪಲಾದರು. ಬನ್ನಿ, ಭಗವಂತನ ಅನುಗ್ರಹ ಬೇಡಿ, ಈ ಆರು ಮಂದಿ ಋಷಿಗಳ ಜೊತೆ ಸೇರಿ, ನಾವೂ ಕೂಡ ನಮ್ಮಿಂದ ಸಾಧ್ಯವಾದಷ್ಟು ಜ್ಞಾನವನ್ನು ಪಿಪ್ಪಲಾದರಿಂದ ಪಡೆದು ಕೃತಾರ್ಥರಾಗೋಣ.

*******

**Visit Us at : http://prashnopanishat-in-kannada.blogspot.in/**

# ಶಾಂತಿ ಪಾಠ

ಅಧ್ಯಯನ ಪ್ರಾರಂಭಿಸುವ ಮೊದಲು ದೇವರನ್ನು ಪ್ರಾರ್ಥನೆ ಮಾಡಿ, "ನಿರ್ವಿಘ್ನವಾಗಿ ನಮ್ಮ ಅಧ್ಯಯನ ನಡೆಯಲಿ" ಎಂದು ಪ್ರಾರ್ಥಿಸುವ ಸ್ತೋತ್ರ ಶಾಂತಿಮಂತ್ರ. ಇಲ್ಲಿ ಜ್ಞಾನಾನಂದವನ್ನು ಕೊಡು ಎನ್ನುವ ಪ್ರಾರ್ಥನೆಯ ಜೊತೆಗೆ, ವಿಶ್ವಶಾಂತಿಯ ಪ್ರಾರ್ಥನೆ ಕೂಡಾ ಇದೆ. ಹೀಗಾಗಿ ಯಾವುದೇ ಒಂದು ಅಧ್ಯಯನ ಮಾಡುವ ಮೊದಲು ಮತ್ತು ಕೊನೆಯಲ್ಲಿ ಶಾಂತಿಮಂತ್ರ ಹೇಳುವ ಕ್ರಮವಿದೆ. ಇದು ಜೀವನದಲ್ಲಿ ಅಶಾಂತಿ ಬರಬಾರದು, ಎಲ್ಲರಿಗೂ ಒಳ್ಳೆಯದಾಗಲಿ ಎಂದು ಶಾಂತಿಯನ್ನು ಪ್ರಾರ್ಥಿಸುವ ಮಂತ್ರ ಕೂಡಾ ಹೌದು. ಒಂದೊಂದು ವೇದ ಶಾಖೆಯವರಿಗೂ ಒಂದೊಂದು ಶಾಂತಿ ಮಂತ್ರವಿದೆ. ಇಲ್ಲಿ ಬಂದಿರುವುದು ಅಥರ್ವ ವೇದದ ಶಾಂತಿ ಮಂತ್ರ.

*ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।*
*ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿರ್ವ್ಯಶೇಮ ದೇವಹಿತಂಯದಾಯುಃ ॥*

"ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ". ಇಲ್ಲಿ 'ಯಜತ್ರಾಃ' ಎಂದರೆ ನಮ್ಮಿಂದ ಪೂಜಿಸಲ್ಪಡುವವರು, ನಮ್ಮನ್ನು ರಕ್ಷಿಸುವವರು ಎಂದರ್ಥ. ಅದೇ ರೀತಿ 'ದೇವಾಃ' ಎಂದರೆ ದೇವತೆಗಳು ಮತ್ತು ಅವರ ಅಂತರ್ಯಾಮಿಯಾಗಿರುವ ಭಗವಂತ. ಅಧ್ಯಯನಕ್ಕೆ ಮೊದಲು ಗುರು-ಶಿಷ್ಯರು ಪೂಜಾರ್ಹರಾದ ತಮ್ಮ ಇಂದ್ರಿಯಾಭಿಮಾನಿ ದೇವತೆಗಳಲ್ಲಿ ಈ ರೀತಿ ಪ್ರಾರ್ಥನೆ ಮಾಡುತ್ತಿದ್ದಾರೆ: "ನೀವು ನಮ್ಮ ಕಿವಿ ಒಳ್ಳೆಯದನ್ನು ಕೇಳುವಂತೆ, ನಮ್ಮ ಕಣ್ಣು ಒಳ್ಳೆಯದನ್ನು ನೋಡುವಂತೆ ಅನುಗ್ರಹಿಸಿ" ಎಂದು.

ಎಲ್ಲಕ್ಕಿಂತ ಒಳ್ಳೆಯ ಸುದ್ದಿ ಎಂದರೆ ಅದು ದೇವರ ಸುದ್ದಿ. ಒಳ್ಳೆಯದನ್ನು ಕೇಳುವುದು ಎಂದರೆ ಮೊದಲು ಭಗವಂತನ ಬಗೆಗೆ ಕೇಳುವುದು. ನಂತರ ಲೋಕದಲ್ಲಿನ ಒಳ್ಳೆಯ ಸುದ್ದಿಯನ್ನು ಕೇಳುವುದು. ಸಾಮಾನ್ಯವಾಗಿ ಲೋಕದಲ್ಲಿನ ಕೆಟ್ಟ ವಿಷಯ ಕಿವಿಯ ಮೇಲೆ ಬಿದ್ದಾಗ, ಕೆಟ್ಟ ದೃಶ್ಯವನ್ನು ನೋಡಿದಾಗ, ಮನಸ್ಸು ಕದಡುತ್ತದೆ. ಅದರಿಂದ ಕೋಪ, ದ್ವೇಷ ಬೆಳೆಯುತ್ತಾ ಹೋಗುತ್ತದೆ. ಅದಕ್ಕಾಗಿ 'ಕೆಟ್ಟ ವಿಷಯ ಕಿವಿಯ ಮೇಲೆ ಬೀಳದಿರಲಿ, ಕೆಟ್ಟ ದೃಶ್ಯ ಕಣ್ಣಿಗೆ ಕಾಣದಿರಲಿ' ಎನ್ನುವ ಪ್ರಾರ್ಥನೆ ಇಲ್ಲಿದೆ.

"ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿರ್ವ್ಯಶೇಮ ದೇವಹಿತಂಯದಾಯುಃ". "ನಾವು ಬದುಕ್ಕಿದ್ದಾಗ ನಮಗೆ ಆರೋಗ್ಯವಂತ ಮತ್ತು ಗಟ್ಟಿಮುಟ್ಟಾದ ಇಂದ್ರಿಯ ಮತ್ತು ಶರೀರವನ್ನು ಕೊಡು" ಎಂದು ಇಲ್ಲಿ ಪ್ರಾರ್ಥಿಸುತ್ತಾರೆ. ಬದುಕಿರುವಷ್ಟು ಕಾಲ ಇನ್ನೊಬ್ಬರಿಗೆ ಭಾರವಾಗಿ ಬದುಕಿಸಬೇಡ, ಸಾಯುವ ತನಕ ಭಗವಂತನ ಧ್ಯಾನ ಮಾಡುತ್ತಾ, ಜಾಗೃತವಾದ ಮನಸ್ಸಿನಲ್ಲಿ ಭಗವಂತನ ಗುಣಗಳ ಅನುಸಂಧಾನ ಮಾಡುತ್ತಾ, ದೇವರು ಮೆಚ್ಚುವ ಬದುಕನ್ನು ಬಾಳಬೇಕು. ಅದಕ್ಕಾಗಿ "ಓ ತತ್ತ್ವಾಭಿಮಾನಿ ದೇವತೆಗಳೇ, ನಮಗೆ ಆರೋಗ್ಯವಂತ ಶರೀರವನ್ನು ಕೊಟ್ಟು ಅನುಗ್ರಹಿಸಿ" ಎಂದು ಇಲ್ಲಿ ಪ್ರಾರ್ಥಿಸಿದ್ದಾರೆ.

ಇಲ್ಲಿ ಶರೀರಗಳು(ತನೂಭಿಃ) ಎಂದು ಬಹುವಚನ ಉಪಯೋಗಿಸಿ ಪ್ರಾರ್ಥಿಸಿರುವುದನ್ನು ಕಾಣುತ್ತೇವೆ. ಇದರ ಹಿಂದೆ ಎರಡು ಅರ್ಥವಿದೆ. "ಜನ್ಮಜನ್ಮಗಳಲ್ಲೂ ಆರೋಗ್ಯವಂತ ಶರೀರ ಕೊಡು" ಎನ್ನುವುದು ಒಂದರ್ಥವಾದರೆ, "ಪ್ರಾರ್ಥಿಸುತ್ತಿರುವ ಎಲ್ಲರಿಗೂ ಆರೋಗ್ಯವಂತ ದೇಹ ಕೊಡು" ಎನ್ನುವುದು ಇನ್ನೊಂದು ಅರ್ಥ. ಒಟ್ಟಿನಲ್ಲಿ

ಹೇಳಬೇಕೆಂದರೆ: “ಒಳ್ಳೆಯದನ್ನು ಕೇಳಿಸು, ಒಳ್ಳೆಯದನ್ನು ನೋಡುವಂತೆ ಮಾಡು, ಉಸಿರಿರುವಷ್ಟು ಕಾಲ ದೇವರು ಮೆಚ್ಚುವ ಬದುಕನ್ನು ಪರಾಧೀನನಾಗದೇ ಬದುಕುವಂತೆ ಮಾಡು” ಎನ್ನುವುದು ಇಲ್ಲಿರುವ ಮೂಲ ಪ್ರಾರ್ಥನೆ.

*ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ । ಸ್ವಸ್ತಿ ನಃ ಪೂಷಾ ವಿಶ್ವವೇದಾಃ ।*
*ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟನೇಮಿಃ । ಸ್ವಸ್ತಿ ನೋ ಬೃಹಸ್ಪತಿರ್ದಧಾತು ॥*
*ಓಂ ಶಾಂತಿಃ ಶಾಂತಿಃ ಶಾಂತಿಃ ॥*

ಮೇಲ್ನೋಟದಲ್ಲಿ ಈ ಶಾಂತಿಮಂತ್ರವನ್ನು ನೋಡಿದರೆ ಇಲ್ಲಿ ಇಂದ್ರ, ಪೂಷಾ, ತಾರ್ಕ್ಷ್ಯ ಮತ್ತು ಬೃಹಸ್ಪತಿ ಎನ್ನುವ ನಾಲ್ಕು ದೇವತೆಗಳನ್ನು ಪ್ರಾರ್ಥಿಸುತ್ತಿರುವಂತೆ ಕಾಣುತ್ತದೆ. ಆದರೆ ಇದು ಭಗವಂತನ ನಾಲ್ಕು ರೂಪಗಳನ್ನು ಸ್ತೋತ್ರ ಮಾಡುವ ಮಂತ್ರ. ಸೃಷ್ಟಿ, ಪಾಲನೆ, ಸಂಹಾರ ಮತ್ತು ಮೋಕ್ಷ ಈ ನಾಲ್ಕು ಸ್ಥಿತಿಯಲ್ಲಿ ನಮ್ಮನ್ನು ನಿರಂತರ ನಿಯಂತ್ರಿಸುವ ಭಗವಂತನ ಚತುರ್ಮುಖ ಸ್ತುತಿ ಇದಾಗಿದೆ. ಸೃಷ್ಟಿಗೆ ಕಾರಣವಾದ ಭಗವಂತನ ಪ್ರದ್ಯುಮ್ನ ರೂಪ, ಪಾಲನೆಗೆ ಕಾರಣವಾದ ಅನಿರುದ್ಧ ರೂಪ, ಸಂಹಾರಕರ್ತ ಸಂಕರ್ಷಣ ರೂಪ ಮತ್ತು ಮೋಕ್ಷಪ್ರದ ವಾಸುದೇವ ರೂಪ ಇವೇ ಆ ಚತುರ್ಮೂರ್ತಿ ರೂಪಗಳು.

ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ : ‘ಪ್ರದ್ಯುಮ್ನಂಚ ಇಂದ್ರ ನಾಮಕಃ’ ಎಂದು ತೈತ್ತಿರೀಯ ಭಾಷ್ಯದಲ್ಲಿ ಆಚಾರ್ಯರು ಹೇಳಿದ್ದಾರೆ. ಆದ್ದರಿಂದ ಇಲ್ಲಿ ‘ಇಂದ್ರ’ ಎಂದರೆ ಸೃಷ್ಟಿಗೆ ಕಾರಣನಾದ ಭಗವಂತನ ಪ್ರದ್ಯುಮ್ನರೂಪ. “ವೃದ್ಧಶ್ರವಾಃ” ಎಂದರೆ ಎಲ್ಲಾ ಕಡೆ ಹಬ್ಬಿದ ಕೀರ್ತಿ ಉಳ್ಳವನು ಎಂದರ್ಥ. ಜಗತ್ತನ್ನು ಸೃಷ್ಟಿ ಮಾಡಿದ ಭಗವಂತನ ಕೀರ್ತಿಗಿಂತ ಮಹತ್ತಾದ ಇನ್ನೊಂದು ಕೀರ್ತಿ ಯಾವುದಿದೆ? ಜಗತ್ ಸೃಷ್ಟಾ ಎಂದು ನಾವು ಹಾಡಿ ಹೊಗಳುವ ದೇವರು ಆ ಪ್ರದ್ಯುಮ್ನ ದೇವರು. ಅವರು ನಮ್ಮ ಜೀವನದಲ್ಲಿ ಜ್ಞಾನಾನಂದವನ್ನು ಕೊಟ್ಟು ರಕ್ಷಿಸಲಿ ಎನ್ನುವ ಪ್ರಾರ್ಥನೆ ಇಲ್ಲಿದೆ.

ಸ್ವಸ್ತಿ ನಃ ಪೂಷಾ ವಿಶ್ವವೇದಾಃ : ‘ಪೂಷಾ’ ಎಂದರೆ ಪೋಷಣೆ. ಪಾಲನೆ ಮಾಡುವ ಅನಿರುದ್ಧರೂಪಿ ಭಗವಂತ ಪೂಷಾ. ‘ವಿಶ್ವವೇದಾಃ’ ಎಂದರೆ ಎಲ್ಲವನ್ನೂ ತಿಳಿದವನು. “ಸರ್ವಜ್ಞನಾಗಿದ್ದು, ಎಲ್ಲರನ್ನೂ ಪಾಲನೆ ಪೋಷಣೆ ಮಾಡುವ ಅನಿರುದ್ಧ ನಮಗೆ ಮಾಂಗಲಿಕವಾದ, ಜ್ಞಾನಾನಂದಮಯವಾದ ಬದುಕನ್ನು ಕೊಡಲೀ ಎನ್ನುವುದು ಇಲ್ಲಿರುವ ಪ್ರಾರ್ಥನೆ.

ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟನೇಮಿಃ : ಇಲ್ಲಿ ‘ನೇಮಿ’ ಎಂದರೆ ಚಕ್ರ. ಅಧರ್ಮ ಮತ್ತು ಅಜ್ಞಾನದ ನಾಶಕ್ಕಾಗಿ ಕೈಯಲ್ಲಿ ಚಕ್ರವನ್ನು ಹಿಡಿದವನು ‘ಅರಿಷ್ಟನೇಮಿಃ’. ಸಜ್ಜನರ ಮತ್ತು ಧರ್ಮದ ರಕ್ಷಣೆಗಾಗಿ ಕೈಯಲ್ಲಿ ಆಯುಧ ಹಿಡಿದಿರುವ ಸಂಕರ್ಷಣರೂಪಿ ಭಗವಂತ, ನಮ್ಮ ಸಂಸಾರ ದುಃಖವನ್ನು ನಾಶಮಾಡಿ, ನಮ್ಮನ್ನು ಉದ್ಧಾರ ಮಾಡಲಿ ಎನ್ನುವುದು ಇಲ್ಲಿರುವ ಪ್ರಾರ್ಥನೆ.

ಸ್ವಸ್ತಿ ನೋ ಬೃಹಸ್ಪತಿರ್ದಧಾತು: ಸಂಸಾರ ಬಂಧವನ್ನು ಕಳಚಿಕೊಂಡು ಮೋಕ್ಷವನ್ನು ಸೇರಿದ ದೊಡ್ಡವರ ಸ್ವಾಮಿ, ‘ಮೋಕ್ಷಪ್ರದ ವಾಸುದೇವ’ ನಮ್ಮನ್ನು ಅತ್ಯಂತ ಮಾಂಗಲಿಕ ಸ್ಥಿತಿಯಲ್ಲಿ ಧಾರಣೆ ಮಾಡಿ ರಕ್ಷಿಸಲೀ, ಮೋಕ್ಷಪ್ರದನಾದ ಆತ ನಮಗೆ ಮೋಕ್ಷವನ್ನು ಕರುಣಿಸಲೀ ಎನ್ನುವುದು ಇಲ್ಲಿರುವ ಪ್ರಾರ್ಥನೆ.

ಓಂ ಶಾಂತಿಃ ಶಾಂತಿಃ ಶಾಂತಿಃ : ‘ಓಂ’ ಎನ್ನುವುದು ಅತ್ಯಂತ ಮೂಲಭೂತವಾದ ಬೀಜಾಕ್ಷರ. ಇದು ಭಗವಂತನ ಹೆಸರು. ‘ಶಂ’ ಎಂದರೆ ಆನಂದ; ‘ಇ’ ಎಂದರೆ ಜ್ಞಾನ; ‘ಅಂತ’ ಎಂದರೆ ತುತ್ತತುದಿ. ಆದ್ದರಿಂದ ‘ಓಂ ಶಾಂತಿಃ’ ಎಂದರೆ: ‘ಭಗವಂತ ಜ್ಞಾನಾನಂದಗಳ ತುತ್ತ ತುದಿಯಲ್ಲಿರುವವ’ ಎಂದರ್ಥ. “ಮೂರು ವೇದಗಳಲ್ಲಿ ಪ್ರತಿಪಾದ್ಯನಾಗಿರುವ,

ಮೂರು ಕಾಲಗಳಲ್ಲಿರುವ, ಎಲ್ಲಾಕಡೆ ಇರುವ ಭಗವಂತ ಜ್ಞಾನಾನಂದಪೂರ್ಣ" ಎಂದು ಇಲ್ಲಿ ಮೂರು ಬಾರಿ ಹೇಳಲಾಗಿದೆ. "ಈ ಅನುಸಂಧಾನದ ಮೂಲಕ ನಮ್ಮ ಬದುಕಿನಲ್ಲಿ ಕೂಡಾ ಶಾಂತಿಯನ್ನು ಕೊಡು" ಎನ್ನುವ ಪ್ರಾರ್ಥನೆ ಇದಾಗಿದೆ.

*******

# ಹಿನ್ನೆಲೆ

*ಓಂ॥ ಸುಕೇಶಾ ಚ ಭಾರದ್ವಾಜಃ, ಶೈಬ್ಯಶ್ಚ ಸತ್ಯಕಾಮಃ, ಸೌರ್ಯಾಯಣೀ ಚ ಗಾರ್ಗ್ಯಃ, ಕೌಸಲ್ಯಶ್ಚಾಽಶ್ವಲಾಯನೋ, ಭಾರ್ಗವೋ ವೈದರ್ಭಿಃ, ಕಬಂಧೀ ಕಾತ್ಯಾಯನಃ । ತೇ ಹೈತೇ ಬ್ರಹ್ಮಪರಾ ಬ್ರಹ್ಮನಿಷ್ಠಾಃ ಪರಂ ಬ್ರಹ್ಮಾನ್ವೇಷಮಾಣಾಃ ಏಷ ಹ ವೈ ತತ್ ಸರ್ವಂ ವಕ್ಷ್ಯತೀತಿ ತೇ ಹ ಸಮಿತ್ಪಾಣಯೋ ಭಗವಂತಂ ಪಿಪ್ಪಲಾದಮುಪಸನ್ನಾಃ ॥೧॥*

ದೇಶದ ಬೇರೆಬೇರೆ ಕಡೆಯಿಂದ ಮಹಾ ವಿದ್ವಾಂಸರಾದ ಆರು ಮಂದಿ ಋಷಿಗಳು ಜ್ಞಾನ ಪಿಪಾಸೆಯಿಂದ, ತಮ್ಮ ಪ್ರಶ್ನೆಗೆ ಉತ್ತರ ಕೊಡುವ ಯೋಗ್ಯ ಗುರುವನ್ನು ಅರಸುತ್ತಾ, ಎಲ್ಲರ ಮಾರ್ಗದರ್ಶನದಂತೆ, ಮಹಾನ್ ಜ್ಞಾನಿ, ಭಗವದ್ ದೃಷ್ಟಾರರಾದ 'ಪಿಪ್ಪಲಾದ' ಎನ್ನುವ ಶ್ರೇಷ್ಠ ಮಹರ್ಷಿಯ ಬಳಿ ಬಂದು ಸೇರಿದರು. ಹೀಗೆ ಪಿಪ್ಪಲಾದರಲ್ಲಿಗೆ ತಮ್ಮ ಪ್ರಶ್ನೆಯನ್ನು ಹೊತ್ತು ತಂದ ಆ ಆರು ಮಂದಿ ಋಷಿಗಳ ಪರಿಚಯವನ್ನು ಇಲ್ಲಿ ಮಾಡಲಾಗಿದೆ. ಈ ಆರು ಋಷಿಗಳನ್ನು ಅವರ ಯೋಗ್ಯತೆಯ ಕ್ರಮಾಂಕದಲ್ಲಿ ಇಲ್ಲಿ ವಿವರಿಸಿರುವುದನ್ನು ಕಾಣುತ್ತೇವೆ.

ಇವರಲ್ಲಿ ಮೊದಲನೆಯ ಋಷಿಯ ಹೆಸರು ಸುಕೇಶ. ಈತ ಭಾರದ್ವಾಜನ ಮಗ. ಸಾಮಾನ್ಯವಾಗಿ ನಮ್ಮ ಪೌರಾಣಿಕ ಇತಿಹಾಸದಲ್ಲಿ ಭಾರದ್ವಾಜ ಎನ್ನುವ ಹೆಸರನ್ನು ಕ್ಷತ್ರಿಯರಿಗೆ ಬಳಸಿರುವುದು ಬಹಳ ವಿರಳ. ಹಾಗಾಗಿ ಈತ ಒಬ್ಬ ಬ್ರಹ್ಮರ್ಷಿ ಇರಬಹುದು ಎಂದು ನಾವು ತಿಳಿಯಬಹುದು. ಸು-ಕೇಶ ಎಂದರೆ ಸುಂದರವಾದ ವ್ಯಕ್ತಿತ್ವ ಉಳ್ಳವನು ಎನ್ನುವುದು ಮೇಲ್ನೋಟದ ಅರ್ಥ. ಇನ್ನೊಂದು ಮುಖದಲ್ಲಿ ಈ ಹೆಸರಿನ ಅರ್ಥವನ್ನು ನೋಡಿದರೆ: ದುಃಖ ರಹಿತವಾದ ಸುಖಕ್ಕೆ ಅರ್ಹನಾದವ ಅಥವಾ ಮೋಕ್ಷಯೋಗ್ಯ ಎನ್ನುವ ಅರ್ಥ ಕಾಣುತ್ತದೆ. ಆರು ಜನ ಋಷಿಗಳಲ್ಲಿ ಬಹಳ ಶ್ರೇಷ್ಠ ಪ್ರಶ್ನೆ ಕೇಳಿದವ ಈತ. ಆದ್ದರಿಂದ ಈತನ ಹೆಸರನ್ನು ಇಲ್ಲಿ ಮೊದಲು ಹೇಳಲಾಗಿದೆ.

ಇಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಅಂಶವೆಂದರೆ: ಮೊದಲ ನಾಲ್ಕು ಮಂದಿ ಋಷಿಗಳ ಕುರಿತು ಹೇಳುವಾಗ 'ಚ-ಕಾರ' ಉಪಯೋಗಿಸಿ ಹೇಳಿದ್ದಾರೆ[ಉದಾ:ಸುಕೇಶಾ ಚ]. ಸಂಸ್ಕೃತದಲ್ಲಿ ಚ-ಕಾರವನ್ನು 'ಅಪೂರ್ವ, ದುರ್ಲಭ' ಇತ್ಯಾದಿ ಅರ್ಥದಲ್ಲಿ ಬಳಸುತ್ತಾರೆ. ಇಲ್ಲಿ ಮೊದಲ ನಾಲ್ಕು ಮಂದಿ ಋಷಿಗಳು ಬಹಳ ಅಪೂರ್ವವಾದ ಪ್ರಶ್ನೆಯನ್ನು ಹೊತ್ತು ತಂದ ಶ್ರೇಷ್ಠರು. ಆದ್ದರಿಂದ ಅವರನ್ನು ಚ-ಕಾರದಿಂದ ಸಂಬೋಧಿಸಲಾಗಿದೆ.

ಎರಡನೇ ಋಷಿಯ ಹೆಸರು ಸತ್ಯಕಾಮಃ. ಈತ ಶಿಬಿ(ವಿ)ಯ ಮಗ. ಶಿಬಿ ಎನ್ನುವ ಹೆಸರು ಸಾಮಾನ್ಯವಾಗಿ ಬ್ರಾಹ್ಮಣರಿಗಿರುವುದಿಲ್ಲ. ಆದ್ದರಿಂದ ಈತ ಕ್ಷತ್ರಿಯ(ರಾಜರ್ಷಿ) ಇರಬಹುದು. 'ಸತ್ಯಕಾಮಃ' ಎನ್ನುವಲ್ಲಿ 'ಸತ್ಯ' ಎನ್ನುವುದು ಮೂಲಭೂತವಾಗಿ ದೇವರ ಹೆಸರು. ಆದ್ದರಿಂದ ಸತ್ಯಕಾಮಃ ಎಂದರೆ ದೇವರನ್ನು ಪ್ರೀತಿಸುವವ ಎಂದರ್ಥ.

ಗಾರ್ಗ್ಯ ಗೋತ್ರದವನಾದ ಮೂರನೇ ಋಷಿ ಸೂರ್ಯ ಎನ್ನುವವನ ಮೊಮ್ಮಗ [ಸೌರ್ಯಾಯಣೀ ಎಂದರೆ ಸೌರ್ಯಾಯಣನ ಮಗನ ಮಗ]. ಈತ ಕೂಡಾ ರಾಜರ್ಷಿ ಇದ್ದರೂ ಇರಬಹುದು. ನಾಲ್ಕನೇ ಋಷಿ ಅಶ್ವಲಾಯ ಗೋತ್ರದ, ಕೋಸಲ ದೇಶದ ರಾಜನ ಮಗ.

ಐದನೆಯವ ವಿದರ್ಭ ದೇಶದ ರಾಜನ ಮಗ. ಈತ ಭಾರ್ಗವ ಗೋತ್ರದವನು. ಆರನೆಯ ಋಷಿ ಕತ್ಯನ ಮಗನಾದ ಕಬಂಧೀ. 'ಕಬಂಧೀ' ಎಂದರೆ ಇಂದ್ರಿಯ ನಿಗ್ರಹ ಮಾಡಿದವ ಎಂದರ್ಥ.

ಇಲ್ಲಿ "ತೇ ಹ ಏತೇ" ಎನ್ನುವಲ್ಲಿ 'ಹ-ಕಾರ'ಕ್ಕೆ ಬಹಳ ಮುಖ್ಯವಾದ ಅರ್ಥವಿದೆ. ಸಂಸ್ಕೃತದಲ್ಲಿ 'ಹ-ಕಾರ' ಸಂತೋಷ, ಆಶ್ಚರ್ಯ, ವಿಸ್ಮಯ, ಆನಂದವನ್ನು ವ್ಯಕ್ತಪಡಿಸುವ ಪದ. ಇಲ್ಲಿ ಅದನ್ನು ವಿಸ್ಮಯ ಮತ್ತು ಆನಂದಕಾರಕವಾಗಿ ಉಪಯೋಗಿಸಿದ್ದಾರೆ. ಇಷ್ಟು ದೊಡ್ಡ ವಿದ್ವಾಂಸರು, ತಿಳಿದುಕೊಳ್ಳಬೇಕು ಎನ್ನುವ ಅಭಿಲಾಷೆಯಿಂದ ಗುರುವನ್ನು ಅರಸಿ ಬಂದಿದ್ದಾರಲ್ಲಾ, ಇದೊಂದು ವಿಸ್ಮಯ ಮತ್ತು ಆನಂದ. ಈ ಋಷಿಗಳು ಸಾಮಾನ್ಯರಲ್ಲ. ಇವರು ವೇದದ ಅರ್ಥಚಿಂತನೆ ಮಾಡಿ, ವೇದೋಕ್ತ  ಕರ್ಮಾನುಷ್ಠಾನ ಮಾಡಿದವರು. ಇಲ್ಲಿ ಸಮಸ್ತ ವೇದದ ಭಗವದ್ ಪರತೆಯನ್ನು ತಿಳಿದುಕೊಳ್ಳಬೇಕು ಎನ್ನುವ ಆಸೆಯಿಂದ ಗುರುವನ್ನು ಹುಡುಕಿ ಬಂದ ಮಹಾತ್ಮರಿವರು.

ಗುರುಗಳ ಬಳಿ ಹೋಗುವಾಗ ಯಾರೂ ಬರಿಗೈಯಲ್ಲಿ ಹೋಗಬಾರದು. ಆದರೆ ಎಲ್ಲವನ್ನೂ ತ್ಯಾಗ ಮಾಡಿ ಕಾಡಿನಲ್ಲಿ ವಾಸ ಮಾಡುತ್ತಿರುವ ಪಿಪ್ಪಲಾದರಲ್ಲಿಗೆ ಧನ-ಕನಕ ಹಿಡಿದುಕೊಂಡು ಹೋಗಲು ಸಾಧ್ಯವಿಲ್ಲ. ಹಾಗಾಗಿ ಈ ಆರು ಜನ ಋಷಿಗಳು ಯಜ್ಞಕ್ಕೆ ಬೇಕಾಗುವ  ಕಟ್ಟಿಗೆಯನ್ನು ಹಿಡಿದುಕೊಂಡು ಮಹಾತ್ಮರಾದ ಪಿಪ್ಪಲಾದರಲ್ಲಿಗೆ, ಬಹಳ ಭಯಭಕ್ತಿಯಿಂದ ಬಂದು ಗೌರವಪೂರ್ವಕವಾಗಿ ನಮಸ್ಕರಿಸಿದರು.

'ಪಿಪ್ಪಲಾದ' ಎನ್ನುವುದು ವೇದ ಕಾಲದ ಋಷಿಗಳ ಹೆಸರು. ಇಂದು ಇಂತಹ ಹೆಸರು ಪ್ರಚಲಿತದಲ್ಲಿಲ್ಲ. ಪಿಪ್ಪಲಂ+ಆದ= ಪಿಪ್ಪಲಾದ. ಅಂದರೆ ಕರ್ಮವನ್ನು ದಾಟಿ ನಿಂತವರು ಎಂದರ್ಥ. ಇಲ್ಲಿ ಪಿಪ್ಪಲಾದರನ್ನು 'ಭಗವಂತಂ' ಎಂದು ಸಂಬೋಧಿಸಿರುವುದನ್ನು ಕಾಣುತ್ತೇವೆ. ಭಗವಾನ್ ಎನ್ನುವುದಕ್ಕೆ ವಿಶೇಷ ಅರ್ಥವಿದೆ. "ಉತ್ಪತ್ತಿಂ ಪ್ರಳಯಂಚೈವ ಭೂತಾನಾಂ ಆಗತಿಂ ಗತಿಮ್ | ವೇತ್ತಿ ವಿದ್ಯಾಂ ಅವಿದ್ಯಾಂಚ ಸ ವಾಚ್ಯೋ ಭಗವಾನ್ ಇತಿ |" ಪಿಪ್ಪಲಾದರು ಹುಟ್ಟು-ಸಾವಿನ, ಭೂತ-ಭವಿಷ್ಯದ, ಜ್ಞಾನ-ಅಜ್ಞಾನದ ರಹಸ್ಯ ತಿಳಿದವರಾದ್ದರಿಂದ, ಅವರನ್ನು ಇಲ್ಲಿ 'ಭಗವಂತಂ ಪಿಪ್ಪಲಾದ' ಎಂದು ಸಂಬೋಧಿಸಿದ್ದಾರೆ.

*ತಾನ್  ಹ ಸ ಋಷಿರುವಾಚ । ಭೂಯ ಏವ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ಸಂವತ್ಸರಂ ವತ್ಸ್ಯಥ । ಯಥಾಕಾಮಂ ಪ್ರಶ್ನಾನ್ ಪೃಚ್ಛತ । ಯದಿ ವಿಜ್ಞಾಸ್ಯಾಮಃ ಸರ್ವಂ ಹ ವೋ ವಕ್ಷ್ಯಾಮ ಇತಿ ॥೨॥*

ಬೇರೆಬೇರೆ ಜ್ಞಾನ ಜಿಜ್ಞಾಸೆಯಿಂದ ಬಂದ  ಆರು ಮಂದಿ ಋಷಿಗಳು: "ನಮ್ಮ ಪ್ರಶ್ನೆಗೆ ನೀವು ಉತ್ತರ ಕೊಡಬಲ್ಲಿರಿ ಎಂದು ತಿಳಿದು ನಿಮ್ಮಲ್ಲಿಗೆ ಬಂದಿದ್ದೇವೆ, ನಮಗೆ ನಿಮ್ಮಿಂದ ಉತ್ತರ ಬೇಕು" ಎಂದು ಪ್ರಾರ್ಥಿಸುತ್ತಾರೆ. ಇಲ್ಲಿ ಈ ಆರುಮಂದಿ ಋಷಿಗಳು ತೋರುತ್ತಿರುವ ಗೌರವ ಹಾಗೂ ಪಿಪ್ಪಲಾದರ ವಿನಯವನ್ನು 'ಹ-ಕಾರ' ಬಿಂಬಿಸುತ್ತದೆ. ತಮ್ಮ ಬಳಿ ಬಂದ ಈ ಆರು ಮಂದಿ ಋಷಿಗಳನ್ನು ಉದ್ದೇಶಿಸಿ ಪಿಪ್ಪಲಾದರು ಹೇಳುತ್ತಾರೆ: "ಒಂದು ಸಂವತ್ಸರ ನಮ್ಮ ಆಶ್ರಮದಲ್ಲಿ ಬ್ರಹ್ಮಚರ್ಯದಿಂದ, ತಪಸ್ಸನ್ನಾಚರಿಸಿಕೊಂಡು, ಶ್ರದ್ಧೆಯಿಂದ, ಸ್ವಾಧ್ಯಾಯದಲ್ಲಿ ತೊಡಗಿಕೊಂಡು ಇರಿ(ಇರುತ್ತೀರಿ). ಆ ನಂತರ ನಿಮಗೆ ಏನು ಪ್ರಶ್ನೆ ಕೇಳಬೇಕೋ ಅದನ್ನು ಕೇಳಿ. ನನಗೆ ತಿಳಿದಿದ್ದರೆ ಉತ್ತರಿಸುತ್ತೇನೆ" ಎಂದು. ಇಲ್ಲಿ ಒಂದು ವರ್ಷಗಳ ಕಾಲ ಆಶ್ರಮದಲ್ಲಿ ಇರುವಂತೆ ಪಿಪ್ಪಲಾದರು ತಮ್ಮ ಬಳಿಗೆ ಬಂದ ಶಿಷ್ಯರಲ್ಲಿ ಹೇಳುತ್ತಾರೆ. ಇದು ಗುರು ಶಿಷ್ಯರನ್ನು ಪರೀಕ್ಷಿಸುವ ಹಾಗೂ ಶಿಷ್ಯರಿಗೆ ತನ್ನನ್ನು ಪರೀಕ್ಷಿಸಲು ಅವಕಾಶ ಮಾಡಿಕೊಡುವ ಒಂದು ವಿಶಿಷ್ಠ ನಡೆ. ನಂತರ "ನನಗೆ ತಿಳಿದಿದ್ದರೆ ಹೇಳುತ್ತೇನೆ" ಎಂದು ಹೇಳಿದುದರ ಹಿಂದೆ  ಅಹಂಕಾರ ರಹಿತ ವಿನಯ ಅಡಗಿದೆ. ಇದು ಜ್ಞಾನಿಗಳ ವಿಸ್ಮಯ ಮತ್ತು ಗೌರವಾನ್ವಿತ ನಡೆ ಎನ್ನುವುದನ್ನು ಮರಳಿ ಹ-ಕಾರ ಬಿಂಬಿಸುತ್ತದೆ. ಹೀಗೆ ಗುರುಗಳು ಹೇಳಿದಂತೆ, ಆರು ಮಂದಿ ಋಷಿಗಳು ಶ್ರದ್ಧೆಯಿಂದ, ವೇದಾರ್ಥ ಚಿಂತನೆ ಮಾಡಿಕೊಂಡು, ಒಂದು ವರ್ಷ ಕಳೆಯುತ್ತಾರೆ. ಒಂದು ವರ್ಷದ ನಂತರ, ಪಿಪ್ಪಲಾದರ ಬಳಿ ಆರನೆಯ ಋಷಿ ಕತ್ಯನ ಮಗನಾದ ಕಬಂಧೀ ತನ್ನ

ಮೊದಲ ಪ್ರಶ್ನೆಯನ್ನು ನಿವೇದಿಸಿಕೊಳ್ಳುವುದರೊಂದಿಗೆ ಈ ಷಟ್ ಪ್ರಶ್ನ ಉಪನಿಷತ್ತಿನ ಉಪದೇಶ ಭಾಗ ಪ್ರಾರಂಭವಾಗುತ್ತದೆ.

ಪ್ರೀತಿಯ ಅಧ್ಯಾತ್ಮ ಬಂಧುಗಳೇ, ಈ ಕ್ಷಣದಲ್ಲಿ ನಮಗೆ ಈ ಆರು ಮಂದಿ ಋಷಿಗಳು ಕೇಳುವ ಪ್ರಶ್ನೆ ಯಾವುದು, ಅದಕ್ಕೆ ಪಿಪ್ಪಲಾದರು ಏನು ಉತ್ತರ ಕೊಡುತ್ತಾರೆ ಎನ್ನುವ ವಿಷಯ ತಿಳಿದಿಲ್ಲ. ಆದರೆ ನಮಗೆ ಒಂದು ವಿಷಯ ಮಾತ್ರ ಸ್ಪಷ್ಟವಾಗಿ ತಿಳಿದಿದೆ. ಇಲ್ಲಿ ಪ್ರಶ್ನೆ ಹಾಕುತ್ತಿರುವ ಋಷಿಗಳು ಸಾಮಾನ್ಯರಲ್ಲ. ಅವರೆಲ್ಲರೂ ಮಹಾ ವಿದ್ವಾಂಸರು. ಹೀಗಿರುವಾಗ ಅವರ ಪ್ರಶ್ನೆ ಅದೆಷ್ಟು ಮಹತ್ತಾಗಿರಬೇಕು? ಇಲ್ಲಿ ಗುರುವಿನ ಸ್ಥಾನದಲ್ಲಿ ನಿಂತಿರುವ ವಿನಯಮೂರ್ತಿ 'ಪಿಪ್ಪಲಾದರು' ಕರ್ಮವನ್ನೇ ದಾಟಿ ನಿಂತ ಮಹಾನ್ ಜ್ಞಾನಿ. ಇವರ ನಡುವೆ ನಡೆಯಲಿರುವ ಸಂವಾದವನ್ನು ಕೇಳಲು ನಮಗೆ ಅವಕಾಶ ಸಿಕ್ಕಿರುವುದು ನಮ್ಮ ಪುಣ್ಯ. ಬನ್ನಿ, ಈ ಅದ್ಭುತ ಜ್ಞಾನವನ್ನು ಗ್ರಹಿಸಲು ನಮಗೆ ಶಕ್ತಿ ಕೊಡು ಎಂದು ಆ ಭಗವಂತನಲ್ಲಿ ಬೇಡಿ, ಈ ಉಪದೇಶವನ್ನಾಲಿಸೋಣ.

*******

# ಅಥ ಪ್ರಥಮಃ ಪ್ರಶ್ನಃ

*ಅಥ ಕಬಂಧೀ ಕಾತ್ಯಾಯನ ಉಪೇತ್ಯ ಪಪ್ರಚ್ಛ ಭಗವನ್ ಕುತೋ ಹ ವಾ ಇಮಾಃ ಪ್ರಜಾಃ ಪ್ರಜಾಯಂತ ಇತಿ ॥೩॥*

ಪ್ರಶ್ನೆಯನ್ನು ಹೊತ್ತುತಂದ ಆರು ಮಂದಿ ಋಷಿಗಳಲ್ಲಿ ಕೊನೆಯವನಾದ ಕಬಂಧೀ ಕಾತ್ಯಾಯನ ಗುರುಗಳಿಗೆ ಗೌರವಪೂರ್ವಕ ನಮಿಸಿ, ತನ್ನ ಪ್ರಶ್ನೆಯನ್ನು ಅವರ ಮುಂದಿಡುತ್ತಾನೆ. ಆತ ಕೇಳುತ್ತಾನೆ: " ಭಗವನ್, ಈ ಸೃಷ್ಟಿ ಹೇಗೆ ನಿರ್ಮಾಣವಾಯಿತು? ಯಾರಿಂದ ಸೃಷ್ಟಿಯಾಯಿತು? ಏಕೆ ಸೃಷ್ಟಿಯಾಯಿತು?" ಎಂದು. ಇದು ಅತ್ಯಂತ ಮೂಲಭೂತ ಪ್ರಶ್ನೆ. ಈ ಜಗತ್ತು, ಸಮಸ್ತ ಜೀವಕೋಟಿ ಎಲ್ಲಿಂದ ಬಂದಿರುವುದು? ಪ್ರಳಯಕಾಲದಲ್ಲಿ ಎಲ್ಲವೂ ನಾಶವಾದಾಗ ಅದನ್ನು ಮರಳಿ ಸೃಷ್ಟಿ ಮಾಡುವವರು ಯಾರು? ಈ ಪ್ರಪಂಚದ ಮುಖ್ಯ ಮತ್ತು ಅವಾಂತರ ಕಾರಣ ಯಾರು? ಏತಕ್ಕಾಗಿ ಈ ಸೃಷ್ಟಿ ? ಇದು ಇಂದು ಎಲ್ಲರನ್ನೂ ಕಾಡುವ ಪ್ರಶ್ನೆ. ವಿಜ್ಞಾನದಲ್ಲಿ ಈ ಪ್ರಶ್ನೆಗೆ ಉತ್ತರವಿಲ್ಲ. ಇಂತಹ ಅಪೂರ್ವ ಪ್ರಶ್ನೆಗೆ ಪಿಪ್ಪಲಾದರ ಉತ್ತರ ಈ ಅಧ್ಯಾಯದ ಮುಂದಿನ ಭಾಗ.

*ತಸ್ಮೈ ಸ ಹೋವಾಚ ಪ್ರಜಾಕಾಮೋ ವೈ ಪ್ರಜಾಪತಿಃ ಸ ತಪೋಽತಪ್ಯತ ಸ ತಪಸ್ತಪ್ತ್ವಾ । ಮಿಥುನಮುತ್ಪಾದಯತೇ, ರಯಿಂ ಚ ಪ್ರಾಣಂ ಚೇತಿ ಏತೌ ಮೇ ಬಹುಧಾ ಪ್ರಜಾಃ ಕರಿಷ್ಯತ ಇತಿ ॥೪॥*

ಇಲ್ಲಿ "ತಸ್ಮೈ ಸಃ ಹ ಉವಾಚ" ಎನ್ನುವಲ್ಲಿ ಹ-ಕಾರ ಬಳಕೆಯಾಗಿದೆ. ಅಂದಿನ ಕಾಲದ ಯಾವ ವಿದ್ವಾಂಸರಿಗೂ ತಿಳಿಯದ ವಿಚಾರವನ್ನು, ಪಿಪ್ಪಲಾದರು ತಿಳಿದಿರುವುದು ಒಂದು ವಿಸ್ಮಯ ಮತ್ತು ಅದನ್ನು ಅವರಿಂದ ನಾವು ತಿಳಿದುಕೊಳ್ಳುವುದು ಒಂದು ಆನಂದ. ಈ ವಿಸ್ಮಯಾನಂದದ ಸಮನ್ವಯವನ್ನು ಹ-ಕಾರ ವ್ಯಕ್ತಪಡಿಸುತ್ತದೆ. ಇಲ್ಲಿ ಪಿಪ್ಪಲಾದರು ಹೇಳುತ್ತಾರೆ: " ಸಮಸ್ತ ಪ್ರಪಂಚದ ರಕ್ಷಕ, ಪ್ರಜಾಪಾಲಕ, ಜಗತ್ತಿನ ಸ್ವಾಮಿ, ಭಗವಂತ ಪ್ರತಿಯೊಂದು ಜೀವದ ವ್ಯಕ್ತಿತ್ವ ವಿಕಸನಕ್ಕಾಗಿ, ಜೀವ ಜ್ಞಾನ ಪಡೆದು ಮುಕ್ತಿ ಸೇರಲಿ ಎನ್ನುವ ಉದ್ದೇಶದಿಂದ-ಸೃಷ್ಟಿ ಮಾಡಲು ಬಯಸಿದ" ಎಂದು. ಇಲ್ಲಿ 'ವೈ' ಎನ್ನುವ ಪದ ಬಳಕೆಯಾಗಿದೆ. 'ಇದು ಸಮಸ್ತ ವೇದಜ್ಞರಿಗೆ, ಜ್ಞಾನಿಗಳಿಗೆ ತಿಳಿದ ವಿಷಯ. ಇದರಲ್ಲಿ ಗೊಂದಲವಿಲ್ಲ ಎನ್ನುವುದನ್ನು 'ವೈ' ಪ್ರತಿಬಿಂಬಿಸುತ್ತದೆ.

*ಆದಿತ್ಯೋ ಹ ವೈ ಪ್ರಾಣೋ ರಯಿರೇವ ಚಂದ್ರಮಾಃ । ರಯಿರ್ವಾ ಏತತ್ ಸರ್ವಂ ಯನ್ಮೂರ್ತಂ ಚಾಮೂರ್ತಂ ಚ ತಸ್ಮಾನ್ಮೂರ್ತಿರೇವ ರಯಿಃ ॥೫॥*

ಜೀವಗಳ ಸೃಷ್ಟಿಗಾಗಿ ಭಗವಂತ ಮೊದಲು ಬ್ರಹ್ಮ-ವಾಯು(ಪ್ರಾಣಃ) ಮತ್ತು ಸರಸ್ವತಿ-ಭಾರತಿ(ರಯಿ)ಯರನ್ನು ಸೃಷ್ಟಿ ಮಾಡಿದ. ಪ್ರಾಣ-ಭಾರತಿಯರಲ್ಲಿ ಭಗವಂತ ಅಂತರ್ಯಾಮಿಯಾಗಿ ಕುಳಿತು, ಸೃಷ್ಟಿ ವಿಸ್ತಾರಕ್ಕೆ ಸೂರ್ಯ-ಚಂದ್ರರನ್ನು ಸೃಷ್ಟಿಮಾಡಿ, ಸೂರ್ಯ-ಚಂದ್ರರೊಳಗೆ ಕುಳಿತ. ಇದೇ ಕಾಲದ ಸೃಷ್ಟಿ. [ಇಲ್ಲಿ ಕಾಲದ ಸೃಷ್ಟಿ ಎಂದರೆ ಕಾಲದ ಘಟಕಗಳ ಸೃಷ್ಟಿ. ಕಾಲದ ವಿಭಾಜಕವಾಗಿ ಸೂರ್ಯ-ಚಂದ್ರರ ಸೃಷ್ಟಿ]. ಹೀಗೆ ಸೃಷ್ಟಿಯಾದ ಸೂರ್ಯನ ಒಳಗೆ ಪ್ರಾಣ, ಚಂದ್ರನ ಒಳಗೆ ಭಾರತಿ ನಿಂತು, ಹಗಲು ರಾತ್ರಿಗಳಲ್ಲಿ ಸೃಷ್ಟಿ ವಿಸ್ತಾರವಾಯಿತು. ಪ್ರಾಣ-ಭಾರತಿಯರ ಒಳಗೆ ಲಕ್ಷ್ಮೀ-ನಾರಾಯಣರು ನಿಂತು, ಈ ಸೃಷ್ಟಿಗೆ ಬೇಕಾದ ಶಕ್ತಿಪಾತ ಮಾಡಿದರು.

ಪಂಚಭೂತಗಳಲ್ಲಿ ಎರಡು ವಿಧ. ಒಂದು ಮೂರ್ತ(ಆಕಾರ ಉಳ್ಳದ್ದು) ಮತ್ತು ಇನ್ನೊಂದು ಅಮೂರ್ತ(No Form). ಮಣ್ಣು-ನೀರು-ಬೆಂಕಿ ಮೂರ್ತ ಹಾಗೂ ಗಾಳಿ ಮತ್ತು ಆಕಾಶ ಅಮೂರ್ತ. ಮಣ್ಣು-ನೀರು-ಬೆಂಕಿಯಲ್ಲಿ ಭಾರತಿ ತುಂಬಿ, ಗಾಳಿ-ಆಕಾಶದಲ್ಲಿ ಪ್ರಾಣದೇವರು ತುಂಬಿ, ಪಂಚಭೂತಗಳಿಂದ ಈ ಪ್ರಪಂಚ ಸೃಷ್ಟಿ ಮಾಡಿದರು.

ಓದುಗರು ಇಲ್ಲಿ ಒಂದು ಅಂಶವನ್ನು ತಿಳಿದಿರಬೇಕು. ನಮಗೆ ತಿಳಿದಂತೆ ಪ್ರಳಯ ಕಾಲದಲ್ಲಿ ಎಲ್ಲವೂ ಭಗವಂತನ ಉದರದಲ್ಲಿದ್ದು, ಸೃಷ್ಟಿಕಾಲದಲ್ಲಿ ಭಗವಂತನ ನಾಭಿಯಿಂದ ಬ್ರಹ್ಮಾಂಡ ಸೃಷ್ಟಿಯಾಯಿತು. ಇದು ಮೊತ್ತಮೊದಲ ಸೂಕ್ಷ್ಮಸೃಷ್ಟಿ. ಆನಂತರ ಇನ್ನೂ ಅನೇಕ ಹಂತಗಳಿಂದ ಸ್ಥೂಲ ಸೃಷ್ಟಿಯ ನಿರ್ಮಾಣವಾಯಿತು. ಚತುರ್ಮುಖ ಬ್ರಹ್ಮನನ್ನು ನೋಡಿದರೆ, ಸೂಕ್ಷ್ಮದಿಂದ ಸ್ಥೂಲದ ತನಕ ಆತನಿಗೆ ಮೂರು ಹುಟ್ಟು. ಈ ರೀತಿ ಅನೇಕ ಹಂತಗಳಲ್ಲಿ ಸೃಷ್ಟಿ ನಿರ್ಮಾಣ ಕಾರ್ಯವನ್ನು ಭಗವಂತ ಮಾಡಿರುವುದರಿಂದ, ಅಧ್ಯಾತ್ಮ ಸಾಹಿತ್ಯದಲ್ಲಿ ಒಂದೊಂದು ಕಡೆ ಒಂದೊಂದು ವಿವರಣೆಯನ್ನು ಕಾಣುತ್ತೇವೆ. ಉದಾಹರಣೆಗೆ ಒಂದೆಡೆ ಚತುರ್ಮುಖ ಭಗವಂತನ ನಾಭಿಯಿಂದ ಜನಿಸಿದ ಎಂದರೆ, ಇನ್ನೊಂದೆಡೆ ಚತುರ್ಮುಖನನ್ನು ನಾನು ನನ್ನ ನೆತ್ತಿಯಿಂದ ಹೆತ್ತೆ ಎನ್ನುತ್ತಾಳೆ ಲಕ್ಷ್ಮಿ. ಒಂದು ಕಡೆ ಚತುರ್ಮುಖನಿಂದ ಈ ಸೃಷ್ಟಿ ವಿಸ್ತಾರವಾಯಿತು ಎಂದರೆ, ಇನ್ನೊಂದೆಡೆ ಶಿವನಿಂದ ಈ ಸೃಷ್ಟಿ ವಿಸ್ತಾರವಾಯಿತು ಎಂದಿದೆ. ಇದು ನಮಗೆ ಅರ್ಥವಾಗಬೇಕಾದರೆ ನಾವು ಭಗವಂತನ ಸೃಷ್ಟಿ ಪ್ರಕ್ರಿಯೆಯ ವಿವಿಧ ಹಂತಗಳನ್ನು (ಸೂಕ್ಷ್ಮದಿಂದ-ಸ್ಥೂಲದ ತನಕ) ವಿವರವಾಗಿ ತಿಳಿಯಬೇಕು. ಇಲ್ಲದಿದ್ದರೆ ಎಲ್ಲವೂ ಗೊಂದಲ. ಉದಾಹರಣೆಗೆ ಒಂದು ಮಗು ಹುಟ್ಟಿತು ಎಂದರೆ –ಮೇಲ್ನೋಟಕ್ಕೆ ಆ ಮಗುವಿನ ಸೃಷ್ಟಿಕರ್ತೃ ಮಗುವಿನ ತಂದೆ-ತಾಯಿ. ಆದರೆ ಆ ಸೃಷ್ಟಿಯ ಹಿಂದೆ ಶಿವ-ಪಾರ್ವತಿಯರಿದ್ದಾರೆ, ಪ್ರಾಣ-ಭಾರತಿಯರಿದ್ದಾರೆ, ಬ್ರಹ್ಮ-ಸರಸ್ವತಿಯರಿದ್ದಾರೆ, ಎಲ್ಲಕ್ಕೂ ಮೂಲದಲ್ಲಿ ಲಕ್ಷ್ಮೀ-ನಾರಾಯಣರಿದ್ದಾರೆ. ಬನ್ನಿ, ಈ ಹಿನ್ನೆಲೆಯೊಂದಿಗೆ ಪಿಪ್ಪಲಾದರ ಉಪದೇಶವನ್ನಾಲಿಸೋಣ.

*ಅಥಾऽದಿತ್ಯ ಉದಯನ್ ಯತ್ ಪ್ರಾಚೀಂ ದಿಶಂ ಪ್ರವಿಶತಿ ತೇನ ಪ್ರಾಚ್ಯಾನ್ ಪ್ರಾಣಾನ್ ರಶ್ಮಿಷು ಸನ್ನಿಧತ್ತೇ । ಯದ್ ದಕ್ಷಿಣಾಂ ಯತ್ ಪ್ರತೀಚೀಂ ಯದುದೀಚೀಂ ಯದಧೋ ಯದೂರ್ಧ್ವಂ ಯದಂತರಾ ದಿಶೋ ಯತ್ ಸರ್ವಂ ಪ್ರಕಾಶಯತಿ ತೇನ ಸರ್ವಾನ್ ಪ್ರಾಣಾನ್ ರಶ್ಮಿಷು ಸನ್ನಿಧತ್ತೇ ॥೬॥*

*ಸ ಏಷ ವೈಶ್ವಾನರೋ ವಿಶ್ವರೂಪಃ ಪ್ರಾಣೋऽಗ್ನಿರುದಯತೇ ॥೭॥*

ಸೃಷ್ಟಿ ನಿರ್ಮಾಣ ಕಾರ್ಯದಲ್ಲಿ ದಿಕ್ಕುಗಳ ದೇವತೆಗಳ ಪಾತ್ರವನ್ನು ಇಲ್ಲಿ ವಿವರಿಸಲಾಗಿದೆ. ನಮಗೆ ತಿಳಿದಂತೆ ಇಂದ್ರ ಪೂರ್ವ ದಿಕ್ಕಿನ ದೇವತೆ, ಅಗ್ನಿ ಆಗ್ನೇಯ ದಿಕ್ಕಿನ ದೇವತೆ, ಯಮ ದಕ್ಷಿಣ ದಿಕ್ಕಿನ ದೇವತೆ, ನಿರ್ಋತಿ ನೈಋತ್ಯ ದಿಕ್ಕಿನ ದೇವತೆ, ಪಶ್ಚಿಮಕ್ಕೆ ವರುಣ, ವಾಯುವ್ಯಕ್ಕೆ ಪ್ರವಹವಾಯು, ಉತ್ತರಕ್ಕೆ ಚಂದ್ರ, ಈಶಾನ್ಯಕ್ಕೆ ಈಶಾನ(ಶಿವ) ದೇವತೆ. ಅಧೋಲೋಕ(ಕೆಳಗೆ)ಕ್ಕೆ ಶೇಷ ಮತ್ತು ಮಿತ್ರ ದೇವತೆಗಳಾದರೆ, ಊರ್ಧ್ವ(ಮೇಲೆ)ದಿಕ್ಕಿಗೆ ಗರುಡ-ಕಾಮರು ದೇವತೆಗಳು.

ಸೂರ್ಯಮಂಡಲದಿಂದ ದಶದಿಕ್ಕುಗಳಿಗೂ ಸೂರ್ಯಪ್ರಕಾಶ ಹರಡಿ, ಆ ದಿಕ್ಕಿನ ದೇವತಗಳ ಮೇಲೆ ಭಗವಂತನ ಶಕ್ತಿಪಾತವಾಗುತ್ತದೆ. ಇಲ್ಲಿ ಹೇಳಿರುವ ಪ್ರತಿಯೊಬ್ಬ ದೇವತೆಗಳೂ ಪತ್ನಿ ಸಮೇತರಾಗಿ ತಮ್ಮತಮ್ಮ ದಿಕ್ಕುಗಳಲ್ಲಿ ನಿಂತು, ಭಗವಂತನಿಂದ ಶಕ್ತಿಪಡೆದು, ಭಗವಂತನ ಇಚ್ಛೆಗನುಗುಣವಾಗಿ ಸೃಷ್ಟಿ ವಿಸ್ತಾರದಲ್ಲಿ ಪಾಲ್ಗೊಳ್ಳುತ್ತಾರೆ. ಇಂದ್ರ-ಶಚಿ, ಅಗ್ನಿ-ಸ್ವಾಹ, ಯಮ-ಶ್ಯಾಮಲ, ನಿರ್ಋತಿ-ಧೀರ್ಘಾ, ವರುಣ-ಗಂಗಾ, ಪ್ರವಹವಾಯು-ಪ್ರಾವಹೀ, ಚಂದ್ರ-

ರೋಹಿಣಿ, ಈಶಾನ-ಪಾರ್ವತಿ, ಶೇಷ-ವಾರುಣಿ, ಮಿತ್ರ-ರೇವತಿ, ಗರುಡ-ಸುಪರ್ಣಿ, ಮನ್ಮಥ-ರತಿ ಹೀಗೆ ಇಪ್ಪತ್ನಾಲ್ಕು ದೇವತೆಗಳಲ್ಲಿ ಭಗವಂತನ ಶಕ್ತಿಪಾತವಾಗಿ, ಅವರ ಮುಖೇನ ಪ್ರಪಂಚಕ್ಕೆ ಶಕ್ತಿ ಹರಿದುಬಂದು ಪ್ರಪಂಚ ನಿರ್ಮಾಣವಾಯಿತು. ಸರ್ವಚೇಷ್ಟಕನಾದ ಭಗವಂತ ವಿಶ್ವರೂಪನಾಗಿ ಬ್ರಹ್ಮಾಂಡದಲ್ಲೂ, ವೈಶ್ವಾನರನಾಗಿ ಎಲ್ಲಾ ಪಿಂಡಾಂಡದಲ್ಲೂ, ಪ್ರಾಣಾಂತರ್ಗತನಾಗಿ ತುಂಬಿದ. ವೇದದಲ್ಲಿ ಈ ವಿವರಣೆ ಬಂದಿರುವುದನ್ನು ಇಲ್ಲಿ ಪಿಪ್ಪಲಾದರು ವಿವರಿಸುತ್ತಾರೆ.

*ತದೇತದೃಚಾಽಭ್ಯುಕ್ತಮ್-*

ವಿಶ್ವರೂಪಂ ಹರಿಣಂ ಜಾತವೇದಸಂ ಪರಾಯಣಂ ಜ್ಯೋತಿರೇಕಂ ತಪಂತಮ್ ।
ಸಹಸ್ರರಶ್ಮಿಃ ಶತಧಾ ವರ್ತಮಾನಃ ಪ್ರಾಣಃ ಪ್ರಜಾನಾಮುದಯತ್ಯೇಷ ಸೂರ್ಯಃ ॥೮॥

ಇದನ್ನು ಋಗ್ವೇದದಲ್ಲೇ ಹೇಳಿದ್ದಾರೆ ["ತದೇತದೃಚಾಽಭ್ಯುಕ್ತಮ್"]:
ಉದಯತಿ ಏಷ ಸೂರ್ಯಃ ಎನ್ನುವುದರ ಅರ್ಥ ನಮಗೆಲ್ಲರಿಗೂ ತಿಳಿದಿದೆ. ಆದರೆ ಇಲ್ಲಿ "ಪ್ರಾಣಃ ಪ್ರಜಾನಾಮ್ ಉದಯತಿ ಏಷ ಸೂರ್ಯಃ" ಎಂದಿದೆ. ಅಂದರೆ ಸೂರ್ಯನ ಮೂಲಕ ಸೌರಶಕ್ತಿ ಹರಿದುಬರುವುದು ಆತನ ಅಂತರ್ಯಾಮಿಯಾದ ಪ್ರಾಣನಿಂದ. ಈ ಪ್ರಾಣನಿಗೆ ಚೈತನ್ಯ ಕೊಡುವವನು ಆತನ ಅಂತರ್ಯಾಮಿ ಭಗವಂತ. ಆದ್ದರಿಂದ ಸೂರ್ಯೋದಯ ಎಂದರೆ ಸೂರ್ಯ, ಆತನ ಒಳಗೆ ಪ್ರಾಣ, ಪ್ರಾಣನ ಒಳಗೆ ನಾರಾಯಣ. ಇದೇ ಸಮಸ್ತ ಜೀವಜಾತದ ಪ್ರಾಣಶಕ್ತಿ, ಇಡೀ ವಿಶ್ವವನ್ನು ಬದುಕಿಸುವ ಶಕ್ತಿ. ಹೀಗಾಗಿ ಮುಂಜಾನೆ ಎದ್ದು ಸೂರ್ಯನನ್ನು ಕಾಣುವುದು ಎಂದರೆ ನಮ್ಮ ಪ್ರಾಣಶಕ್ತಿ ಭಗವಂತನನ್ನು ಕಾಣುವುದು. ಆದ್ದರಿಂದ ಸೂರ್ಯನನ್ನು ಸೂರ್ಯನಾರಾಯಣ ಎಂದೂ ಕರೆಯುತ್ತಾರೆ. ಗಾಯತ್ರಿ ಜಪ ಮಾಡುವವರು ಪ್ರಾರ್ಥನೆ ಮಾಡುವುದು ಗಾಯತ್ರಿ ಪ್ರತಿಪಾದ್ಯ ಸೂರ್ಯನಾರಾಯಣನನ್ನು. "ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋನಃ ಪ್ರಚೋದಯಾತ್" ಎಂದರೆ: "ಸೂರ್ಯನಲ್ಲಿರುವ ಜ್ಞಾನಾನಂದಮಯವಾದ ಬೆಳಕು ನಮಗೆಲ್ಲರಿಗೂ ಒಳ್ಳೆಯ ಬುದ್ಧಿ ಕೊಟ್ಟು, ನಾವು ಪ್ರಾಮಾಣಿಕವಾಗಿ ಬದುಕುವಂತೆ ನಮ್ಮನ್ನು ಪಾಲಿಸಲಿ" ಎನ್ನುವ ಪ್ರಾರ್ಥನೆ".
ಸೂರ್ಯನಲ್ಲಿರುವ ಭಗವದ್ ಶಕ್ತಿಯನ್ನು "ವಿಶ್ವರೂಪಂ ಹರಿಣಂ ಜಾತವೇದಸಮ್" ಎಂದಿದ್ದಾರೆ. ಅಂದರೆ: ಇದು ಇಡೀ ವಿಶ್ವಕ್ಕೆ ರೂಪಕೊಟ್ಟ ಶಕ್ತಿ. ಸೂರ್ಯನಿಗಿಂತ ಮೊದಲು ಏನೂ ಇರಲಿಲ್ಲ. ಸೂರ್ಯನೊಳಗೆ ತುಂಬಿದ ಭಗವಂತ ಈ ಪ್ರಪಂಚಕ್ಕೆ ಆಕಾರ ಕೊಟ್ಟು ಬಿಂಬರೂಪನಾಗಿ ನಿಂತ.
ಇಡೀ ವಿಶ್ವಕ್ಕೆ ಕೇಂದ್ರ ಸ್ಥಾನೀಯನಾಗಿ ಸೂರ್ಯನಿದ್ದಾನೆ. ಸೂರ್ಯನಲ್ಲಿ ಪ್ರಾಣ-ನಾರಾಯಣರಿದ್ದಾರೆ. ಈ ಶಕ್ತಿ ಕೇಂದ್ರವನ್ನು ಇಲ್ಲಿ 'ಹರಿಣಮ್' ಎಂದು ಕರೆದಿದ್ದಾರೆ. ಅಂದರೆ: ಕೊಳೆಯ, ದೋಷದ ಮತ್ತು ಕತ್ತಲಿನ ಸ್ಪರ್ಶವೇ ಇಲ್ಲದ, ಸರ್ವರಿಗೂ ಆಶ್ರಯವಾದ, ಸರ್ವೋತ್ತಮ ಬೆಳಕು ಎಂದರ್ಥ. ಇಂತಹ ಬೆಳಕು ಇನ್ನೊಂದಿಲ್ಲ. ಇದು ಎಲ್ಲಾ ಬೆಳಕುಗಳ ಮೂಲ ಬೆಳಕು. ಹೀಗೆ ವಿಶ್ವರೂಪನಾಗಿ ಸೂರ್ಯಮಂಡಲದಲ್ಲಿ ಶಕ್ತಿಯಾಗಿ ನಿಂತಿರುವ ಭಗವಂತ "ಜಾತವೇದಸಮ್". ಅಂದರೆ ಎಲ್ಲವನ್ನೂ ತಿಳಿದ ಸರ್ವಜ್ಞ.
ಎಲ್ಲಾ ಬೆಳಕುಗಳ ಮೂಲ ಬೆಳಕಾದ ಭಗವಂತನಿಗೆ ಸಾವಿರಾರು ಕಿರಣಗಳು. ಭಗವಂತನ ಮುಖೇನ ಪ್ರಾಣ-ಸೂರ್ಯರಿಗೂ ಸಾವಿರಾರು ಕಿರಣಗಳು. ಇದಕ್ಕಾಗಿ ಸೂರ್ಯ-ಪ್ರಾಣರನ್ನೂ 'ಸಹಸ್ರರಶ್ಮಿಃ' ಎಂದು ಕರೆಯುತ್ತಾರೆ. ಇಲ್ಲಿ "ಶತಧಾ ವರ್ತಮಾನಃ" ಎಂದಿದೆ. ಇದೊಂದು ಅಪೂರ್ವ ವಿಷಯ. ಪ್ರಾಚೀನರು ಸೂರ್ಯ ಕಿರಣವನ್ನು ನೂರು

ವಿಭಾಗವನ್ನಾಗಿ ಮಾಡಿದ್ದರು. ಆದರೆ ಆ ವಿಭಾಗದ ಬಗ್ಗೆ ವಿವರ ಎಲ್ಲಿಯೂ ದೊರೆತಿಲ್ಲ. ಭಗವಂತನಿಗೆ ನೂರಾರು ರೂಪಗಳು. ಮೂಲರೂಪ, ಭೂಮಿಯಲ್ಲಿ ಅವತರಿಸಿದ ರೂಪ, ಪ್ರತಿಯೊಬ್ಬರ ಅಂತರ್ಯಾಮಿಯಾಗಿ ಬಿಂಬರೂಪ, ಹೀಗೆ ನೂರಾರು ರೂಪಗಳಲ್ಲಿ ಭಗವಂತ ತುಂಬಿದ್ದಾನೆ. ಅದೇ ರೀತಿ ಪ್ರಾಣದೇವರು ಎಲ್ಲರ ಪ್ರಾಣಶಕ್ತಿಯಾಗಿ ಅನೇಕ ರೂಪಗಳಿಂದ ತುಂಬಿದ್ದರೆ, ಸೂರ್ಯ ಬೇರೆಬೇರೆ ಕಾಲಗಳಲ್ಲಿ ಬೇರೆಬೇರೆ ರೂಪಗಳಿಂದ ಕಾಣಿಸಿಕೊಳ್ಳುತ್ತಾನೆ.

ಇಲ್ಲಿ ನಾವು ಗಮನಿಸಬೇಕಾದ ಒಂದು ವಿಚಾರವೇನೆಂದರೆ: ಪಿಪ್ಪಲಾದರು "ಇದನ್ನು ಋಗ್ವೇದದ ಋಷಿಗಳು ಹೇಳಿದ್ದಾರೆ, ಅವರು ಕಂಡ ಸತ್ಯವನ್ನು ನಾನು ಹೇಳುತ್ತಿದ್ದೇನೆ" ಎಂದಿದ್ದಾರೆ. ಅಧ್ಯಾತ್ಮದಲ್ಲಿ ಯಾವಾಗಲೂ ನನ್ನ ಅನಿಸಿಕೆ ಎಂದು ಹೇಳುವುದಾಗಲೀ, ನನಗೆ ಇದು ಸರಿ ಕಾಣಿಸುತ್ತದೆ ಎನ್ನುವುದು ಸರಿಯಲ್ಲ. ಏಕೆಂದರೆ ನಮ್ಮ ಅನಿಸಿಕೆಯೂ ಸತ್ಯವೂ ಒಂದೇ ಆಗಿರಬೇಕೆಂದೇನೂ ಇಲ್ಲಾ. ನಮಗೆ ಅಸತ್ಯವೂ ಇಷ್ಟವಾಗಬಹುದು. ಆದ್ದರಿಂದ ಅಧ್ಯಾತ್ಮ ಸಾಧನೆಯಲ್ಲಿ ನಾವು ನಿಜವಾದ ಜ್ಞಾನಿಗಳು ಏನನ್ನು ಕಂಡಿದ್ದಾರೆ, ಕಂಡು ಏನನ್ನು ದಾಖಲೆ ಮಾಡಿದ್ದಾರೆ, ಅದರ ಆಧಾರದಲ್ಲಿ ಸತ್ಯವನ್ನು ಕಾಣಲು ಪ್ರಯತ್ನಿಸಬೇಕು.

*ಸಂವತ್ಸರೋ ವೈ ಪ್ರಜಾಪತಿಸ್ತಸ್ಯಾಯನೇ ದಕ್ಷಿಣಂ ಚೋತ್ತರಂ ಚ । ತದ್ ಯೇ ಹ ವೈ ತದಿಷ್ಟಾಪೂರ್ತೇ ಕೃತಮಿತ್ಯುಪಾಸತೇ ತೇ ಚಾಂದ್ರಮಸಮೇವ ಲೋಕಮಭಿಜಯಂತೇ । ತ ಏವ ಪುನರಾವರ್ತಂತೇ ತಸ್ಮಾದೇತ ಋಷಯಃ ಪ್ರಜಾಕಾಮಾ ದಕ್ಷಿಣಂ ಪ್ರತಿಪದ್ಯಂತೇ । ಏಷ ವೈ ರಯಿರ್ಯಃ ಪಿತೃಯಾಣಃ ॥೯॥*

ಸೂರ್ಯ-ಚಂದ್ರರಿಂದ ಕಾಲದ ಘಟಕಗಳು ನಿರ್ಮಾಣವಾದವು. ಸೂರ್ಯ ಮೇಷದಿಂದ ಮೀನದ ತನಕ ಸಂಕ್ರಮಣ ಮಾಡಿದಾಗ ಅದು ಒಂದು ವರ್ಷವಾಯಿತು. ಇದು ~೩೬೫.೨೫ ದಿನಗಳಿಂದ ಕೂಡಿದ ಸೌರವರ್ಷ. ಇಂದು ವಿಶ್ವದಲ್ಲಿ ಆಚರಣೆಯಲ್ಲಿರುವ ಸಂವತ್ಸರ ಈ ಸೌರಸಂವತ್ಸರ. ಇಲ್ಲಿ ೩೬೫ ದಿನಗಳಿಗೆ ಒಂದು ವರ್ಷ ಹಾಗೂ ನಾಲ್ಕು ವರ್ಷಕ್ಕೊಮ್ಮೆ ಒಂದು ಅಧಿಕ ದಿನ.

ಅದೇ ರೀತಿ ಚಾಂದ್ರಮಾನದ ಪ್ರಕಾರ ಚೈತ್ರದಿಂದ ಪಾಲ್ಗುಣದ ತನಕ ೩೫೫ ದಿನಗಳು. ಇಲ್ಲಿ ಕಡಿಮೆಯಾದ ಹತ್ತು ದಿನಗಳನ್ನು ಮೂರು ವರ್ಷಕ್ಕೊಮ್ಮೆ ಒಂದು ಅಧಿಕ ಮಾಸವನ್ನಾಗಿ ಮಾಡಿ ಹೊಂದಾಣಿಕೆ ಮಾಡುತ್ತಾರೆ. ಒಟ್ಟಿನಲ್ಲಿ ಇಡೀ ವರ್ಷದ ಪರಿಗಣನೆಗೆ ನಮಗೆ ಮುಖ್ಯವಾದ ಶಕ್ತಿಗಳು ಸೂರ್ಯ ಮತ್ತು ಚಂದ್ರ. ಎಲ್ಲವೂ ಸೂರ್ಯ ಚಂದ್ರರನ್ನು ಆಧರಿಸಿಕೊಂಡಿದೆ. ಆದ್ದರಿಂದ ಸೂರ್ಯನಲ್ಲಿ ಸನ್ನಿಹಿತನಾಗಿರುವ ಭಗವಂತ ಕಾಲಪುರುಷನಾಗಿ ಸಂವತ್ಸರದಲ್ಲಿ ಸನ್ನಿಹಿತನಾದ. ಒಂದು ಸಂವತ್ಸರದಲ್ಲಿ ಎರಡು ಅಯನಗಳು. ಉತ್ತರಾಯಣ ಮತ್ತು ದಕ್ಷಿಣಾಯಣ. ಸೂರ್ಯನಲ್ಲಿ ಸನ್ನಿಹಿತರಾಗಿರುವ ಪ್ರಾಣದೇವರು ಉತ್ತರಾಯಣದಲ್ಲಿ ಸನ್ನಿಹಿತರಾದರೆ, ಚಂದ್ರನಲ್ಲಿ ಸನ್ನಿಹಿತಳಾಗಿರುವ ಭಾರತಿ ದಕ್ಷಿಣಾಯಣದಲ್ಲಿ ಸನ್ನಿಹಿತಳಾಗಿದ್ದಾಳೆ.

ಮೇಲೆ ಹೇಳಿದ ಎರಡು ಅಯನಗಳಲ್ಲಿ, ದಕ್ಷಿಣಾಯಣದಲ್ಲಿ ,ಇಷ್ಟಾ-ಪೂರ್ತಾದ ಮೂಲಕ, ಐಹಿಕ ಫಲಕಾಮನೆಯಿಂದ ಕರ್ಮಾನುಷ್ಠಾನ ಮಾಡಿದವನು, ಚಂದ್ರಲೋಕವನ್ನು ಪಡೆಯುತ್ತಾನೆ. ಇದು ಮೋಕ್ಷ ಸಾಧನವಲ್ಲ. ಏಕೆಂದರೆ ಚಂದ್ರಲೋಕ ದೇವತೆಗಳ ಲೋಕ. ಅಲ್ಲಿಂದ ನಾವು ನಮ್ಮ ಪುಣ್ಯಫಲ ಮುಗಿದ ಮೇಲೆ ಮರಳಿ ಈ ಸಂಸಾರಕ್ಕೆ ಹಿಂತಿರುಗಬೇಕಾಗುತ್ತದೆ. ಇದು ತಾಯಿ ಭಾರತಿಯ ಸೃಷ್ಟಿ ವಿಸ್ತಾರದ ಪ್ರಚೋದನೆ. ಇಲ್ಲಿ ಹೇಳಿರುವ ಚಂದ್ರಲೋಕ ಎಂದರೆ ಚಂದ್ರ ಗ್ರಹವಲ್ಲ. ಇದು ದೇವತೆಗಳಿರುವ ಸೂಕ್ಷ್ಮಲೋಕ.

ಇಲ್ಲಿ ಹೇಳಲಾದ 'ಇಷ್ಟಾ-ಪೂರ್ತ' ಅನ್ನುವ ಪದಗಳಿಗೆ ವಿಶಿಷ್ಟ ಅರ್ಥವಿದೆ. ಇಷ್ಟಾ ಎಂದರೆ ನಮ್ಮ ವೈಯಕ್ತಿಕ ಅಭಿವೃದ್ಧಿಗೆ ಕಾರಣವಾದ ಪುಣ್ಯಕರ್ಮ. [ಜಪ, ಅನುಷ್ಠಾನ, ಯಜ್ಞ, ವ್ರತ, ಇತ್ಯಾದಿ ನಮಗೆ ಇಷ್ಟವಾಗಿ, ನಾವು ಮಾಡುವ ವೈಯಕ್ತಿಕ ಸಾಧನೆ] ಪೂರ್ತಾ ಎಂದರೆ: ಸಮಾಜದ ಪೂರ್ಣತೆಗೆ ಉಪಯೋಗಬೀಳುವ ಕರ್ಮ. [ಆಸ್ಪತ್ರೆ, ದೇವಸ್ಥಾನ, ಶಾಲೆ, ಇತ್ಯಾದಿಯನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಕಟ್ಟಿಸುವುದು, ಸಾರ್ವಜನಿಕರಿಗಾಗಿ ಕೆರೆ ಬಾವಿ ತೋಡಿಸುವುದು ಇತ್ಯಾದಿ]. ಒಟ್ಟಿನಲ್ಲಿ ಹೇಳಬೇಕೆಂದರೆ ಪ್ರವೃತ್ತಿಮಾರ್ಗದಲ್ಲಿ ಆಸಕ್ತಿ ಉಳ್ಳವರು ದಕ್ಷಿಣಾಯಣದಲ್ಲಿ ಕರ್ಮ ಮಾಡಿ ಚಂದ್ರಲೋಕವನ್ನು ಪಡೆಯುತ್ತಾರೆ. ಈ ಮಾರ್ಗವನ್ನು ಪಿತೃಗಳ ದಾರಿ ಎನ್ನುತ್ತಾರೆ.

*ಅಥೋತ್ತರೇಣ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ವಿದ್ಯಯಾಽಽತ್ಮಾನಮನ್ವಿಷ್ಯಾಽದಿತ್ಯಮಭಿಜಯಂತೇ । ಏತದ್ವೈ ಪ್ರಾಣಾನಾಮಾಯತನಮೇತದಮೃತಮೇತದ್ಭಯಮೇತತ್ ಪರಾಯಣಮೇತಸ್ಮಾನ್ನ ಪುನರಾವರ್ತಂತ ಇತ್ಯೇಷ ನಿರೋಧಃ ॥೧೦॥*

ಉತ್ತರಾಯಣದಲ್ಲಿ ತಪಸ್ಸು ಮಾಡುವವರು ಬ್ರಹ್ಮಚರ್ಯಪಾಲನೆ ಮಾಡುತ್ತಾ, ಸದಾ ಸತ್ಯದ ಬಗೆಗೆ ಚಿಂತನೆ ಮಾಡುತ್ತಾರೆ. ಇಂದ್ರಿಯ ನಿಗ್ರಹ, ನಿರಂತರ ವೇದಾಧ್ಯಯನ ಮಾಡುತ್ತಾ, ಶ್ರದ್ಧೆಯಿಂದ, ಆಸ್ತಿಕ್ಯಪ್ರಜ್ಞೆಯಿಂದ, ಯಥಾರ್ಥ ಜ್ಞಾನ ಪಡೆದು, ನಿಜವಾದ ಅರಿವಿನಿಂದ, ಆತ್ಮನನ್ನು ತಿಳಿದು, ಪರಮಾತ್ಮನನ್ನು ಕಾಣುತ್ತಾರೆ. ನಾವು ಮೊದಲು ನಮ್ಮನ್ನು ನಾವು ತಿಳಿದುಕೊಳ್ಳಬೇಕು. ಆಗ ನಮ್ಮ ಅಂತರ್ಯಾಮಿಯಾದ ಭಗವಂತ ತಿಳಿಯುತ್ತಾನೆ. ಇದು ಎಷ್ಟೋ ಜನ್ಮಗಳ ಸಾಧನೆಯಿಂದ ಸಾಧ್ಯವಾಗುವ ಕ್ರಿಯೆ. ಒಮ್ಮೆ ನಮ್ಮ ಆತ್ಮದ ಅಂತರಾತ್ಮನಾದ ಭಗವಂತನನ್ನು ತಿಳಿದರೆ, ಅದರಿಂದ ಆದಿತ್ಯಲೋಕ ಪ್ರಾಪ್ತಿಯಾಗುತ್ತದೆ. ಪ್ರಾಣದೇವರು ನಮ್ಮನ್ನು ಆದಿತ್ಯಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ. ಆದಿತ್ಯಲೋಕದಲ್ಲಿ ಆದಿತ್ಯನಲ್ಲಿರುವ ಭಗವಂತನ ಮೂಲಕ ಮತ್ತೆ ಮರಳಿ ಬಾರದ ನಿತ್ಯಲೋಕ ಪ್ರಾಪ್ತಿಯಾಗುತ್ತದೆ. ಹೀಗಾಗಿ ಉತ್ತರಾಯಣದ ಸಾಧನೆ ಇಲ್ಲಿಂದ ಬಿಡುಗಡೆಯ ಸಾಧನೆ.

ಒಟ್ಟಿನಲ್ಲಿ ಹೇಳಬೇಕೆಂದರೆ ದಕ್ಷಿಣಾಯಣದ ಸಾಧನೆ ಸಂಸಾರದ ಚಕ್ರಭ್ರಮಣವಾದರೆ, ಉತ್ತರಾಯಣದ ಸಾಧನೆ ಮೋಕ್ಷಪ್ರದ ಸಾಧನೆ. ಇದನ್ನೇ ದಕ್ಷಿಣ ಮತ್ತು ಉತ್ತರ ಧ್ರುವಗಳು ಸಂಕೇತಿಸುತ್ತವೆ. ಉತ್ತರದಿಂದ ಪೂರ್ವದ ತನಕದ ಸೆಳೆತ ಊರ್ಧ್ವಮುಖವಾದರೆ, ದಕ್ಷಿಣದಿಂದ ಪಶ್ಚಿಮದ ಸೆಳೆತ ಚಕ್ರಭ್ರಮಣ. ಇದಕ್ಕಾಗಿ ಪ್ರಾಚೀನರು ಯಾವುದೇ ಅನುಷ್ಠಾನ, ಪೂಜೆ ಮಾಡುವುದಿದ್ದರೆ, ಮಂತ್ರಜಪ ಮಾಡುವುದಿದ್ದರೆ, ಉತ್ತರ, ಈಶಾನ್ಯ ಅಥವಾ ಪೂರ್ವಕ್ಕೆ ಮುಖ ಮಾಡಿ ಮಾಡುತ್ತಿದ್ದರು. ದಕ್ಷಿಣಕ್ಕೆ ಮುಖ ಮಾಡಿ ಪೂಜೆ ಅನುಷ್ಠಾನ ಮಾಡಬಾರದು. ಮಲಗುವಾಗ ಉತ್ತರಕ್ಕೆ ತಲೆ ಹಾಕಿ ಮಲಗಬಾರದು ಎನ್ನುವುದು ಪ್ರಾಚೀನರು ನಮಗೆ ಕೊಟ್ಟ ವಿಜ್ಞಾನ. ಮಲಗುವಾಗ ತಲೆ ಉತ್ತರಕ್ಕೆ ಇದ್ದರೆ ಏಳುವಾಗ ನಾವು ದಕ್ಷಿಣ ಮುಖ ಮಾಡಿ ಏಳುತ್ತೇವೆ. ಹಾಗಾಗಿ ಉತ್ತರಕ್ಕೆ ತಲೆ ಹಾಕಿ ಮಲಗುವುದೂ ನಿಷಿದ್ಧ.

ಎಲ್ಲಾ ಜೀವರಿಗೂ ಕೊನೇಯ ಆಶ್ರಯ ಆದಿತ್ಯಾಂತರ್ಗತ ಭಗವಂತ. ಆತ ಸಮಸ್ತ ಜೀವಜಾತಗಳಿಗೆ ಕೊನೇಯ ನೆಲೆಮನೆ. ಆತನನ್ನು ಸೇರಿದರೆ ಸಾವಿಲ್ಲ, ಭಯವಿಲ್ಲ. ಉತ್ತರಾಯಣದಲ್ಲಿ ಸಾಧನೆ ಮಾಡಿ ಆದಿತ್ಯಲೋಕ ಸೇರಿದವರು ಎಂದೂ ಮರಳಿ ಹುಟ್ಟುವುದಿಲ್ಲ. ಅವರು ಶಾಶ್ವತವಾದ ಮೋಕ್ಷವನ್ನು ಪಡೆಯುತ್ತಾರೆ. ಇದಕ್ಕೆ ಸಂವಾದಿಯಾಗಿ ವೇದದ ಒಂದು ಮಂತ್ರವನ್ನು ಪಿಪ್ಪಲಾದರು ಮುಂದೆ ವಿವರಿಸುತ್ತಾರೆ:

*ತದೇಷ ಶ್ಲೋಕಃ -*

*ಪಂಚಪಾದಂ ಪಿತರಂ ದ್ವಾದಶಾಕೃತಿಂ ದಿವ ಆಹುಃ ಪರೇ ಅರ್ಧೇ ಪುರೀಷಿಣಮ್ ।*

*ಅಥೇಮೇ ಅನ್ಯ ಉಪರೇ ವಿಚಕ್ಷಣಂ ಸಪ್ತಚಕ್ರೇ ಷಡರ ಆಹುರರ್ಪಿತಮಿತಿ ॥೧೧॥*

ಈ ಮಂತ್ರ ಋಗ್ವೇದದಲ್ಲಿ ಬಂದಿದೆ. (೧.೧೬೪.೧೨). ಋಗ್ವೇದದಲ್ಲಿ 'ಅಸ್ಯ ವಾಮಸ್ಯ ಸೂಕ್ತ' ಎಂದಿದೆ[೧.೧೬೪]. ಅಲ್ಲಿ ಐವತ್ತೆರಡು ಮಂತ್ರಗಳಿವೆ. ಎಲ್ಲವೂ ಒಗಟಿನಂತಿರುವ ಮಂತ್ರಗಳು. ಮೇಲ್ನೋಟದಲ್ಲಿ ನೋಡಿದರೆ ಏನೂ ಅರ್ಥವಾಗುವುದಿಲ್ಲ. ಆ ಐವತ್ತೆರಡು ಮಂತ್ರಗಳಲ್ಲಿ ಒಂದನ್ನು ಪಿಪ್ಪಲಾದರು ಇಲ್ಲಿ ಪ್ರಸ್ತಾಪಿಸಿದ್ದಾರೆ. ಈ ಮಂತ್ರದ ಮೇಲ್ನೋಟದ ಅರ್ಥ ಹೀಗಿದೆ: ಐದು ಕಾಲಿನ ತಂದೆಯೊಬ್ಬನಿದ್ದಾನೆ. ಅವನಿಗೆ ಹನ್ನೆರಡು ರೂಪಗಳು. ಅವನು ಸ್ವರ್ಗಲೋಕದ ಆಚೆಗಿನ ಬಂಗಲೆಯಲ್ಲಿ ಪುಷ್ಕಳ ಭೋಜನ ಮಾಡುತ್ತಿದ್ದಾನೆ/ ಆನಂದವಾಗಿದ್ದಾನೆ/ ಆರಾಮವಾಗಿದ್ದಾನೆ/ನೀರು ಸುರಿಸುತ್ತಿದ್ದಾನೆ. ಕೆಲವು ಬೇರೆ ಜನರಿದ್ದಾರೆ. ಅವರು ಹೇಳುತ್ತಾರೆ: "ಆತ ಭಾರೀ ಬುದ್ಧಿವಂತ, ಆತ ಆ ಬಂಗಲೆಯಲ್ಲಿರುವುದಲ್ಲ, ಆತ ಏಳು ಚಕ್ರಗಳ, ಆರು ಅರಗಿಲ ಶರೀರದಲ್ಲಿದ್ದಾನೆ" ಎಂದು.

ಇದು ಪೂರ್ಣ ಒಗಟಿನ ರೂಪದಲ್ಲಿರುವ ಮಂತ್ರ. ಈ ಮಂತ್ರ ಸೂರ್ಯನನ್ನು, ಪ್ರಾಣದೇವರನ್ನು ಮತ್ತು ಭಗವಂತನನ್ನು ಹೇಳುತ್ತದೆ. ಇಲ್ಲಿ ಒಂದೊಂದಾಗಿ ಈ ವಿವರವನ್ನು ಹುಡುಕಬೇಕು.

ಈ ಮಂತ್ರವನ್ನು ಸೂರ್ಯನ ಪರ ನೋಡಿದಾಗ: "ಪಂಚಪಾದಂ ಪಿತರಂ" ಎನ್ನುವಲ್ಲಿ 'ಪಂಚ' ಎನ್ನುವ ಪದ 'ವ್ಯಾಪಿಸಿಕೊಂಡಿರುವ/ವಿಸ್ತಾರವಾದ' ಎನ್ನುವ ಅರ್ಥವನ್ನು ಕೊಡುತ್ತದೆ[ಉದಾ: ಪಂಚಾಸ್ಯ=ವಿಸ್ತಾರವಾದ ಮೋರೆಯುಳ್ಳದ್ದು=ಸಿಂಹ]. ಸೂರ್ಯನ ಕಿರಣಗಳು ವಿಸ್ತಾರವಾಗಿ ಭೂಮಂಡಲದಲ್ಲಿ ತುಂಬಿದೆ. ಇನ್ನು 'ಪಂಚ' ಎಂದರೆ ಐದು ಎನ್ನುವ ಅರ್ಥದಲ್ಲಿ ನೋಡಿದರೆ: ಸೂರ್ಯನನ್ನು ಉಪಾಸನೆಯಲ್ಲಿ ಐದು ದಿಕ್ಕುಗಳಲ್ಲಿ [ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಊರ್ಧ್ವ] ಹೇಳುತ್ತಾರೆ. ಹೀಗೆ ಐದು ಕಡೆ ವಿಶಿಷ್ಟವಾದ ಐದು ಕಿರಣಗಳುಳ್ಳವ ಮತ್ತು ಎಲ್ಲಾ ಕಡೆ ವಿಸ್ತೃತವಾದ ಕಿರಣಗಳುಳ್ಳವ ಸೂರ್ಯ. ಇಲ್ಲಿ ಪಿತರಂ ಎನ್ನುವಲ್ಲಿ 'ತಪ' ಎನ್ನುವ ಪದ ಅಡಗಿದೆ. ಅಂದರೆ ಸುಡುವವ ಎಂದರ್ಥ. ಕಿರಣಗಳನ್ನು ಎಲ್ಲಾ ಕಡೆ ಹಬ್ಬಿಸಿ, "ದ್ವಾದಶಾಕೃತಿಂ" – ಹನ್ನೆರಡು ತಿಂಗಳು ಪಂಚಋತುಗಳ[ವಸಂತ, ಗ್ರೀಷ್ಮ, ವರ್ಷಾ, ಶರತ್, ಹೇಮಂತಶಿಶಿರ(ಹೇಮಂತ ಮತ್ತು ಶಿಶಿರವನ್ನು ಚಳಿಗಾಲವೆಂದು ಒಂದೇ ಋತುವಾಗಿ ಪರಿಗಣಿಸುವುದು ವೈದಿಕ ಸಂಪ್ರದಾಯ-'ಪಂಚರ್ತವಃ' )] ನಿಯಾಮಕನಾಗಿ ಸೂರ್ಯ ಆಕಾಶದ[ದಿವು] ನಡು ನೆತ್ತಿಯಲ್ಲಿ ನೆಲೆಸಿದ್ದಾನೆ. ಆದರೆ ತಿಳಿದವರು ಹೇಳುತ್ತಾರೆ: ಆತ ನಮ್ಮ ಶರೀರದಲ್ಲೇ, ನಮ್ಮ ಕಣ್ಣಿನಲ್ಲಿ ನೆಲೆಸಿದ್ದಾನೆ ಎಂದು.[ಚಕ್ಷೋಃ ಸೂರ್ಯೋ ಅಜಾಯತ->ಪುರುಷಸೂಕ್ತ. ಭಗವಂತನ ಕಣ್ಣಿನಿಂದ ಹುಟ್ಟಿದ ಸೂರ್ಯ ನಮ್ಮ ಕಣ್ಣಿನ ಅಭಿಮಾನಿ ದೇವತೆ]. ಎಂತಹ ಶರೀರ ಎಂದರೆ - ಏಳು ಚಕ್ರಗಳ, ಆರು ಅರಗಿಲ ಶರೀರ. [ಈ ಶರೀರದ ವಿವರಣೆಯನ್ನು ಮುಂದೆ ನೋಡೋಣ].

ಇದೇ ಮಂತ್ರವನ್ನು ಪ್ರಾಣದೇವರ ಪರ ನೋಡಿದಾಗ: "ಪಂಚಪಾದಂ ಪಿತರಂ" ಜಗತ್ತಿನ ತಂದೆಯಾದ ಮುಖ್ಯಪ್ರಾಣದೇವರು ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎನ್ನುವ ಐದು ರೂಪಗಳಲ್ಲಿ ಈ ಜಗತ್ತಿನಲ್ಲಿ ತುಂಬಿದ್ದಾರೆ. ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಮನಸ್ಸು ಮತ್ತು ಬುದ್ಧಿ ಈ ಹನ್ನೆರಡು[ದ್ವಾದಶಾಕೃತಿಂ] ಇಂದ್ರಿಯಗಳ ನಿಯಾಮಕ-ಪ್ರಾಣ. ಇಂತಹ ಪ್ರಾಣದೇವರು ತಮ್ಮ ಪುರವಾದ ಸತ್ಯಲೋಕದಲ್ಲಿ ಭಾರತಿಯ(ದಿವು) ಬಲಬದಿಯಲ್ಲಿದ್ದಾರೆ. ಆದರೆ ತಿಳಿದವರು ಹೇಳುವಂತೆ ಜೀವ ಕಲಾಭಿಮಾನಿಯಾದ ಪ್ರಾಣದೇವರು ನಮ್ಮ ಶರೀರದಲ್ಲಿ ಅಂತರ್ಯಾಮಿಯಾಗಿ ನೆಲೆಸಿದ್ದಾರೆ.

ಈ ಮಂತ್ರವನ್ನು ಭಗವಂತನ ಪರ ನೋಡಿದಾಗ: ಸೂರ್ಯನೊಳಗೆ ಪಂಚರೂಪದಲ್ಲಿದ್ದು, ಪಂಚರೂಪದಿಂದ, ಪಂಚಋತು ನಿಯಾಮಕನಾಗಿ ಭಗವಂತನಿದ್ದಾನೆ. ಪಂಚಪ್ರಾಣರಲ್ಲಿ ಭಗವಂತನಿದ್ದಾನೆ. ಸ್ವಯಂ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಮತ್ತು ನಾರಾಯಣ ಎನ್ನುವ ಪಂಚರೂಪದಲ್ಲಿ ಜಗತ್ತಿನ ತಂದೆಯಾದ ಭಗವಂತ ತುಂಬಿದ್ದಾನೆ. ಹನ್ನೆರಡು ಮಾಸಗಳಲ್ಲಿ, ಹನ್ನೆರಡು ಇಂದ್ರಿಯಗಳಲ್ಲಿ ಭಗವಂತ ತುಂಬಿದ್ದಾನೆ. ಮಾರ್ಗಶಿರದಿಂದ ಕಾರ್ತಿಕದ ತನಕದ ತಿಂಗಳುಗಳನ್ನು ನಿಯಮಿಸುವ ಭಗವಂತನ ರೂಪಗಳೂ ಹನ್ನೆರಡು. ಅವುಗಳೆಂದರೆ: ಕೇಶವ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷಿಕೇಶ, ಪದ್ಮನಾಭ, ದಾಮೋದರ. ಹೀಗೆ ಅನೇಕಾನೇಕ ರೂಪಗಳಿಂದ ಜಗತ್ತಿನ ರಕ್ಷಣೆ ಮಾಡುತ್ತಿದ್ದಾನೆ –ಜಗತ್ತಿನ ರಕ್ಷಕ ಭಗವಂತ. ಇಂತಹ ಭಗವಂತ ಏಳುಲೋಕಗಳಿಂದಾಚೆಗೆ, ಎಲ್ಲವುದಕ್ಕಿಂತ ಎತ್ತರದಲ್ಲಿರುವ ವೈಕುಂಠದಲ್ಲಿ ನೆಲೆಸಿದ್ದಾನೆ. ಭಗವಂತ ಭಕ್ತಿ-ಜ್ಞಾನಗಳ ಮುಖೇನ ಎತ್ತರಕ್ಕೇರಿದ ಜ್ಞಾನಿಯ ಸಾಧನೆ ಪೂರ್ಣವಾದಾಗ, ತನ್ನ ಪುರದಲ್ಲಿ ಆತನಿಗೆ ಸ್ಥಾನವನ್ನು ಕೊಡುತ್ತಾನೆ. ಸಾಧನೆ ಪೂರ್ಣವಾಗುವ ತನಕ ಭೂಮಂಡಲದಲ್ಲಿ ಸ್ಥಾನವನ್ನು ಕೊಡುವವನೂ ಅವನೇ. ಭಗವಂತನನ್ನು ಹೃದಯದಲ್ಲಿ ಉಪಾಸನೆ ಮಾಡುವ ಶತರ್ಚಿಗಳು "ಭಗವಂತ ಎಲ್ಲವನ್ನು ಬಲ್ಲವನಾಗಿ ನಮ್ಮೊಳಗೆ ನಮ್ಮನ್ನು ರಕ್ಷಣೆ ಮಾಡುವುದಕ್ಕಾಗಿ ಕುಳಿತಿದ್ದಾನೆ(ಉಪರೇ)" ಎಂದು ಉಪಾಸನೆ ಮಾಡುತ್ತಾರೆ. ಜ್ಞಾನಿಗಳು ಭಗವಂತನನ್ನು ತಮ್ಮ ಹೃದಯದಲ್ಲಿ ಕುಳ್ಳಿರಿಸಿ ಉಪಾಸನೆ ಮಾಡುತ್ತಾರೆ.

ಈ ರೀತಿ ಸೂರ್ಯ, ಪ್ರಾಣ ಮತ್ತು ಭಗವಂತ ನೆಲೆಸಿರುವ ಶರೀರ ಏಳು ಚಕ್ರಗಳ ಶರೀರ. ನಮ್ಮ ಶರೀರ ಏಳರ ಗುಂಪು. ಅವುಗಳೆಂದರೆ: ತ್ವಕ್(ಹೊರಮೈ), ಚರ್ಮ(ಒಳಮೈ), ಮಾಂಸ, ರಕ್ತ, ಕೊಬ್ಬು, ಎಲುಬು ಮತ್ತು ಮಜ್ಜೆ (ಸಪ್ತ ಧಾತುಗಳು). ಯಾವುದರಿಂದ ನಾವು ನಡೆಯುತ್ತೇವೋ ಅದು ಚಕ್ರ. ಚಕ್ರ ಎಂದರೆ ಪರಿಮಾಣ. ನಮ್ಮ ಶರೀರ ನಮ್ಮ ಕಾಲಿನ ಏಳುಪಟ್ಟು ಇರುತ್ತದೆ. ಇಂತಹ ದೇಹಕ್ಕೆ ಆರು ಅರಗಿಲು. ಅವುಗಳೆಂದರೆ: ಎರಡು ಕೈ, ಎರಡು ಕಾಲು, ದೇಹ ಮತ್ತು ತಲೆ.

ಹೀಗೆ ಈ ಶ್ಲೋಕ- ಸೂರ್ಯ, ಪ್ರಾಣ ಮತ್ತು ನಾರಾಯಣ ಸಮಸ್ತ ಕಾಲದಲ್ಲಿ ತುಂಬಿ ಸೃಷ್ಟಿ ವಿಸ್ತಾರ ಮಾಡುವುದಕ್ಕೆ ಸಂವಾದಿಯಾಗಿದೆ.

***ಮಾಸೋ ವೈ ಪ್ರಜಾಪತಿಸ್ತಸ್ಯ ಕೃಷ್ಣಪಕ್ಷ ಏವ ರಯಿಃ ಶುಕ್ಲಃ ಪ್ರಾಣಃ । ತಸ್ಮಾದೇತ ಋಷಯಃ ಶುಕ್ಲ ಇಷ್ಟೀಮ್ ಕುರ್ವಂತೀತರ ಇತರಸ್ಮಿನ್ ॥೧೨॥***

ಮುಂದುವರಿದು ಪಿಪ್ಪಲಾದರು ಹೇಳುತ್ತಾರೆ: "ಭಗವಂತ ಮಾಸದಲ್ಲಿ ತುಂಬಿದ, ಅದರಲ್ಲಿ ಕೃಷ್ಣಪಕ್ಷದಲ್ಲಿ ಭಾರತಿ ಹಾಗೂ ಶುಕ್ಲಪಕ್ಷದಲ್ಲಿ ಪ್ರಾಣದೇವರು ತುಂಬಿದರು" ಎಂದು. ಶುಕ್ಲಪಕ್ಷದಲ್ಲಿ ಪ್ರಾಣಶಕ್ತಿಯ ಪ್ರಭಾವ ಹೆಚ್ಚು. ಹೀಗಾಗಿ ಪ್ರಾಣತತ್ತ್ವಕ್ಕೆ ಪ್ರಿಯವಾದಂತಹ ಕೆಲಸವನ್ನು ಮಾಡುವಾಗ ಶುಕ್ಲಪಕ್ಷದಲ್ಲಿ ಮಾಡಬೇಕು ಮತ್ತು ಐಹಿಕ ಹಾಗೂ ಸಾಂಸಾರಿಕವಾದ ಯಾವುದೇ ಕ್ರಿಯೆಯನ್ನು ಕೃಷ್ಣಪಕ್ಷದಲ್ಲಿ ಮಾಡಬೇಕು ಎನ್ನುತ್ತಾರೆ. ಹಿಂದಿನ ಕಾಲದಲ್ಲಿ ಋಷಿಗಳು ಯಾವುದೇ ಯಜ್ಞ ಮಾಡುವುದಿದ್ದರೂ ಅದನ್ನು ಶುಕ್ಲಪಕ್ಷದಲ್ಲಿ ಮಾಡುತ್ತಿದ್ದರು. ಯಜ್ಞ ಅನ್ನುವುದು ಭಗವಂತನ ಆರಾಧನೆ. ನಾವು ಮಾಡುವ ಕರ್ಮವನ್ನು ಭಗವಂತನಿಗೆ ಅರ್ಪಿಸುವವರು ಪ್ರಾಣದೇವರು. ಆದ್ದರಿಂದ ಶುಕ್ಲಪಕ್ಷದಲ್ಲಿ ಮಾಡಿದ ಕರ್ಮ ನೇರವಾಗಿ ಪ್ರಾಣದೇವರ ಮುಖೇನ ಭಗವಂತನನ್ನು ಸೇರುತ್ತದೆ.

*ಅಹೋರಾತ್ರೋ ವೈ ಪ್ರಜಾಪತಿಸ್ತಸ್ಯಾಹರೇವ ಪ್ರಾಣೋ ರಾತ್ರಿರೇವ ರಯಿಃ । ಪ್ರಾಣಂ ವಾ ಏತೇ ಪ್ರಸ್ಕಂದಂತಿ ಯೇ ದಿವಾ ರತ್ಯಾ ಸಂಯುಜ್ಯಂತೇ । ಬ್ರಹ್ಮಚರ್ಯಮೇವ ತದ್ ಯದ್ ರಾತ್ರೌ ರತ್ಯಾ ಸಂಯುಜ್ಯಂತೇ ॥೧೩॥*

ಮಾಸದಲ್ಲಿ ತುಂಬಿದ ಭಗವಂತ ದಿನದ ಅಹೋರಾತ್ರಿಗಳಲ್ಲಿ ತುಂಬಿದ. ಅದರಲ್ಲಿ ಹಗಲಿನಲ್ಲಿ ಪ್ರಾಣ ಮತ್ತು ರಾತ್ರಿಯಲ್ಲಿ ಭಾರತಿ ತುಂಬಿದರು. ಹೀಗಾಗಿ ಯಾವುದೇ ಪುಣ್ಯಕರ್ಮ ಮಾಡುವುದಿದ್ದರೂ ಅದನ್ನು ಹಗಲಿನಲ್ಲಿ ಮಾಡುತ್ತಾರೆ. ಅಗ್ನಿಯಲ್ಲಿ ಅರ್ಪಿಸಿದ ಹವಿಸ್ಸು, ಅಗ್ನಿಯ ಏಳು ಬಣ್ಣಗಳ ಮುಖೇನ, ಸೂರ್ಯನ ಏಳು ಬಣ್ಣಗಳಲ್ಲಿ ವಿಲೀನಗೊಂಡು ಅಲ್ಲಿ ಶಕ್ತಿಪಾತವಾಗಿ ವಾತಾವರಣ ಶುದ್ಧಿಯಾಗುತ್ತದೆ.
ಹಗಲಿನಲ್ಲಿ ಪ್ರಾಣದೇವರು ಮತ್ತು ರಾತ್ರಿಯಲ್ಲಿ ಭಾರತಿ ತುಂಬಿರುವುದರಿಂದ ಪ್ರಾಣ-ಭಾರತಿಯರ ಸಮಾಗಮ ರಾತ್ರಿಯಲ್ಲಿ. ಹೀಗಾಗಿ ಸಂತಾನ ಬಯಸುವ ಸ್ತ್ರೀ-ಪುರುಷರು ರಾತ್ರಿಯಲ್ಲೇ ಸಮಾಗಮವಾಗಬೇಕು. ಹಗಲಿನಲ್ಲಿ ಸ್ತ್ರೀ-ಪುರುಷರ ಸಮಾಗಮವಾದರೆ ಅಲ್ಲಿ ಪ್ರಾಣಶಕ್ತಿ ವ್ಯರ್ಥವಾಗುತ್ತದೆ. ಹಗಲಿನಲ್ಲಿ ನಡೆಯುವ ಸ್ತ್ರೀ-ಪುರುಷ ಸಮಾಗಮ ಭಗವಂತನ ಚಿತ್ತಕ್ಕೆ ಬಾರದ ಸಮಾಗಮ. ಇದರಿಂದ ವ್ಯಕ್ತಿ ಪ್ರಾಣಶಕ್ತಿಯನ್ನು ಕಳೆದುಕೊಳ್ಳುತ್ತಾನೆ ಮತ್ತು ಆತ ತ್ರಾಣ ಕಳೆದುಕೊಂಡು ದುರ್ಬಲನಾಗುತ್ತಾನೆ

*ಅನ್ನಂ ವೈ ಪ್ರಜಾಪತಿಸ್ತತೋ ಹ ವೈ ತದ್ ರೇತಸ್ತಸ್ಮಾದಿಮಾಃ ಪ್ರಜಾಃಪ್ರಜಾಯಂತ ಇತಿ ॥೧೪॥*

ನಾವು ಸೇವಿಸುವ ಅನ್ನದಲ್ಲಿ ಭಗವಂತ ನೆಲೆಸಿದ. ಆ ಆಹಾರದಲ್ಲಿರುವ ಜೀವಾಣುವಿನಲ್ಲಿ ಪ್ರಾಣ ದೇವರು ಸೇರಿ ಅದು ಗಂಡಿನ ದೇಹದಲ್ಲಿ ರೇತಸ್ಸಾಗಿ ಪರಿಣಾಮಹೊಂದುವಂತೆ ಮಾಡುತ್ತಾರೆ. ಅದೇ ರೀತಿ ಹೆಣ್ಣಿನ ಆಹಾರ ಆಕೆಯ ದೇಹದಲ್ಲಿ ಶೋಣಿತವಾಗಿ ಪರಿಣಾಮ ಹೊಂದುವಂತೆ ಭಾರತಿ ಮಾಡುತ್ತಾಳೆ. ಈ ಶುಕ್ಲ-ಶೋಣಿತಗಳ ಸಮಾಗಮದಿಂದ ಸಂತಾನವಾಗುತ್ತದೆ. ಹೀಗೆ ಭಗವಂತನಿಂದ, ಪ್ರಾಣ-ಭಾರತಿಯಿಂದ, ಸ್ತ್ರೀ-ಪುರುಷರ ಸಮಾಗಮದಿಂದ, ಕಾಲಕ್ರಮದಲ್ಲಿ(ಸೂರ್ಯ) ಸೃಷ್ಟಿ ಮುಂದುವರಿಯುತ್ತದೆ. ಎಲ್ಲವುದಕ್ಕೂ ಮೂಲಕಾರಣವಾಗಿ ಲಕ್ಷ್ಮೀ-ನಾರಾಯಣರು ನಿಂತು ನಿಯಮಿಸುತ್ತಾರೆ.

ಸೃಷ್ಟಿಯ ಬಗ್ಗೆ ವಿಶಿಷ್ಟವಾದ ವಿವರವನ್ನು ನೀಡಿದ ಪಿಪ್ಪಲಾದರು, ಮುಂದೆ ಭಗವದ್ ತತ್ವದ ಉಪಾಸನೆಯ ಒಂದು ವಿಶಿಷ್ಠ ವಿಚಾರವನ್ನು ಹೇಳುತ್ತಾರೆ.

*ತದ್ ಹ ವೈ ತತ್ ಪ್ರಜಾಪತಿವ್ರತಂ ಚರಂತಿ ತೇ ಮಿಥುನಮುತ್ಪಾದಯಂತೇ । ತೇಷಾಮೇವೈಷ ಬ್ರಹ್ಮಲೋಕೋ ಯೇಷಾಂ ತಪೋ ಬ್ರಹ್ಮಚರ್ಯಂ ಯೇಷು ಸತ್ಯಂ ಪ್ರತಿಷ್ಠಿತಮ್ ॥೧೫॥*

ಪಿಪ್ಪಲಾದರು ಹೇಳುತ್ತಾರೆ: ಯಾರಾದರು ಶ್ರದ್ಧೆಯಿಂದ 'ಪ್ರಜಾಪತಿ ವ್ರತ'ವನ್ನು ಆಚರಿಸಿದರೆ ಒಳ್ಳೆಯ ಮಕ್ಕಳ ತಂದೆ-ತಾಯಿಯರಾಗುತ್ತಾರೆ" ಎಂದು. ಇಲ್ಲಿ ಹೇಳಿರುವ 'ಪ್ರಜಾಪತಿ ವ್ರತ'ವನ್ನು ಋಕ್ ವಿಧಾನದಲ್ಲಿ ವಿವರಿಸಿದ್ದಾರೆ. ಇದು ಪುರುಷಸೂಕ್ತದಲ್ಲಿ ಮಾಡುವ ಭಗವಂತನ ಉಪಾಸನೆ. ಪ್ರತೀ ತಿಂಗಳು ಶುಕ್ಲಪಕ್ಷದಲ್ಲಿ ಪುರುಷಸೂಕ್ತ ಹೋಮ- ಒಂದು ವರ್ಷ ಮಾಡಿದರೆ ಅದು ಪ್ರಜಾಪತಿವ್ರತವೆನಿಸುತ್ತದೆ. ಏಕಾದಶಿ ದಿನದಂದು ಪುರುಷಸೂಕ್ತದ ಹದಿನಾರು

ಮಂತ್ರಗಳಿಂದ ಷೋಡಶೋಪಚಾರ[ಆಸನ, ಸ್ವಾಗತ, ಪಾದ್ಯ(ಕಾಲು ತೊಳೆಯುವ ನೀರು), ಅರ್ಘ್ಯ(ಕೈ ತೊಳೆಯುವ ನೀರು), ಆಚಮನ, ಮಧುಪರ್ಕ, ಪುನರಾಚಮನ, ಸ್ನಾನ, ವಸ್ತ್ರ, ಆಭರಣ, ಗಂಧ, ಪುಷ್ಪ, ಧೂಪ, ನೈವೇದ್ಯ, ನೀರಾಜನ ಅಥವಾ ಪ್ರದಕ್ಷಿಣನಮಸ್ಕಾರ]ಪೂಜೆ ಮಾಡಿ, ಪೂರ್ಣ ಉಪವಾಸವಿರಬೇಕು. ಮರುದಿನ(ದ್ವಾದಶಿ) ಆಹುತಿ ಕೊಡಲು ಅಕ್ಕಿಯನ್ನು ಹಾಲಿನಲ್ಲಿ ಬೇಯಿಸಬೇಕು(ಚರು). ಬೇಯಿಸುವಾಗ ಅದನ್ನು ಪುರುಷಸೂಕ್ತದಿಂದ ಅಭಿಮಂತ್ರ ಮಾಡಬೇಕು. ತದನಂತರ ಅಗ್ನಿಪ್ರತಿಷ್ಠೆ ಮಾಡಿ ಹೋಮ ಮಾಡಬೇಕು. ಇಲ್ಲಿ ಮೊದಲು ಹದಿನಾರು ಮಂತ್ರಗಳಿಂದ ಷೋಡಶಸಂಸ್ಕಾರ ಮಾಡಬೇಕು. ಆನಂತರ ಪುರುಷ ಸೂಕ್ತವನ್ನು ಹೇಳಿಕೊಂಡು ಅಗ್ನಿ ದೇವತೆಯಲ್ಲಿ ಸನ್ನಿಹಿತನಾದ ಭಗವಂತನನ್ನು ಸ್ತೋತ್ರ ಮಾಡಬೇಕು. ಹನ್ನೆರಡು ತಿಂಗಳಿಗೆ ಭಗವಂತನ ಹನ್ನೆರಡು ರೂಪಗಳು. [ಮಾರ್ಗಶಿರ-ಕೇಶವ, ಪುಷ್ಯ-ನಾರಾಯಣ,  ಮಾಘ-ಮಾಧವ, ಫಾಲ್ಗುಣ-ಗೋವಿಂದ, ಚೈತ್ರ-ವಿಷ್ಣು, ವೈಶಾಖ-ಮಧುಸೂದನ, ಜ್ಯೇಷ್ಠ -ತ್ರಿವಿಕ್ರಮ, ಆಷಾಢ-ವಾಮನ, ಶ್ರಾವಣ -ಶ್ರೀಧರ, ಭಾದ್ರಪದ-ಹೃಷಿಕೇಶ, ಆಶ್ವೀಜ-ಪದ್ಮನಾಭ, ಕಾರ್ತಿಕ-ದಾಮೋದರ] ಆಯಾ ತಿಂಗಳ ದ್ವಾದಶಿಯಲ್ಲಿ ಆಯಾ ತಿಂಗಳ ಭಗವಂತನ ವಿಶಿಷ್ಠರೂಪಕ್ಕೆ ಆಹುತಿ. ಹೋಮದ ನಂತರ ಹದಿನಾರು ತುಪ್ಪದ ಆಹುತಿ. ನಂತರ ಹಾಲಿನಲ್ಲಿ ಬೇಯಿಸಿದ ಅನ್ನದ ಹದಿನಾರು ಆಹುತಿ. ಕೊನೆಯಲ್ಲಿ ಪುನಃ ಪುರುಷಸೂಕ್ತದ ಹದಿನಾರು ಮಂತ್ರಗಳಿಂದ, ಹದಿನಾರು ಬಾರಿ ತುಪ್ಪದ ಆಹುತಿ. ಹೀಗೆ ಪ್ರತೀ ಶುಕ್ಲಪಕ್ಷದ ಏಕಾದಶಿಯಂದು ಉಪವಾಸವಿದ್ದು, ದ್ವಾದಶಿ ದಿನ ಭಗವಂತನ ಪೂಜೆ. ಇನ್ನು ಸಾಧ್ಯವಾದರೆ ದ್ವಾದಶಿಯಂದು ಹದಿನಾರು ಮಂದಿ ಯೋಗ್ಯ ಮಂದಿಗೆ ಭೋಜನ ಹಾಕುವುದು. ಕೊನೆಯಲ್ಲಿ ಆಹುತಿ ಕೊಟ್ಟ ಅನ್ನದ ಶೇಷ ಭಾಗವನ್ನು ಹೆಂಡತಿ "ತನ್ನ ಗಂಡನಲ್ಲಿ ನಾರಾಯಣನಿದ್ದಾನೆ' ಎಂದು ತಿಳಿದು, ಆತನಿಗೆ ಭಕ್ತಿಪೂರ್ವಕ ನಮಸ್ಕಾರ ಮಾಡಿ ಸೇವಿಸಬೇಕು. ನಮ್ಮೊಳಗೆ ಲಕ್ಷ್ಮೀ ನಾರಾಯಣರಿದ್ದಾರೆ ಎನ್ನುವ ಅನುಸಂಧಾನದಿಂದ ಪುರುಷಸೂಕ್ತ ಹೇಳಿ ದಂಪತಿಗಳು ಊಟ ಮಾಡಬೇಕು. ಈ ವ್ರತವನ್ನು ಹನ್ನೆರಡು ತಿಂಗಳು ಪೂರ್ಣಭಕ್ತಿ  ಮತ್ತು ನಂಬಿಕೆಯಿಂದ ಮಾಡಿದರೆ ಆಗ ದಂಪತಿಗಳಿಗೆ ಉತ್ತಮ ಸಂತಾನವಾಗುತ್ತದೆ.

ಈ ವ್ರತ ಮಾಡುವುದರಿಂದ ಮಕ್ಕಳೇ ಇಲ್ಲದವರಿಗೆ ಮಕ್ಕಳಾಗುತ್ತಾರೆ, ಗಂಡು ಮಗು ಇಲ್ಲದವರಿಗೆ ಗಂಡು ಮಗುವಾಗುತ್ತದೆ, ಮಕ್ಕಳು ಹುಟ್ಟಿ ಸಾಯುವ ಪ್ರಸಂಗ ಇದ್ದರೆ ಅದು ನಿಲ್ಲುತ್ತದೆ. ಇದನ್ನು ಋಷ್ಯಶೃಂಗ ಮುನಿಗಳು ಹೇಳಿದರು ಎನ್ನುತ್ತಾರೆ.

ಆಳವಾದ ಶಾಸ್ತ್ರದ ಅನುಸಂಧಾನದಿಂದ, ಬ್ರಹ್ಮಚರ್ಯಪಾಲನೆಯಿಂದ[ಸ್ತ್ರೀಸಂಗ ತೊರೆಯುವುದು, ವೇದಾಧ್ಯಯನ, ನಿರಂತರ ಭಗವಂತನ ಚಿಂತನೆ] ಮುಂದೆ ವಿವರಿಸುವ ಪುರುಷಸೂಕ್ತ ಹೋಮ ಮಾಡಿದರೆ, ಸತ್ಯಲೋಕ ಪ್ರಾಪ್ತಿಯಾಗುತ್ತದೆ. ಇಲ್ಲಿ ಮಾಡುವ ಕರ್ಮದ ಹಿಂದೆ ಸತ್ಯ ಶಬ್ದವಾಚ್ಯ ಭಗವಂತನ ಅನುಸಂಧಾನ ಬಹಳ ಮುಖ್ಯ.

*ತೇಷಾಮಸೌ ವಿರಜೋ ಬ್ರಹ್ಮಲೋಕೋ ನ ಯೇಷು ಜಿಹ್ಮಮನೃತಂ ನ ಮಾಯಾ ಚೇತಿ ॥೧೬॥*

ಮುಂದುವರಿದು ಪಿಪ್ಪಲಾದರು ಹೇಳುತ್ತಾರೆ:  ಕೇವಲ ಸತ್ಯಲೋಕವಷ್ಟೇ ಅಲ್ಲ, ರಜೋಗುಣದ ಸ್ಪರ್ಶವೇ ಇಲ್ಲದ ವಿಷ್ಣುಲೋಕ ವೈಕುಂಠವನ್ನು ಸೇರಬಹುದು ಎಂದು. ಇಲ್ಲಿ ತಪಸ್ಸು, ಬ್ರಹ್ಮಚರ್ಯ, ಪುರುಷ ಸೂಕ್ತದಿಂದ ಅನುಷ್ಠಾನ, ಎಲ್ಲಾ ಕರ್ಮಗಳಲ್ಲೂ ಭಗವಂತನ ಅನುಸಂಧಾನ, ಜೊತೆಗೆ ಪ್ರಾಮಾಣಿಕತೆ, ಡಂಬಾಚಾರ ಇಲ್ಲದ,  ಮಾಯ ಅಲ್ಲದ, ಸ್ವಚ್ಛ, ಪ್ರಾಮಾಣಿಕ ಭಕ್ತಿ ಅತ್ಯಗತ್ಯ.

ಮೋಕ್ಷ ಸಾಧಕವಾದ ಪುರುಷಸೂಕ್ತ ಉಪಾಸನೆ ಬಹಳ ಸುಂದರವಾಗಿದೆ. ಇಲ್ಲಿ ಸಾವಿರಾರು ಬಾರಿ, ಅನೇಕ ವರ್ಷಗಳ ತನಕ, ಪುರುಷಸೂಕ್ತ ಯಾಗ ಮಾಡಬೇಕಾಗುತ್ತದೆ. ನಿತ್ಯ ಪುರುಷಸೂಕ್ತ ಅನುಷ್ಠಾನ ಹೇಗಿರಬೇಕು ಅಂದರೆ: ಕೈಯಿಂದ ಶಿರಸ್ಸಿನ ತನಕ ಹದಿನಾರು ಅಂಗಗಳಲ್ಲಿ ಪುರುಷಸೂಕ್ತದ ಹದಿನಾರು ಮಂತ್ರಗಳಿಂದ ಅಂಗನ್ಯಾಸ ಮಾಡುವುದು; ಪೀಠದಲ್ಲಿನ ಪ್ರತಿಮೆಗೆ ಹದಿನಾರು ಮಂತ್ರಗಳಿಂದ ಅಂಗನ್ಯಾಸ ಮಾಡುವುದು; ಹೃದಯದಲ್ಲಿರುವ ಭಗವಂತನಿಗೆ ಪುರುಷಸೂಕ್ತದಿಂದ ಅರ್ಚನೆ ಮಾಡುವುದು. ಅಗ್ನಿಕುಂಡದಲ್ಲಿ ಅಗ್ನಿಪ್ರತಿಷ್ಠೆ ಪುರುಷಸೂಕ್ತದ ಮಂತ್ರದಿಂದ ಮಾಡಿ, 'ಓಂ ನಮೋ ನಾರಾಯಣಾಯ ಸ್ವಾಹಾ, ನಾರಾಯಣಾಯ ಇದಂ ನಮಮ" ಎಂದು ತುಪ್ಪ ಮತ್ತು ಸಮಿದೆಯಿಂದ ಆಹುತಿ ನೀಡುವುದು. ನಂತರ "ಜಿತಂತೇ ಪುಂಡರೀಕಾಕ್ಷ ...." ಎನ್ನುವ ಸ್ತೋತ್ರದ ಮೂಲಕ ಪುರುಷಸೂಕ್ತ ಪ್ರತಿಪಾದ್ಯ ಭಗವಂತನನ್ನು ಸ್ತೋತ್ರ ಮಾಡುವುದು. ಹೀಗೆ ದಿನಾಲೂ ಸರ್ವಾರ್ಪಣ ಭಾವದಿಂದ ಈ ರೀತಿ ಭಗವಂತನನ್ನು ಪುರುಷಸೂಕ್ತದಿಂದ ಉಪಾಸನೆ ಮಾಡಿದರೆ, ಅತಿಮಾನುಷ ಶಕ್ತಿ ಪ್ರಾಪ್ತಿಯಾಗಿ[ಉದಾ: ದೂರದರ್ಶನ, ದೂರಶ್ರವಣ, ಇತ್ಯಾದಿ] ಮೋಕ್ಷ ಪ್ರಾಪ್ತಿಯಾಗುತ್ತದೆ ಎನ್ನುತ್ತಾರೆ.

ಋಕ್ ವಿಧಾನದಲ್ಲಿ ಹೇಳುವಂತೆ ಪುರುಷಸೂಕ್ತಕ್ಕೆ ಸಮನಾದ ಇನ್ನೊಂದು ಸೂಕ್ತವಿಲ್ಲ. ಅದು ಮಕ್ಕಳಾಗುವುದಕ್ಕೂ ಸಾಧನ, ಮೋಕ್ಷಕ್ಕೂ ಸಾಧನ. ಇಹದಿಂದ ಪರದ ತನಕ ಸಮಸ್ತ ಪುರುಷಾರ್ಥಗಳಿಗೆ ಪುರುಷಸೂಕ್ತಕ್ಕೆ ಸಮನಾದ ಇನ್ನೊಂದು ಸೂಕ್ತವಿಲ್ಲ. ಹೇಗೆ ಅಪೌರುಷೇಯ ಮಂತ್ರದಲ್ಲಿ ಪುರುಷಸೂಕ್ತಕ್ಕೆ ಇನ್ನೊಂದು ಮಂತ್ರ ಸಾಟಿ ಇಲ್ಲವೋ, ಹಾಗೇ ಇಡೀ ವೈದಿಕ ಸಾಹಿತ್ಯದಲ್ಲಿ ಪೌರುಷೇಯ ಮಂತ್ರದಲ್ಲಿ ವಿಷ್ಣುಸಹಸ್ರನಾಮಕ್ಕೆ ಸಮನಾದ ಇನ್ನೊಂದು ಮಂತ್ರವಿಲ್ಲ. ಇವೆರಡು ಮಂತ್ರವನ್ನು ಯಾರು ತಮ್ಮ ಜೀವನದಲ್ಲಿ ನಿತ್ಯ ಅಳವಡಿಸಿಕೊಂಡರೋ, ಅವರು ಭಗವಂತ ಮೆಚ್ಚುವ ಕೆಲಸ ಮಾಡುತ್ತಾರೆ, ಮಾಡಿ ಭಗವಂತನನ್ನು ಸೇರುತ್ತಾರೆ.

**ಇತಿ ಷಟ್ ಪ್ರಶ್ನೋಪನಿಷದಿ ಪ್ರಥಮಃ ಪ್ರಶ್ನಃ ॥**

ಇಲ್ಲಿಗೆ ಷಟ್ ಪ್ರಶ್ನ ಉಪನಿಷತ್ತಿನ ಮೊದಲ ಪ್ರಶ್ನೆ/ಅಧ್ಯಾಯ ಮುಗಿಯಿತು.

*******

# ಅಥ ದ್ವಿತೀಯಃ ಪ್ರಶ್ನಃ

*ಅಥ ಹೈನಂ ಭಾರ್ಗವೋ ವೈದರ್ಭಿಃ ಪಪ್ರಚ್ಛ । ಭಗವನ್ ಕತ್ಯೇವ ದೇವಾಃ ಪ್ರಜಾ ವಿಧಾರಯಂತೇ, ಕತರ ಏತತ್ ಪ್ರಕಾಶಯಂತೇ, ಕಃ ಪುನರೇಷಾಂ ವರಿಷ್ಠ ಇತಿ ॥೧॥*

ಪ್ರವೃತ್ತಿ ಮತ್ತು ನಿವೃತ್ತಿ ಮಾರ್ಗದ ವಿಶ್ಲೇಷಣೆ ಮಾಡಿ, ಇಡೀ ಸೃಷ್ಟಿಯ ಬಿತ್ತರವನ್ನು ವಿವರಿಸಿದ ಪಿಪ್ಪಲಾದರಲ್ಲಿ, ಎರಡನೇ ಶಿಷ್ಯ ಭಾರ್ಗವ ವೈದರ್ಭಿಃ ತನ್ನ ಪ್ರಶ್ನೆಯನ್ನು ಕೇಳುತ್ತಾನೆ. ಆತ ಕೇಳುತ್ತಾನೆ: "ಈ ದೇಹ ಕುಸಿದು ಬೀಳದಂತೆ, ತ್ರಾಣ ಕೊಟ್ಟು ನಡೆಸುವವರು ಯಾರು? ಕ್ರಿಯೆ ಮತ್ತು ಜ್ಞಾನ ಕೊಡುವ ದೇವತೆಗಳು ಯಾರು? ಈ ದೇಹವನ್ನು ಧಾರಣೆ ಮಾಡಿ ಜ್ಞಾನ ಕೊಡುವ ದೇವತೆಗಳಲ್ಲಿ ಶ್ರೇಷ್ಠ ದೇವತೆ ಯಾರು? ಭಗವಂತನ ನಂತರ ಸರ್ವಶ್ರೇಷ್ಠ ದೇವತೆ ಯಾರು?" ಇದು ಭಾರ್ಗವ ವೈದರ್ಭಿಃ ಕೇಳಿದ ಪ್ರಶ್ನೋಪನಿಷತ್ತಿನ ಎರಡನೇ ಪ್ರಶ್ನೆ.

*ತಸ್ಮೈ ಸ ಹೋವಾಚ । ಆಕಾಶೋ ಹವಾ ಏಷ ದೇವೋ ವಾಯುರಗ್ನಿರಾಪಃ ಪೃಥಿವೀ ವಾಙ್ಮನಶ್ಚಕ್ಷುಃ ಶ್ರೋತ್ರಂ ಚ । ತೇ ಪ್ರಕಾಶಾಯ ಅಭಿವದಂತಿ ವಯಮೇತದ್ಬಾಣಮವಷ್ಟಭ್ಯ ವಿಧಾರಯಾಮ ಇತಿ ॥ ೨ ॥*

ಹಿಂದೆ ಸೃಷ್ಟಿಯ ಬಗ್ಗೆ ಪಿಪ್ಪಲಾದರು ಕೊಟ್ಟ ಉತ್ತರ ಎಷ್ಟು ವಿಸ್ಮಯಕರವೋ, ಅಷ್ಟೇ ವಿಸ್ಮಯಕರವಾದುದು ಈ ಧಾರಣೆ, ಕ್ರಿಯೆ ಮತ್ತು ಜ್ಞಾನಶಕ್ತಿ ಕೊಡುವ ದೇವತೆಗಳ ವಿವರಣೆ. ಏಕೆ ವಿಸ್ಮಯ ಎಂದರೆ: ನಮಗೆ ಗೊತ್ತಿರುವ ಸಂಗತಿಗಳಲ್ಲಿ ಅನೇಕ ಗೊತ್ತಿಲ್ಲದ ಸಂಗತಿಗಳು ಸೇರಿವೆ. ನಾವು ಸಾಮಾನ್ಯವಾಗಿ ಕೇವಲ ಸ್ಥೂಲ ವಿಚಾರಗಳನ್ನಷ್ಟೇ ತಿಳಿದಿರುತ್ತೇವೆ. ಅದರ ಹಿಂದಿನ ಸೂಕ್ಷ್ಮ ವಿವರಣೆ ನಮಗೆ ತಿಳಿದಿರುವುದಿಲ್ಲ. ಅಂತಹ ಸೂಕ್ಷ್ಮ ವಿಚಾರಗಳನ್ನು ಎಳೆ ಎಳೆಯಾಗಿ ಬಿಚ್ಚಿ ಹೇಳುವ ಪಿಪ್ಪಲಾದರ ಈ ವಿವರಣೆ ಒಂದು ವಿಸ್ಮಯಕಾರಿ ವಿವರಣೆ.

ಪಿಪ್ಪಲಾದರು ಹೇಳುತ್ತಾರೆ: "ದೇವತೆಗಳು ನಮಗೆ ಕ್ರಿಯಾಶಕ್ತಿ ಮತ್ತು ಜ್ಞಾನಶಕ್ತಿ ಕೊಟ್ಟು, ನಮ್ಮನ್ನು ನಿಯಮನ ಮಾಡಿಕೊಂಡು, ಈ ನಮ್ಮ ದೇಹದಲ್ಲಿ ನೆಲೆಸಿದ್ದಾರೆ" ಎಂದು. ಇಂತಹ ದೇವತೆಗಳಲ್ಲಿ ಗಣಪತಿಯೂ ಒಬ್ಬ. ಆತ ಆಕಾಶದ ದೇವತೆ. ಬ್ರಹ್ಮಾಂಡದಲ್ಲಿ ಆಕಾಶ ಹಾಗೂ ಪಿಂಡಾಂಡದಲ್ಲಿ ರಕ್ತಸಂಚಾರ, ಉಸಿರಾಟಕ್ಕೆ ಬೇಕಾದ ಅವಕಾಶ(Space)ವನ್ನು ಒದಗಿಸಿ ಮನುಷ್ಯ ಜೀವಂತವಾಗಿರಲು ಅವಕಾಶವನ್ನು ಈತ ಕಲ್ಪಿಸಿಕೊಡುತ್ತಾನೆ. ಈತ ಅವಕಾಶದ ದೇವತೆಯಾದ್ದರಿಂದ ಈತನನ್ನು ವಿಘ್ನನಾಶ ಎಂದೂ ಕರೆಯುತ್ತಾರೆ.

ಆಕಾಶ ದೇವತೆಯ ಸೃಷ್ಟಿಯ ನಂತರ, ಆ ಆಕಾಶದಲ್ಲಿ ಗಾಳಿ ಹುಟ್ಟಿತು. ಅಂದರೆ ಗಾಳಿಯ ಅಭಿಮಾನಿ ದೇವತೆಯ ಸೃಷ್ಟಿಯಾಯಿತು. ಈತ ಪ್ರಧಾನವಾಯುವಿನ ಮಗನಾದ ಭೂತವಾಯು. ಈತನನ್ನು ಮರೀಚಿ ಎಂದೂ ಕರೆಯುತ್ತಾರೆ[ಈ ಕುರಿತ ವಿವರಣೆ ಗೀತೆಯಲ್ಲಿ ಬರುತ್ತದೆ. ಅ-೧೦ ಶ್ಲೋಕ-೨೧]. ಮರೀಚಿಯ ನಂತರ ಅಗ್ನಿಯ ಜನನ. ಪ್ರಧಾನ ಅಗ್ನಿಯ ಮಗ 'ಪಾವಕ' ಎನ್ನುವವನು ಪಂಚಭೂತಗಳಲ್ಲಿ ಒಂದಾದ ಅಗ್ನಿಯ ದೇವತೆ. ನಂತರ ನೀರಿನ ದೇವತೆ ಬುಧ, ಪ್ರಥಿವೀದೇವತೆ 'ಶನಿ'. ಹೀಗೆ ಗಣಪತಿ, ಮರೀಚಿ, ಪಾವಕ, ಬುಧ ಮತ್ತು ಶನಿ ಇವರು ಪಂಚಭೂತಗಳ ದೇವತೆಗಳಾಗಿ ಸೃಷ್ಟಿಯಾದರು. ನಮ್ಮ ದೇಹ ಕೂಡಾ ಪಂಚಭೂತಗಳಿಂದಾಗಿದೆ. ಈ ಪಂಚದೇವತೆಗಳು ನಮ್ಮ ದೇಹಧಾರಣೆ ಮಾಡಿ ನಮಗೆ ಕ್ರಿಯಾಶಕ್ತಿ ಕೊಡುತ್ತಾರೆ.

ನಮಗೆ ಜ್ಞಾನ ಕೊಡುವ ಶಕ್ತಿ ಯಾವುದೆಂದರೆ: 'ವಾಙ್ಮನ'. ಜ್ಞಾನ ಹುಟ್ಟುವುದು ಶಬ್ದದ ಮೂಲಕ. ಮಾತಿಲ್ಲದೆ ಯಾವುದೇ ಅರಿವು ಬರುವುದಿಲ್ಲ. ಮಾತು ಅನ್ನುವುದು ಜ್ಯೋತಿ. ಇದರ ಜೊತೆಗೆ ಕಿವಿ, ಕಣ್ಣು ಹಾಗೂ ಎಲ್ಲವನ್ನೂ ಗ್ರಹಣ ಮಾಡುವ ಮನಸ್ಸು. ಹೀಗೆ ಮನಸ್ಸು, ಮಾತು, ಕಣ್ಣು, ಕಿವಿ, ಇವು ನಮ್ಮ ದೇಹದಲ್ಲಿ ನಮಗೆ ಜ್ಞಾನದ ವಿಕಾಸವನ್ನು ಕೊಡತಕ್ಕಂತಹ ಇಂದ್ರಿಯಗಳು. ನೋಡಿ-ಕಲಿಯುವುದು, ಕೇಳಿ-ತಿಳಿಯುವುದು. ಹೇಳಿದ್ದನ್ನು, ಕೇಳಿದ್ದನ್ನು, ನೋಡಿದ್ದನ್ನು ಗ್ರಹಿಸುವುದು ಮನಸ್ಸು. ಈ ನಾಲ್ಕು ಇಂದ್ರಿಯಗಳು ಇಲ್ಲದಿದ್ದರೆ ಮನುಷ್ಯನ ಜ್ಞಾನ ಬೆಳವಣಿಗೆ ಆಗುವುದೇ ಇಲ್ಲ. ಇಲ್ಲಿ ಮಾತಿನ ದೇವತೆ ಅಗ್ನಿ, ಕಣ್ಣಿನ ದೇವತೆ ಸೂರ್ಯ, ಕಿವಿಯ ದೇವತೆ ಚಂದ್ರ. ಎಲ್ಲವನ್ನೂ ಗ್ರಹಣ ಮಾಡುವ ಮನಸ್ಸಿನ ದೇವತೆ ಇಂದ್ರ-ಗರುಡ-ಶೇಷ-ರುದ್ರರು. ವಿಶೇಷವಾಗಿ ಶಿವಶಕ್ತಿ ಮನಸ್ಸಿನ ದೇವತೆ. ರುದ್ರ ದೇವರ ಅನುಗ್ರಹ ಇಲ್ಲದೆ ಯಾವುದೇ ಅರಿವು ಬೆಳೆಯದು. ಹೀಗೆ ಪಂಚಭೂತಗಳ ದೇವತೆಗಳಿಂದ ದೇಹ ಧಾರಣೆಯಾದರೆ, ಕಣ್ಣು, ಕಿವಿ, ಮಾತು ಮತ್ತು ಮನಸ್ಸಿನ ದೇವತೆಗಳಿಂದ ಅರಿವು ಬೆಳೆಯುತ್ತದೆ.

ಈ ಮೇಲಿನ ವಿವರಣೆ ನೀಡಿದ ಪಿಪ್ಪಲಾದರು ಮುಂದೆ ದೇವತೆಗಳ ತಾರತಮ್ಯವನ್ನು ಹಾಗೂ ಪ್ರಾಣದೇವರ ಹಿರಿಮೆಯನ್ನು ವಿವರಿಸಲು ಒಂದು ಕಥೆಯನ್ನು ವಿವರಿಸುತ್ತಾರೆ: ಒಮ್ಮೆ ಬೆಳಕು ನೀಡುವ ದೇವತೆಗಳಲ್ಲಿ [ಕಣ್ಣಿನ, ಕಿವಿಯ, ಬಾಯಿಯ ಮತ್ತು ಮನಸ್ಸಿನ ಅಭಿಮಾನಿ ದೇವತೆಗಳಲ್ಲಿ] ಒಂದು ಚರ್ಚೆ ಆರಂಭವಾಯಿತಂತೆ. [ಇದು ಒಂದು ಅಪೂರ್ವ ಜ್ಞಾನವನ್ನು ನಮಗೆ ತಿಳಿಸುವುದಕ್ಕೋಸ್ಕರ ದೇವತೆಗಳು ಆಡಿದ ಒಂದು ನಾಟಕ]. ಇಲ್ಲಿ ಪ್ರತಿಯೊಬ್ಬ ದೇವತೆಯೂ 'ದೇಹಧಾರಣೆಯಲ್ಲಿ ತಮ್ಮ ಪಾತ್ರ ಮುಖ್ಯ ಎಂದು ಸಮರ್ಥಿಸಿ ಕೊಳ್ಳುತ್ತಿದ್ದರಂತೆ. ಕಣ್ಣಿನ ದೇವತೆ ಸೂರ್ಯ: "ನಾನಿಲ್ಲದೆ ಜೀವನಿಗೆ ಬದುಕೇ ಇಲ್ಲಾ" ಎಂದರೆ, ಕಿವಿಯ ದೇವತೆ ಚಂದ್ರ: "ಕಣ್ಣಿಗಿಂತ ಕಿವಿ ಮುಖ್ಯ, ಆದ್ದರಿಂದ ನಾನು ಶ್ರೇಷ್ಠ" ಎಂದನಂತೆ. ಇದಕ್ಕೆ ಬಾಯಿಯ ದೇವತೆ "ಮಾತೇ ಮುಖ್ಯ, ಮಾತಿಲ್ಲದೆ ಏನೂ ಇಲ್ಲ. ಹಾಗಾಗಿ ನಾನು ಮುಖ್ಯ" ಎಂದನಂತೆ. ಆಗ ಮನಸ್ಸಿನ ದೇವತೆ: "ನೋಡುವುದು, ಕೇಳುವುದು, ಮಾತನಾಡುವುದು, ಇವೆಲ್ಲವುಗಳಿಂದ ಮುಖ್ಯವಾಗಿ ಗ್ರಹಣ ಮಾಡುವ ಮನಸ್ಸು. ಆದ್ದರಿಂದ ಎಲ್ಲವುದಕ್ಕಿಂತ ಮುಖ್ಯ ನಾನು" ಎಂದನಂತೆ. ಹೀಗೆ ಎಲ್ಲಾ ದೇವತೆಗಳು ತಾವೇ ಮುಖ್ಯ ಎಂದು ಪ್ರಾಣ ದೇವರ ಮುಂದೆ ನಿಂತು ಚರ್ಚಿಸಿದರಂತೆ. ಎಲ್ಲರೂ "ಈ ಬಾಣವನ್ನು ಧರಿಸಿದವನು ನಾನು" ಎನ್ನುವ ಅಭಿಪ್ರಾಯವನ್ನು ಮುಂದಿಟ್ಟರಂತೆ. [ಇಲ್ಲಿ ಬಾಣ ಎನ್ನುವ ಪದ ಬಳಕೆಯಾಗಿದೆ. ಪ್ರಾಚೀನ ಸಂಸ್ಕೃತದಲ್ಲಿ ಬಾಣ ಎಂದರೆ ಶರೀರ. ಬಾ= ಬಯಕೆ/ಕಾಮನೆ; ಅಣ=ಈಡೇರಿಸುವ ಸಾಧನ. ನಮ್ಮ ಬಯಕೆಗಳನ್ನು ನಾವು ನಮ್ಮ ದೇಹದ ಮೂಲಕ ಈಡೇರಿಸಿಕೊಳ್ಳುತ್ತೇವೆ. ಆದ್ದರಿಂದ ದೇಹವನ್ನು ಬಾಣ ಎಂದು ಕರೆಯುತ್ತಾರೆ].

*ತಾನ್ ವರಿಷ್ಠಃ ಪ್ರಾಣ ಉವಾಚ । ಮಾ ಮೋಹಮಾಪದ್ಯಥ್ ಅಹಮೇವೈತತ್ ಪಂಚಧಾಽತ್ಮಾನಂ ಪ್ರವಿಭಜ್ಯೈತದ್ಬಾಣಮವಷ್ಟಭ್ಯ ವಿಧಾರಯಾಮೀತಿ । ತೇಽಶ್ರದ್ದಧಾನಾ ಬಭೂವುಃ ॥ ೩ ॥*

ದೇವತೆಗಳ ಚರ್ಚೆಯನ್ನು ಕೇಳಿಸಿಕೊಂಡ ದೇವತಾ ಸಮುದಾಯದಲ್ಲಿ ವರಿಷ್ಠನಾದ ಪ್ರಾಣದೇವರು ಹೇಳುತ್ತಾರೆ: "ಏಕೆ ಸುಮ್ಮನೆ ವ್ಯರ್ಥ ಚರ್ಚೆ ಮಾಡುತ್ತೀರಾ? ಈ ದೇಹಕ್ಕೆ ಜ್ಞಾನಶಕ್ತಿ, ಕ್ರಿಯಾಶಕ್ತಿ ಕೊಟ್ಟು ಅದು ಕುಸಿಯದಂತೆ ಧರಿಸಿದವರು ನೀವಲ್ಲ ನಾನೇ. ನಿಮ್ಮ ಕಣ್ಣಮುಂದೆ ಕಾಣುವ ನನ್ನ ಐದು ರೂಪಗಳಿಂದ ಈ ಶರೀರವನ್ನು ಪ್ರವೇಶಮಾಡಿ, ಅದನ್ನು ನಾನು ಧರಿಸಿದ್ದೇನೆ ಹಾಗೂ ನೀವು ನನಗೆ ಅಧೀನರಾಗಿದ್ದೀರಿ" ಎನ್ನುತ್ತಾರೆ. ಪ್ರಾಣದೇವರ ಈ ಮಾತಿಗೆ ದೇವತೆಗಳು ವಿಶ್ವಾಸ ತೋರುವುದಿಲ್ಲ. ಆಗ ಪ್ರಾಣದೇವರು ಒಂದು ಉಪಾಯವನ್ನು ಸೂಚಿಸುತ್ತಾರೆ.

*ಸೋಽಭಿಮಾನಾದೂರ್ಧ್ವಮುತ್ಕ್ರಾಮತ ಇವ ತಸ್ಮಿನ್ನುತ್ಕ್ರಾಮತ್ಯಥೇತರೇ ಸರ್ವ ಏವೋತ್ಕ್ರಮಂತೇ ತಸ್ಮಿಂಶ್ಚ ಪ್ರತಿಷ್ಠಮಾನೇ ಸರ್ವ ಏವ ಪ್ರತಿಷ್ಠಂತೇ । ತದ್ಯಥಾ ಮಕ್ಷಿಕಾ ಮಧುಕರರಾಜಾನಮುತ್ಕ್ರಾಮಂತಂ ಸರ್ವ ಏವೋತ್ಕ್ರಮಂತೇ ತಸ್ಮಿಂಶ್ಚ ಪ್ರತಿಷ್ಠಮಾನೇ ಸರ್ವಾ ಏವ ಪ್ರತಿಷ್ಠಂತೇ । ಏವಂ ವಾಙ್ಮನಶ್ಚಕ್ಷುಃ ಶ್ರೋತ್ರಂ ಚ । ತೇ ಪ್ರೀತಾಃ ಪ್ರಾಣಂ ಸ್ತುನ್ವಂತಿ ॥ ೪ ॥*

ಪ್ರಾಣದೇವರು ಹೇಳುತ್ತಾರೆ: "ನಮ್ಮಲ್ಲಿ ಒಬ್ಬೊಬ್ಬರಾಗಿ ಈ ದೇಹದಿಂದ ಹೊರ ಹೋಗೋಣ. ಯಾರು ಹೊರ ಹೋದಾಗ ಈ ದೇಹ ಬಿದ್ದು ಹೋಗುತ್ತದೋ ಅವರು ನಿಜವಾದ ಧಾರಕ" ಎಂದು. ಹೀಗೆ ಹೇಳಿ ದೇಹದಿಂದ ಆಚೆ ಹೊರಟವರಂತೆ ಪ್ರಾಣದೇವರು ಏಳುತ್ತಾರೆ. ಆಗ ಅಲ್ಲಿ ಇತರ ದೇವತೆಗಳಿಗೆ ನಿಲ್ಲಲು ಸಾಧ್ಯವಾಗುವುದಿಲ್ಲ. ಅದೇ ರೀತಿ ದೇಹ ಪ್ರವೇಶ ಕ್ರಿಯೆಯಲ್ಲಿ ಒಬ್ಬೊಬ್ಬರಾಗಿ ಇತರ ದೇವತೆಗಳನ್ನು ದೇಹ ಪ್ರವೇಶಿಸುವಂತೆ ಹೇಳುತ್ತಾರೆ ಪ್ರಾಣದೇವರು. ಆದರೆ ಎಲ್ಲಾ ದೇವತೆಗಳು ಪ್ರವೇಶಿಸಿದರೂ ಕೂಡಾ, ಪ್ರಾಣದೇವರ ಪ್ರವೇಶದ ತನಕ ಅಲ್ಲಿ ಯಾವುದೇ ಚಟುವಟಿಕೆ ಅವರಿಂದ ಸಾಧ್ಯವಾಗಲಿಲ್ಲ. ಆಗ ದೇವತೆಗಳಿಗೆ ಪ್ರಾಣದೇವರ ಪ್ರಾಮುಖ್ಯತೆ ಮನವರಿಕೆಯಾಗುತ್ತದೆ ಮತ್ತು ಅವರು ಪ್ರಾಣದೇವರನ್ನು ತಮ್ಮೆಲ್ಲರ ಮುಖಂಡ ಎಂದು ಒಪ್ಪಿಕೊಳ್ಳುತ್ತಾರೆ.

ಪ್ರಾಣದೇವರ ಮಹತ್ವವನ್ನು ಇಲ್ಲಿ ಪಿಪ್ಪಲಾದರು ಒಂದು ಅಪೂರ್ವವಾದ ಪ್ರಕೃತಿಯ ದೃಷ್ಟಾಂತದೊಂದಿಗೆ ವಿವರಿಸಿದ್ದಾರೆ. ಒಂದು ಜೇನುಗೂಡು. ಅಲ್ಲಿ ಒಂದು ರಾಣಿಹುಳ ರಾಜನಂತೆ ಕಾರ್ಯಭಾರ ಮಾಡುತ್ತಿರುತ್ತದೆ. ಎಲ್ಲಾ ಜೇನುಹುಳಗಳ ಚಲನವಲನ, ನಿಯಂತ್ರಣ ಆ ಪ್ರಧಾನ ರಾಣಿಹುಳದಲ್ಲಿರುತ್ತದೆ. ಒಂದು ವೇಳೆ ಈ ರಾಣಿಹುಳ ಗೂಡನ್ನು ಬಿಟ್ಟು ಹೊರಟರೆ ಇತರ ಎಲ್ಲಾ ಹುಳಗಳು ಅದನ್ನು ಹಿಂಬಾಲಿಸುತ್ತವೆ. ನಮ್ಮ ದೇಹ ಒಂದು ಜೇನುಗೂಡಿನಂತೆ. ಇಲ್ಲಿ ಪ್ರಾಣದೇವರು ಮಧುಕರ ರಾಜನಂತೆ. ಇತರ ದೇವತೆಗಳು ಜೇನು ಹುಳಗಳಂತೆ. ನಮ್ಮ ದೇಹದಲ್ಲಿ ಭಗವಂತನನ್ನು ಬಿಟ್ಟರೆ ಎರಡನೇ ಸರ್ವಾಧಿಕ, ಸರ್ವೋತ್ಕೃಷ್ಟ ಶಕ್ತಿ ಪ್ರಾಣದೇವರು. ಅವರ ಅಧೀನವಾಗಿ ಇತರ ಇಂದ್ರಿಯಾಭಿಮಾನಿ ದೇವತೆಗಳಿರುತ್ತಾರೆ.

ಪ್ರಾಣದೇವರ ಮಹತ್ವವನ್ನು ತಿಳಿದ ಎಲ್ಲಾ ದೇವತೆಗಳಿಗೂ ಬಹಳ ಸಂತೋಷವಾಯಿತು. ಅವರು ಪ್ರಾಣದೇವರನ್ನು ಸ್ತೋತ್ರ ಮಾಡಿದರು.

ಈ ಅಧ್ಯಾಯದಲ್ಲಿ ಬರುವ ಮುಂದಿನ ಒಂಬತ್ತು ಮಂತ್ರಗಳು ದೇವತೆಗಳು ಮಾಡಿದ ಪ್ರಾಣಸ್ತುತಿ. ಇದನ್ನು ತ್ರಿವಿಕ್ರಮಪಂಡಿತರ ವಾಯುಸ್ತುತಿಯೊಂದಿಗೆ ನಿತ್ಯ ಪಠಿಸಿದರೆ ಅದೊಂದು ಅದ್ಭುತ ಅನುಷ್ಠಾನ. ಪುರುಷಸೂಕ್ತ ಭಗವಂತನಿಗೆ ಹೇಗೆ ಅತ್ಯಂತ ಪ್ರಿಯವೋ ಹಾಗೇ ಪ್ರಾಣದೇವರ ಉಪಾಸನೆಯಲ್ಲಿ ವಾಯುಸ್ತುತಿ ಅತ್ಯಂತ ಶ್ರೇಷ್ಠ. ಇಲ್ಲಿ ಕೇವಲ ವಾಯುಸ್ತುತಿ ಮಾತ್ರವಲ್ಲ, ಹರಿಸ್ತುತಿಯೂ ಇದೆ. ಆದ್ದರಿಂದ ಇದು ನಿಜವಾದ ಹರಿವಾಯುಸ್ತುತಿ. [ತ್ರಿವಿಕ್ರಮ ಪಂಡಿತರು ಹರಿಸ್ತುತಿ ಮತ್ತು ವಾಯುಸ್ತುತಿಯನ್ನು ಬೇರೆ ಬೇರೆಯಾಗಿ ಬರೆದಿರುವುದರಿಂದ, ಅವರು ಬರೆದಿರುವ ವಾಯುಸ್ತುತಿಯನ್ನು ಹರಿವಾಯುಸ್ತುತಿ ಎಂದು ಕರೆಯುವುದು ಅಷ್ಟು ಪ್ರಸ್ತುತವಲ್ಲ. ಅವರು ವಿಷ್ಣುಸ್ತುತಿ ಬೇರೆಯಾಗಿ ಬರೆದಿರುವುದರಿಂದ ವಾಯುಸ್ತುತಿ ರಚನೆ ವಿಷ್ಣುಪರ ಅನುಸಂಧಾನದಿಂದ ಬರೆದಿಲ್ಲ ಎನ್ನುವುದು ತಿಳಿಯುತ್ತದೆ. ಆದರೆ ಇಲ್ಲಿ ಬರುವ ಒಂಬತ್ತು ಮಂತ್ರಗಳ ಪ್ರಾಣಸ್ತುತಿ- ವಿಷ್ಣು ಮತ್ತು ವಾಯುಪರವಾಗಿರುವ ವೈದಿಕ ಸ್ತುತಿ].

ಇಲ್ಲಿ ಮೊದಲ ಎರಡು ಮಂತ್ರಗಳಲ್ಲಿ ಪರೋಕ್ಷ ಸಂಬೋಧನೆ ಇದ್ದರೆ ಉಳಿದ ಏಳು ಮಂತ್ರಗಳಲ್ಲಿ ನೇರ ಸಂಬೋಧನೆ ಇದೆ. ಬನ್ನಿ, ದೇವತೆಗಳು ಮಾಡಿದ ಈ ಶ್ರೇಷ್ಠವಾದ ಹರಿವಾಯು ಸ್ತುತಿಯನ್ನು ಪಿಪ್ಪಲಾದರ ಬಾಯಿಂದ ಕೇಳೋಣ:

*ಏಷೋಽಗ್ನಿಸ್ತಪತ್ಯೇಷ ಸೂರ್ಯ ಏಷ ಪರ್ಜನ್ಯೋ ಮಘವಾನೇಷ ವಾಯುಃ*
*ಏಷ ಪೃಥಿವೀ ರಯಿರ್ದೇವಃ ಸದಸಚ್ಚಾಮೃತಂ ಚ ಯತ್ ॥ ೫ ॥ ೧॥*

ಅಗ್ನಿಯೊಳಗಿದ್ದು ಅಗ್ನಿ ನಾಮಕನಾಗಿರುವವನು, ಸೂರ್ಯನೊಳಗಿದ್ದು ಸೂರ್ಯ ನಾಮಕನಾಗಿರುವವನು, ಮೋಡದೊಳಗಿದ್ದು ಮಳೆ ಸುರಿಸುವವನು, ಇಂದ್ರನೊಳಗಿದ್ದು ಮೂರು ಲೋಕಗಳ ರಕ್ಷಣೆ ಮಾಡುವವನು, ವಾಯುದೇವರೊಳಗಿದ್ದು ಜಗತ್ತನ್ನು ಉಸಿರಾಡಿಸುವವನು, ಭೂಮಿಯೊಳಗಿದ್ದು ಸಮಸ್ತ ಭೂಲೋಕವನ್ನು ಧಾರಣೆ ಮಾಡಿದವನು, ಭಾರತೀದೇವಿಯೊಳಗಿದ್ದು ಸಮಸ್ತ 'ವಾಕ್' ನಿಯಂತ್ರಿಸುವವನು ಮತ್ತು ಸಮಸ್ತ ಚರಾಚರಾತ್ಮಕ ಪ್ರಪಂಚವನ್ನು ಧಾರಣೆ ಮಾಡಿದವನು- 'ಅವನು'.[ಇಲ್ಲಿ 'ಅವನು ಎಂದರೆ ಮೊದಲು ಭಗವಂತ ನಂತರ ಮುಖ್ಯಪ್ರಾಣ- ಈ ಎರಡೂ ಅರ್ಥದಲ್ಲಿ ಈ ಮಂತ್ರವನ್ನು ನೋಡಬಹುದು ಎನ್ನುವುದು ಮುಂದೆ ಬರುವ ಮಂತ್ರಗಳಿಂದ ತಿಳಿಯುತ್ತದೆ].

*ಅರಾ ಇವ ರಥನಾಭೌ ಪ್ರಾಣೇ ಸರ್ವಂ ಪ್ರತಿಷ್ಠಿತಂ ।*
*ಋಚೋ ಯಜೂಂಷಿ ಸಾಮಾನಿ ಯಜ್ಞಃ ಕ್ಷತ್ರಂ ಬ್ರಹ್ಮ ಚ ॥ ೬ ॥ ೨॥*

ಯಾವ ರೀತಿ ರಥದ ಚಕ್ರದ ನಾಭಿ(Axle) ಇಡೀ ರಥವನ್ನು ಧಾರಣೆ ಮಾಡಿದೆಯೋ, ಹಾಗೇ ಭಗವಂತ ಮತ್ತು ಪ್ರಾಣದೇವರು ಈ ವಿಶ್ವವೆಂಬ ರಥದ ಚಕ್ರದ ನಾಭಿ ರೂಪದಲ್ಲಿ ವಿಶ್ವಧಾರಕರಾಗಿದ್ದಾರೆ. ಇವರು ಕೇವಲ ರೂಪಾತ್ಮಕ ಜಗತ್ತಿನ ಧಾರಕರಷ್ಟೇ ಅಲ್ಲ, ನಾಮಾತ್ಮಕ ಪ್ರಪಂಚದ ಧಾರಕ ಶಕ್ತಿ ಕೂಡಾ ಇವರೇ. [ಗದ್ಯ, ಪದ್ಯ ಮತ್ತು ಗಾನ ರೂಪದ ಮೂರು ವೇದಗಳನ್ನು ಧಾರಣೆ ಮಾಡಿದವನು ಆ ಭಗವಂತ. ಸಮಸ್ತ ವೇದದ ಸಮಸ್ತ ಶಬ್ದವೂ ಆ ಭಗವಂತನನ್ನು ಹೇಳುತ್ತದೆ ಎನ್ನುವುದನ್ನು ನಾವಿಲ್ಲಿ ತಿಳಿದಿರಬೇಕು] ನಾವು ಮಾಡುವ ಯಜ್ಞ[ಸಮಸ್ತ ಕರ್ಮ] ಭಗವಂತನ ಅಧೀನ. ಸಮಾಜದ ರಕ್ಷಕರು, ಸಮಾಜಕ್ಕೆ ಜ್ಞಾನವನ್ನು ಕೊಟ್ಟು ಜ್ಞಾನದಿಂದ ಸಮಾಜವನ್ನು ಶ್ರೀಮಂತಗೊಳಿಸುವವರು ಮತ್ತು ಎಲ್ಲರೂ ಆ ಭಗವಂತನ ಮತ್ತು ಭಗವಂತನ ನಂತರ ಪ್ರಾಣದೇವರ ಅಧೀನ.

*ಪ್ರಜಾಪತಿಶ್ಚರಸಿ ಗರ್ಭೇ ತ್ವಮೇವ ಪ್ರತಿಜಾಯಸೇ ।*
*ತುಭ್ಯಂ ಪ್ರಾಣ ಪ್ರಜಾಸ್ತ್ವಿಮಾ ಯತ್ ಪ್ರಣೈಃ ಪ್ರತಿತಿಷ್ಠಸಿ ॥ ೭ ॥ ೩॥*

"ಪ್ರಜಾಪತಿಯಾಗಿ ಗರ್ಭದ ಒಳಗಿರುವ ಪ್ರಜೆಯನ್ನು ರಕ್ಷಣೆ ಮಾಡುವವನು 'ನೀನು' [ಇಲ್ಲಿ ನೇರವಾಗಿ 'ನೀನು' ಎಂದು ಪ್ರಾಣ ದೇವರನ್ನು ದೇವತೆಗಳು ಸ್ತುತಿಸುವುದನ್ನು ನಾವು ಗಮನಿಸಬೇಕು. ಹಿಂದೆ ಪ್ರಜಾಪತಿ ಎಂದರೆ ಭಗವಂತ ಎನ್ನುವುದನ್ನು ನೋಡಿದ್ದೇವೆ. ಭಗವಂತನ ನಂತರ ಪ್ರಜಾಪತಿ: ಬ್ರಹ್ಮ-ವಾಯು] ಹುಟ್ಟಲಿರುವ ಸಂತಾನದ ಪಾಲಕನಾಗಿ, ಗರ್ಭದಲ್ಲಿ ನಿಂತು ಆ ಜೀವಕ್ಕೆ ಒಂದು ಸುಂದರ ರೂಪವನ್ನು ಕೊಡುವ ಶಿಲ್ಪಿ ನೀನು; ಗರ್ಭದಲ್ಲಿರುವ ಮಗುವಿನೊಂದಿಗೆ ಹುಟ್ಟುವವನು ನೀನು; ಹುಟ್ಟಿದ ಮಗುವನ್ನು ಆ ಮಗುವಿನ ಪೂರ್ಣ ಆಯಸ್ಸಿನ ತನಕ ಅಂತರ್ಯಾಮಿಯಾಗಿ ರಕ್ಷಿಸುವವನು ನೀನು. [ವಯಸ್ಸಾದಂತೆ ಇತರ ದೇವತೆಗಳು ಜೀವನನ್ನು

ಬಿಟ್ಟುಹೋಗಬಹುದು. ಉದಾಹರಣೆಗೆ ಕಣ್ಣು ಕುರುಡಾಗಬಹುದು, ಕಿವಿ-ಕಿವುಡಾಗಬಹುದು. ಆದರೆ ಪ್ರಾಣದೇವರು ಮತ್ತು ಭಗವಂತ ಕೊನೇ ಕ್ಷಣದ ತನಕ ಜೀವನೊಂದಿಗಿದ್ದು ರಕ್ಷಣೆ ಮಾಡುತ್ತಾರೆ]. ಹಾಗಾಗಿ ಸಮಸ್ತ ಜೀವಜಾತವೂ ನಿನ್ನ ಅಧೀನ. ಸಮಸ್ತ ಇಂದ್ರಿಯಾಭಿಮಾನಿ ದೇವತೆಗಳ ಮಧ್ಯದಲ್ಲಿ ನಿಂತು ಎಲ್ಲವನ್ನು ಪಾಲಿಸುವವನು ನೀನು" ಎಂದು ದೇವತೆಗಳು ಪ್ರಾಣದೇವರನ್ನು [ಮತ್ತು ಭಗವಂತನನ್ನು] ಸ್ತುತಿಸುತ್ತಾರೆ.

*ದೇವಾನಾಮಸಿ ವಹ್ನಿತಮಃ ಪಿತೃಣಾಂ ಪ್ರಥಮಾ ಸ್ವಧಾ ।*

*ಋಷೀಣಾಂ ಚರಿತಂ ಸತ್ಯಮಥರ್ವಾಙ್ಗಿರಸಾಮಪಿ ॥ ೮ ॥ ೪॥*

ಹಿಂದಿನ ಮಂತ್ರದಲ್ಲಿ ಅಗ್ನಿ ಶಬ್ದದಲ್ಲಿ ಪ್ರಾಣನನ್ನು ಸಮನ್ವಯ ಮಾಡಿರುವುದನ್ನು ನೋಡಿದ್ದೇವೆ. ಇಲ್ಲಿ ವಹ್ನಿ ಎನ್ನುವ ಶಬ್ದದಲ್ಲಿ ಪ್ರಾಣನನ್ನು ಸಮನ್ವಯ ಮಾಡಿ ಸ್ತುತಿಸುವುದನ್ನು ಕಾಣುತ್ತೇವೆ. 'ಅಗ್ನಿ' ಎಂದರೆ ಚಲನೆ ಇಲ್ಲದ ವಸ್ತುವಿಗೆ ಚಲನೆ ಕೊಡುವಂತಹದ್ದು. 'ವಹ್ನಿ' ಎಂದರೆ ಕೊಂಡೊಯ್ಯುವಂತಹದ್ದು. ಈ ಎರಡು ಶಬ್ದಗಳ ನಿರ್ವಚನದ ಅರ್ಥ ಬೇರೆಬೇರೆ. ನಾವು ಯಜ್ಞದಲ್ಲಿ ಯಾವ ದೇವತೆಯ ಮಂತ್ರವನ್ನು ಜಪಿಸಿ ಆಹುತಿ ಕೊಡುತ್ತೇವೋ, ಅದನ್ನು ಆ ದೇವತೆಗೆ ಮುಟ್ಟಿಸುವವನು 'ವಹ್ನಿ'. ಹಾಗಾಗಿ ನಾವು ಕೊಟ್ಟ ಆಹುತಿಯನ್ನು ದೇವತೆಗಳಿಗೆ ತಲುಪಿಸುವವನು ಎನ್ನುವ ಅರ್ಥದಲ್ಲಿ ಬೆಂಕಿಯನ್ನು ವಹ್ನಿ ಎನ್ನುತ್ತಾರೆ. ನಾವು ಮಾಡುವ ಸಮಸ್ತ ಕರ್ಮವನ್ನು ಭಗವಂತನಿಗೆ/ದೇವತೆಗಳಿಗೆ ಕೊಂಡುಹೋಗಿ ಮುಟ್ಟಿಸುವವರು ಮೂಲತಃ ಪ್ರಾಣದೇವರು. ಆದ್ದರಿಂದ "ನೀನು ವಹ್ನಿತಮಃ" ಎಂದು ದೇವತೆಗಳು ಪ್ರಾಣನನ್ನು ಸ್ತುತಿಸುತ್ತಾರೆ. ಕೇವಲ ದೇವತೆಗಳಿಗೆ ಆಹುತಿ ತಲುಪಿಸುವುದಷ್ಟೇ ಅಲ್ಲ, "ಪಿತೃಪತಿಗಳ ಒಳಗಿದ್ದು ಪಿತೃಗಳಿಗೆ ಕವ್ಯವನ್ನು ಸಲ್ಲಿಸುವ 'ಪ್ರಥಮಾ ಸ್ವಧಾ' ನೀನು" ಎನ್ನುತ್ತಾರೆ ದೇವತೆಗಳು.
[ನಾವು ದೇವತೆಗಳಿಗೆ ಹವಿಸ್ಸನ್ನು ಅರ್ಪಿಸುವಾಗ ಸ್ವಾಹಾ ಎಂದೂ, ಹಾಗೂ ಪಿತೃಗಳಿಗೆ ಕವ್ಯವನ್ನು ಅರ್ಪಿಸುವಾಗ ಸ್ವಧಾ ಎಂದು ಹೇಳಿ ಅರ್ಪಿಸುತ್ತೇವೆ. ಇದು ಒಂದು ರೀತಿ ಅವರ ವಿಳಾಸವಿದ್ದಂತೆ. ಆದ್ದರಿಂದ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸುವಾಗ ಸ್ವಧಾ ಎಂದಾಗಲೀ, ಪಿತೃಗಳಿಗೆ ಕವ್ಯವನ್ನು ಅರ್ಪಿಸುವಾಗ ಸ್ವಾಹಾ ಎಂದು ಹೇಳಿ ಅರ್ಪಿಸುವುದು ತಪ್ಪು. ಹಾಗೆ ಹೇಳಿ ಅರ್ಪಿಸಿದರೆ ಅದು ತಲುಪಬೇಕಾದವರಿಗೆ ತಲುಪದೇ, ದಾನವರ ಪಾಲಾಗಬಹುದು. ಈ ಮಂತ್ರದಲ್ಲಿ 'ಸ್ವಧಾ' ಎನ್ನುವ ಪದ ವಿಶೇಷ ಅರ್ಥದಲ್ಲಿ ಬಳಕೆಯಾಗಿದೆ. ಯಮ-ಸೋಮ-ಕವ್ಯವಾಹ ಇವರು ಪಿತೃಪತಿಗಳು. ಇವರು ನಾವು ಅರ್ಪಿಸಿದ ಕವ್ಯವನ್ನು ಇತರ ಪಿತೃದೇವತೆಗಳಿಗೆ ತಲುಪಿಸುವ ಪಿತೃಪತಿಗಳಾದ್ದರಿಂದ, ಇವರನ್ನು ಸ್ವಧಾ ಎಂದೂ ಕರೆಯುತ್ತಾರೆ. ಆದರೆ ಪಿತೃಪತಿಗಳಿಗೂ ಮೊದಲಿಗನಾಗಿ, ಅವರೊಳಗಿದ್ದು ಆ ಕೆಲಸವನ್ನು ಮಾಡುವ ನೀನು 'ಪ್ರಥಮಾ ಸ್ವಧಾ' ಎಂದು ಇಲ್ಲಿ ದೇವತೆಗಳು ಸ್ತುತಿಸಿದ್ದಾರೆ.]
ಋಷಿಗಳ ಬದುಕು, ಜೀವನ, ಸಾತ್ವಿಕವಾಗಿ ಭಗವಂತನನ್ನು ಒಲಿಸಿಕೊಳ್ಳುವುದಕ್ಕಾಗಿ ಅವರು ಮಾಡುವ ಅನುಷ್ಠಾನ, ಅವರಲ್ಲಿರುವ ಪ್ರಾಮಾಣಿಕತೆ, ಭಗವಂತನ ಬಗೆಗಿರುವ ಕಳಕಳಿ, ಇವೆಲ್ಲವನ್ನೂ "ಋಷಿಗಳ ಒಳಗಿದ್ದು ನಡೆಸುವವನು ನೀನು" ಎನ್ನುತ್ತಾರೆ ದೇವತೆಗಳು. [ಇಲ್ಲಿ ವಿಶೇಷವಾಗಿ ಅಥರ್ವ ಮತ್ತು ಅಂಗೀರಸ ಋಷಿಗಳನ್ನು ಹೆಸರಿಸಲಾಗಿದೆ. ಚತುರ್ಮುಖನಿಂದ ವೇದವನ್ನು ಉಪದೇಶ ಪಡೆದವರು ಅಥರ್ವ ಮುನಿಗಳು. ಅವರ ನಂತರ ಈ ಪರಂಪರೆಯನ್ನು ಬೆಳೆಸಿಕೊಂಡು ಬಂದವರು ಅಂಜೀರಸರು].

*ಇಂದ್ರಸ್ತ್ವಂ ಪ್ರಾಣ ತೇಜಸಾ ರುದ್ರೋऽಸಿ ಪರಿರಕ್ಷಿತಾ ।*

*ತ್ವಮಂತರಿಕ್ಷೇ ಚರಸಿ ಸೂರ್ಯಸ್ತ್ವಂ ಜ್ಯೋತಿಷಾಂ ಪತಿಃ ॥ ೯ ॥ ೫॥*

ಮುಂದುವರಿದು ದೇವತೆಗಳು ಹೇಳುತ್ತಾರೆ: "ನೀನು ಇಂದ್ರಸ್ತ್ವಂ" ಎಂದು. ಇಂದ್ರ-ದೇವತೆಗಳ ರಾಜ. 'ಇಂದ್ರ' ಎಂದರೆ ಸರ್ವಸಮರ್ಥ. ನಿಜವಾದ ಸರ್ವಸಮರ್ಥ ಭಗವಂತನೊಬ್ಬನೆ. ಭಗವಂತನ ನಂತರ ಸರ್ವಸಮರ್ಥ ಪ್ರಾಣದೇವರು. "ಎಲ್ಲಾ ಜೀವಜಾತಗಳಲ್ಲಿ ಸರ್ವಸಮರ್ಥನಾದ ನಿರ್ವಾಹಕ, ಒಡೆಯ, ದೇವತೆಗಳಿಗೂ ಒಡೆಯ ನೀನು. ಏಕೆಂದರೆ ಇಂದ್ರನನ್ನು ನಿಯಂತ್ರಿಸುವ ತೇಜಸ್ಸು ನಿನ್ನದು. ನಿನ್ನ ತೇಜಸ್ಸಿನಿಂದ ಇಂದ್ರ ಇಂದ್ರನಾಗಿದ್ದಾನೆ. ನೀನೇ ಇಂದ್ರ ಹಾಗೂ ನಿನಗೂ ಇಂದ್ರ ಆ ಭಗವಂತ" ಎಂದು ದೇವತೆಗಳು ಪ್ರಾಣನನ್ನು ಸ್ತುತಿಸುತ್ತಾರೆ.

ಮನಸ್ಸಿಗೆ ಮತ್ತು ದೇಹಕ್ಕೆ ಆರೋಗ್ಯವನ್ನು ಕೊಟ್ಟು, ನಮ್ಮನ್ನು ರಕ್ಷಣೆ ಮಾಡುವವ ರುದ್ರ. ಶಿವನಿಲ್ಲದ ದೇಹ ಶವ. ಆದರೆ "ಆ ರುದ್ರಶಕ್ತಿಯ ಒಳಗಿದ್ದು ಎಲ್ಲವನ್ನೂ ಮಾಡುವ ರುದ್ರ ಶಬ್ದವಾಚ್ಯ ನೀನೇ" ಎನ್ನುತ್ತಾರೆ ದೇವತೆಗಳು. ನಮ್ಮೊಳಗೆ ರಕ್ತ, ಗಾಳಿ, ಆಹಾರ ಸಂಚಾರಕ್ಕೆ ಬೇಕಾದ ಅಂತರಿಕ್ಷ(space, ಆಕಾಶ/ಅವಕಾಶ)ವಿದೆ. "ಆ ಅಂತರಿಕ್ಷವನ್ನು ನಿಯಂತ್ರಿಸಿ, ಶುದ್ಧಿಗೊಳಿಸಿ ನಮಗೆ ಬದುಕು ಕೊಡುವವನು ನೀನು. ಅಷ್ಟೇ ಅಲ್ಲ, ದೇಹದ ಹೊರಗಿರುವ ಆಕಾಶದಲ್ಲಿ ಗಾಳಿಯಾಗಿ ತುಂಬಿ ನಮಗೆ ಉಸಿರು ಕೊಡುವವನು ನೀನು" ಎಂದು ದೇವತೆಗಳು ಸ್ತೋತ್ರ ಮಾಡುತ್ತಾರೆ.

ಹಿಂದೆ ಸೂರ್ಯನ ಅಂತರ್ಯಾಮಿಯಾಗಿ ಪ್ರಾಣನಿದ್ದಾನೆ ಎಂದು ಹೇಳಿರುವುದನ್ನು ನೋಡಿದ್ದೇವೆ. ಇಲ್ಲಿ ಅದನ್ನು ವಿವರಿಸುತ್ತಾ ಹೇಳುತ್ತಾರೆ: "ಸೂರ್ಯನ ಒಳಗಿರುವ ನಿಜವಾದ ಸೂರ್ಯ ನೀನು" ಎಂದು. ಏಕೆಂದರೆ 'ಸೂರ್ಯ' ಎಂದರೆ ಸೂರಿಗಳಿಗೆ ಗೋಚರವಾಗುವವನು ಎಂದರ್ಥ. ಸೂರಿಗಳು ಎಂದರೆ ಜ್ಞಾನಿಗಳು. ಜ್ಞಾನಿಗಳಿಗೆ ಗೋಚರವಾಗುವವರು ಪ್ರಾಣ ಮತ್ತು ಭಗವಂತ. ಸೂರ್ಯನೊಳಗೆ ಶಿವನಿದ್ದಾನೆ-ಅವನೂ ಸೂರ್ಯ; ಶಿವನೊಳಗೆ ಮುಖ್ಯಪ್ರಾಣನಿದ್ದಾನೆ-ಅವನೂ ಸೂರ್ಯ; ಮುಖ್ಯಪ್ರಾಣನಲ್ಲಿ ಭಗವಂತನಿದ್ದಾನೆ ಅವನೂ ಸೂರ್ಯ (ಸೂರ್ಯನಾರಾಯಣ). ಹೀಗೆ "ಬೆಳಕುಗಳಲ್ಲೆಲ್ಲಾ ದೊಡ್ಡ ಬೆಳಕು ನೀನು" ಎಂದು ದೇವತೆಗಳು ಪ್ರಾಣದೇವರನ್ನು ಮತ್ತು ಭಗವಂತನನ್ನು ಸ್ತುತಿಸುತ್ತಾರೆ.

*ಯದಾ ತ್ವಮಭಿವರ್ಷಸ್ಯಥೇಮಾಃ ಪ್ರಾಣ ತೇ ಪ್ರಜಾಃ ।*
*ಆನಂದರೂಪಾಸ್ತಿಷ್ಠಂತಿ ಕಾಮಾಯಾನ್ನಂ ಭವಿಷ್ಯತೀತಿ ॥ ೧೦ ॥ ೬॥*

ಇಳೆಗೆ ಮಳೆ ತರಿಸುವವನು ಪರ್ಜನ್ಯ. ಆತನ ನಿಯಾಮಕ ಇಂದ್ರ. ಆದರೆ ಇಂದ್ರನ ನಿಯಾಮಕ ಮುಖ್ಯಪ್ರಾಣ. ಬಾಹ್ಯವಾಗಿ ನೋಡಿದರೆ ಸೂರ್ಯನ ಬಿಸಿಲಿನಿಂದ ನೀರು ಆವಿಯಾಗಿ ಮೋಡವಾಗುತ್ತದೆ. [ಇದನ್ನು ಮೇಘದೂತದಲ್ಲಿ ಹೀಗೆ ಹೇಳಿದ್ದಾರೆ : ಧೂಮಜ್ಯೋತಿಃಸಲಿಲಮರುತಾಂ ಸನ್ನಿಪಾತಃ ಕ್ವ ಮೇಘಃ]. ಮೋಡ ಮತ್ತು ಗಾಳಿಯ ಸಂಘರ್ಷದಿಂದ ಮಳೆಯಾಗುತ್ತದೆ. ಹಾಗಾಗಿ ಮಳೆಯಾಗುವುದು ವಾಯುದೇವರಿಂದ. ಇಲ್ಲಿ ದೇವತೆಗಳು ಹೇಳುತ್ತಾರೆ: "ನೀನು ಮಳೆ ಬರಿಸಿದಾಗ ಲೋಕದ ಜನ(ಜೀವಜಾತಗಳು) ಸಂತೋಷದಿಂದ ಕುಣಿದಾಡುತ್ತಾರೆ" ಎಂದು. ಏಕೆಂದರೆ ಮಳೆ ಬಂದರೆ ಬೆಳೆ, ಆಹಾರ ಸಮೃದ್ಧಿ. ಹಾಗಾಗಿ ಜೀವನಕ್ಕೆ ಮುಖ್ಯವಾಗಿ ಬೇಕಾದ ಆಹಾರ ಸಿಗುವುದು ಮಳೆಯಿಂದ. ಆ ಮಳೆಯನ್ನು ಕೊಡುವವನು ಇಂದ್ರನ ಅಂತರ್ಗತ, ಸೂರ್ಯನ ಅಂತರ್ಗತ

ವಾಯುದೇವರು. ಒಟ್ಟಿನಲ್ಲಿ ಹೇಳಬೇಕೆಂದರೆ ಇಂದ್ರಿಯಗಳಲ್ಲಿರುವವರು, ಭೌತಿಕ ಪ್ರಪಂಚದಲ್ಲಿದ್ದು ಸಲಹುವವರು: ಭಗವಂತ ಮತ್ತು ಪ್ರಾಣದೇವರು.

*ವ್ರಾತ್ಯಸ್ತ್ವಂ ಪ್ರಾಣೈಕರ್ಷಿರತ್ತಾ ವಿಶ್ವಸ್ಯ ಸತ್ಪತಿಃ ।*
*ವಯಮಾದ್ಯಸ್ಯ ದಾತಾರಃ ಪಿತಾ ತ್ವಂ ಮಾತರಿಶ್ವ ನಃ ॥ ೧೧ ॥ ೭॥*

ಇಲ್ಲಿ 'ವ್ರಾತ್ಯಸ್ತ್ವಂ' ಎನ್ನುವ ಪದ ಬಳಕೆಯಾಗಿದೆ. ನಾವು ಮೊದಲು ಈ ಪದದ ಅರ್ಥ ತಿಳಿದುಕೊಳ್ಳಬೇಕು. ಅಥರ್ವವೇದದಲ್ಲಿ ವ್ರಾತ್ಯಕಾಂಡ ಎನ್ನುವ ಒಂದು ಭಾಗ ಕೂಡಾ ಇದೆ. ಸಂಸ್ಕೃತದಲ್ಲಿ ವ್ರಾತ್ಯ ಎಂದರೆ ಆಚಾರಹೀನ ಎನ್ನುವ ಅರ್ಥವಿದೆ. ನೇಮ-ನಿಷ್ಠೆ ಇಲ್ಲದೆ ದಾರಿತಪ್ಪಿದ ವ್ಯಕ್ತಿ 'ವ್ರಾತ್ಯ'. ಆದರೆ ಈ ಪದಕ್ಕೆ ಒಂದು ವಿಶೇಷ ಅರ್ಥವಿದೆ ಮತ್ತು ಆ ವಿಶೇಷ ಅರ್ಥದಲ್ಲಿ ಇದನ್ನು ವೇದದಲ್ಲಿ ಬಳಸಿದ್ದಾರೆ. 'ವ್ರಾತ' ಎಂದರೆ ಸಮುದಾಯ. ಇಂದ್ರಿಯಾಭಿಮಾನಿ ದೇವತೆಗಳ ಸಮುದಾಯ, ಜೀವಜಾತಗಳ ಸಮುದಾಯ, ಚರಾಚರ ಪ್ರಪಂಚದ ಸಮುದಾಯ. ಅಂತಹ ವ್ರಾತದ ನಿಯಾಮಕ 'ವ್ರಾತ್ಯ'. ಇಲ್ಲಿ ದೇವತೆಗಳು ಹೇಳುತ್ತಾರೆ: " ನೀನು ವ್ರಾತ್ಯಸ್ತ್ವಂ ಪ್ರಾಣಃ" ಎಂದು. ಅಂದರೆ "ಸಮಸ್ತ ಜೀವಸಮುದಾಯದ ನಿಯಾಮಕ ಶಕ್ತಿ ನೀನು" ಎಂದರ್ಥ. ಮುಂದುವರಿದು ದೇವತೆಗಳು ಹೇಳುತ್ತಾರೆ: "ನೀನು ಏಕಋಷಿಃ" ಎಂದು. ಏಕಋಷಿಃ ಎಂದರೆ ಜ್ಞಾನಿಗಳಲ್ಲಿ ಮುಖ್ಯ ಎಂದರ್ಥ. ಇನ್ನು ಅಥರ್ವ ಋಷಿಗಳು ಬಳಸುವ ಅಗ್ನಿಗೆ 'ಏಕಋಷಿ' ಎಂದೂ ಕರೆಯುತ್ತಾರೆ. "ಅಥರ್ವವೇದಿಗಳು ಆರಾಧನೆ ಮಾಡತಕ್ಕಂತಹ ಏಕಋಷಿ ಎನ್ನುವ ಅಗ್ನಿಯ ಒಳಗಿದ್ದು, ಆರಾಧ್ಯನಾಗುವವನು ನೀನು" ಎಂದು ದೇವತೆಗಳು ಪ್ರಾಣದೇವರನ್ನು ಸ್ತುತಿಸುತ್ತಾರೆ.

"ಎಲ್ಲವನ್ನು ರಕ್ಷಣೆ ಮಾಡುವವನು; ಹಾಗೇ ಪ್ರಳಯಕಾಲದಲ್ಲಿ ಇಡೀ ವಿಶ್ವವನ್ನು ಸಂಹಾರಮಾಡಿ ಕಬಳಿಸಿ ನಿಲ್ಲುವ ನೀನು ಸತ್ಪತಿ" ಎಂದು ದೇವತೆಗಳು ವಾಯುದೇವರನ್ನು ಸ್ತುತಿಸುತ್ತಾರೆ. ಸತ್ಪತಿ ಎನ್ನುವಲ್ಲಿ 'ಸತ್' ಎಂದರೆ ಜ್ಞಾನಿ, ಸಾತ್ವಿಕ. ಪ್ರಾಣದೇವರು ಅತಿಶಯ ಸಾತ್ವಿಕಮೂರ್ತಿ. ಸಾತ್ವಿಕರ, ಜ್ಞಾನಿಗಳ ಮತ್ತು ಎಲ್ಲರ ಸ್ವಾಮಿ ಪ್ರಾಣದೇವರು ಮತ್ತು ಆ ಭಗವಂತ ಸತ್ಪತಿಃ.

ಭಗವಂತನ ಮತ್ತು ಪ್ರಾಣದೇವರ ಮುಂದೆ ತಮ್ಮ ಅಸ್ತಿತ್ವದ ಮಹತ್ವವೇನು ಎನ್ನುವುದನ್ನು ವಿವರಿಸುತ್ತಾ ದೇವತೆಗಳು ಹೇಳುತ್ತಾರೆ: "ವಯಮಾದ್ಯಸ್ಯ ದಾತಾರಃ ಪಿತಾ ತ್ವಂ ಮಾತರಿಶ್ವ ನಃ" ಎಂದು. ಅಂದರೆ " ಸರ್ವ ಜೀವಗಳಲ್ಲಿ ಮೊದಲ ಜೀವನಾದ ನಿನಗೆ ನಾವು ಆಹಾರವನ್ನು ತಂದುಕೊಡುವ ಸೇವಕರು" ಎಂದರ್ಥ. ದೇವತೆಗಳು ಹೇಳುತ್ತಾರೆ: " ಓ ಮಾತರಿಶ್ವನೇ, ನೀನು ಸಮಸ್ತ ದೇವತಾಗಣಗಳ ತಂದೆ" ಎಂದು. [ಇಲ್ಲಿ ಮಾತರಿಶ್ವನ್ ಎಂದು ಹೇಳುವ ಬದಲು, ಕೇವಲ ಮಾತರಿಶ್ವ ಎಂದು ಹೇಳಿದ್ದಾರೆ. ಇದು ಭಾಷಾಶಾಸ್ತ್ರ. ಒಂದೇ ಅಕ್ಷರ ಒಟ್ಟಿಗೆ ಎರಡು ಬಾರಿ ಬಂದಾಗ ಅಲ್ಲಿ ಒಂದನ್ನು ಲೋಪ ಮಾಡಬಹುದು. ಹಾಗಾಗಿ ಮಾತರಿಶ್ವನ್ ನಃ ಎನ್ನುವುದನ್ನು ಇಲ್ಲಿ 'ಮಾತರಿಶ್ವ ನಃ' ಎಂದಿದ್ದಾರೆ.] ಮಾತರಿಶ್ವ ಎನ್ನುವ ಹೆಸರು ಕೇವಲ ಪ್ರಾಣದೇವರಿಗೆ ಮೀಸಲಿರುವ ಹೆಸರು. 'ಮಾತರಿ+ಶ್ವ' ಎಂದರೆ: ಆಕಾಶ(ಮಾತೃ)ದಲ್ಲಿ ಸಂಚರಿಸುವವ(ಗಾಳಿ) ಎಂದರ್ಥ. ಮಾತೃ ಎಂದರೆ ನಿರ್ಮಾತೃ. ಈ ಜಗತ್ತನ್ನು ನಿರ್ಮಾಣ ಮಾಡಿದ ಭಗವಂತನಲ್ಲಿ ಸದಾ ಸಂಚರಿಸುತ್ತಿರುವ ಪ್ರಾಣದೇವರು ಮಾತರಿಶ್ವ. ಮಾತೃ ಎಂದರೆ ತಾಯಿ. ತಾಯಿಯ ಗರ್ಭದಲ್ಲಿ ಚಲಿಸಿ ಅಲ್ಲಿ ಬೆಳೆಯುತ್ತಿರುವ ಮಗುವನ್ನು ಪಾಲಿಸುವವ ಮಾತರಿಶ್ವ. ಮಾತೃ ಎಂದರೆ 'ಮಾತು'. ಋಗ್ವೇದ, ಯಜುರ್ವೇದ, ಸಾಮವೇದಗಳೇ ಮೊದಲ ಮಾತುಗಳು. ಸದಾ ವೇದಗಳಲ್ಲಿ ಚಲಿಸುವವ, ಸದಾ ವೇದಾರ್ಥ ಚಿಂತನದಲ್ಲಿ ತೊಡಗಿದವ-ಮಾತರಿಶ್ವ. ಹೀಗೆ ನಾನಾ ಬಗೆಯಿಂದ ಪ್ರಾಣದೇವರ ಕ್ರಿಯೆಗಳನ್ನು ಹೇಳುವ

ಅಪೂರ್ವವಾದ ಶಬ್ದ 'ಮಾತರಿಶ್ವ'. ಆದ್ದರಿಂದ ದೇವತೆಗಳು ಹೇಳುತ್ತಾರೆ: "ಓ ಮಾತರಿಶ್ವನೇ, ನೀನು ನಮಗೆಲ್ಲಾ ತಂದೆ. ತಾಯಿಯ ಗರ್ಭದಲ್ಲಿದ್ದು ಮಗುವನ್ನು ಬೆಳೆಸುವವನು ನೀನು; ವೇದಗಳ ನಿಜವಾದ ಅರ್ಥವನ್ನು ಬಲ್ಲವನು ನೀನು; ವೇದಾರ್ಥಭೂತನಾದ ಭಗವಂತನನ್ನು ತಿಳಿದವನು ನೀನು; ಎಲ್ಲರಿಗೂ ಉಸಿರು ನೀಡುತ್ತಾ ಆಕಾಶದಲ್ಲಿ ಚಲಿಸುವವನು ನೀನು" ಎಂದು.

*ಯಾ ತೇ ತನೂರ್ವಾಚಿ ಪ್ರತಿಷ್ಠಿತಾ ಯಾ ಶ್ರೋತ್ರೇ ಯಾ ಚ ಚಕ್ಷುಷಿ ।*
*ಯಾ ಚ ಮನಸಿ ಸಂತತಾ ಶಿವಾಂ ತಾಂ ಕುರು ಮೋತ್ಕ್ರಮೀಃ ॥ ೧೨ ॥ ೮॥*

ಈ ವಿಶೇಷವಾದ ಚರ್ಚೆಯಲ್ಲಿ ಪಾಲ್ಗೊಂಡ ಪ್ರಮುಖ ದೇವತೆಗಳಾದ ಅಗ್ನಿ(ವಾಗ್ದೇವತೆ), ಇಂದ್ರ, ಗರುಡ, ಶೇಷ, ರುದ್ರ(ಮನೋಭಿಮಾನಿಗಳು), ಸೂರ್ಯ(ಕಣ್ಣಿನ ಅಭಿಮಾನಿ) ಮತ್ತು ಚಂದ್ರ(ಕಿವಿಯ ಅಭಿಮಾನಿ) ಈಗ ಹೇಳುತ್ತಾರೆ: "ಅಗ್ನಿಯಲ್ಲಿ ಕೂತು ನುಡಿಸುವವನು ನೀನು. ಆದ್ದರಿಂದ ವಾಗೇಂದ್ರಿಯದಲ್ಲಿರುವ ನಿನ್ನ ರೂಪವನ್ನು ದೇಹದಿಂದ ಹೊರಕಳುಹಿಸಬೇಡ. ಕಿವಿಯಲ್ಲಿ ನಿನ್ನ ಪ್ರಾಣಶಕ್ತಿ ಇದೆ; ಕಣ್ಣಿನಲ್ಲಿ ನಿನ್ನ ಸನ್ನಿಧಾನವಿದೆ. ನೀನಿಲ್ಲದೆ ಸೂರ್ಯ ಚಂದ್ರರು ಏನೂ ಮಾಡಲು ಸಾಧ್ಯವಿಲ್ಲ. ಮನಸ್ಸನ್ನು ನಿಯಂತ್ರಿಸುವ ನಿನ್ನ ರೂಪವನ್ನು ಮನಸ್ಸಿನಲ್ಲಿ ಇರಗೊಡು. ಎಲ್ಲಾ ದೇವತೆಗಳ ಒಳಗಿದ್ದು ಸಮಸ್ತ ಇಂದ್ರಿಯಗಳ ವ್ಯಾಪಾರವನ್ನು ನಿಯಂತ್ರಿಸಿ ಈ ಜಗತ್ತಿಗೆ ಬೆಳಕು ನೀಡುವವನು ನೀನು. ನಿನ್ನ ಮಾಂಗಲಿಕವಾದ ದೃಷ್ಟಿ ಎಲ್ಲಾ ಇಂದ್ರಿಯಗಳ ಮೇಲಿರಲಿ. ಇದರಿಂದ ಕಣ್ಣು ಒಳ್ಳೆಯದನ್ನು ನೋಡಲಿ, ಕಿವಿ ಒಳ್ಳೆಯದನ್ನು ಕೇಳಲಿ, ಬಾಯಿ ಒಳ್ಳೆಯದನ್ನು ನುಡಿಯಲಿ, ಮನಸ್ಸು ಒಳ್ಳೆಯದನ್ನು ಗ್ರಹಿಸಲಿ. ಎಲ್ಲವೂ ಮಾಂಗಲಿಕವಾಗಿ ಒಳ್ಳೆಯ ಅನುಭವ ಬರುವಂತೆ ಮಾಡು. ದಯವಿಟ್ಟು ಈ ದೇಹದಿಂದ ನೀನು ಹೊರ ಹೋಗಬೇಡ. ನಮ್ಮೊಳಗೆ ಕುಳಿತು ನಮ್ಮನ್ನು ನಡೆಸು" ಎಂದು ದೇವತೆಗಳು ಪ್ರಾಣದೇವರನ್ನು ಪ್ರಾರ್ಥಿಸುತ್ತಾರೆ.

ಈ ಮೇಲಿನ ಎಂಟು ಮಂತ್ರಗಳಲ್ಲಿ ಬಂದಿರುವ ಮಳೆ, ಸುಡುವುದು, ಉಸಿರಾಡಿಸುವುದು, ಗರ್ಭರಕ್ಷಣೆ, ಇತ್ಯಾದಿ ಕ್ರಿಯೆಗಳು ಮತ್ತು ಸೂರ್ಯ, ಚಂದ್ರ, ಅಗ್ನಿ, ವಹ್ನಿ, ಪರ್ಜನ್ಯ, ಪ್ರಜಾಪತಿ ಇತ್ಯಾದಿ ಶಬ್ದಗಳು ಮೂಲತಃ ಭಗವಂತನನ್ನು ಹೇಳುತ್ತವೆ. ಭಗವಂತನ ಆನಂತರ ಇವು ವಾಯುದೇವರನ್ನು ಹೇಳುತ್ತವೆ. ಇದು ನೇರವಾಗಿ ವಾಯುದೇವರ ಮುಂದೆ ದೇವತೆಗಳು ಮಾಡಿದ ಶ್ಲೋಕವಾದ್ದರಿಂದ, ಇದು ವಾಯುಸ್ತುತಿ. ಆದರೆ ಇದು ವಿಷ್ಣುಸ್ತೋತ್ರವೂ ಹೌದು ಎನ್ನುವುದಕ್ಕೆ ಮುಂದಿನ ಮಂತ್ರದಲ್ಲಿ ನಮಗೆ ಖಚಿತವಾದ ಮಾಹಿತಿ ದೊರೆಯುತ್ತದೆ. ಅಲ್ಲಿ ದೇವತೆಗಳು ಪ್ರಾಣನ ಅಂತರ್ಗತ ನಾರಾಯಣನನ್ನೂ ಕೂಡಾ ಸ್ತೋತ್ರ ಮಾಡಿದ್ದಾರೆ ಎನ್ನುವುದು ಖಚಿತವಾಗಿ ತಿಳಿಯುತ್ತದೆ.

*ಪ್ರಾಣಸ್ಯೇತದ್ ವಶೇ ಸರ್ವಂ ತ್ರಿದಿವೇ ಯತ್ ಪ್ರತಿಷ್ಠಿತಮ್ ।*
*ಮಾತೇವ ಪುತ್ರಾನ್ ರಕ್ಷಸ್ವ ಶ್ರೀಶ್ಚ ಪ್ರಜ್ಞಾಂ ಚ ವಿಧೇಹಿ ನ ಇತಿ ॥ ೧೩ ॥ ೯॥*

ದೇವತೆಗಳು ಹೇಳುತ್ತಾರೆ: "ಓ ಪ್ರಾಣದೇವನೇ, ಸರ್ವ ಜಗತ್ ಚೇಷ್ಟಕನಾದ ನಿನ್ನ ವಶದಲ್ಲಿ ಎಲ್ಲವೂ ಇದೆ" ಎಂದು. ಇಲ್ಲಿ ತ್ರಿದಿವ ಎನ್ನುವ ಪದ ಬಳಕೆಯಾಗಿದೆ. ತ್ರಿದಿವ ಎಂದರೆ ಮೇಲಿನ ಸ್ವರ್ಗಲೋಕ ಮತ್ತು ಅದರಿಂದಾಚೆಗೆನ ಸತ್ಯಲೋಕದ ತನಕ ಇರುವ ಎಲ್ಲಾ ಲೋಕಗಳು[ಮೇಲಿನ ಏಳು ಲೋಕಗಳು: ಭೂಃ, ಭುವಃ, ಸ್ವಃ, ಮಹಃ, ಜನಃ,

ತಪಃ ಮತ್ತು ಸತ್ಯಲೋಕ] ಪ್ರಾಣದೇವರಿರುವ ಸ್ಥಾನ ಸತ್ಯಲೋಕ. ಇದು ಅತ್ಯಂತ ಉನ್ನತವಾಗಿರುವ 'ತ್ರಿದಿವ'. ಇಲ್ಲಿಯ ತನಕ ಇರುವ ಸಮಸ್ತವೂ ಪ್ರಾಣ ದೇವರ ಅಧೀನವಾಗಿದೆ.

ಜಡಕ್ಕೆ ರೂಪಕೊಡುವವರು ಪ್ರಾಣದೇವರು. ಜೀವಕ್ಕೆ ಉಸಿರುಕೊಟ್ಟು ಬದುಕಿಸಿ ರಕ್ಷಣೆ ಮಾಡುವವರು ಪ್ರಾಣದೇವರು. ಆದ್ದರಿಂದ ಎಲ್ಲವೂ ಪ್ರಾಣದೇವರ ವಶ. ಸಮಸ್ತ ದೇವತೆಗಳೂ ಪ್ರಾಣದೇವರ ಅಧೀನವಾಗಿ, ಅವರ ನಿಯತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. "ನೀನು ನಿಯಮಿಸಿದ ಕೆಲಸವನ್ನು ನಿನ್ನ ಆಜ್ಞಾನುಸಾರ, ನೀನು ಕೊಟ್ಟ ಶಕ್ತಿಯಿಂದ ನಾವು ಮಾಡುತ್ತೇವೆ" ಎನ್ನುತ್ತಾರೆ ದೇವತೆಗಳು. ಇದು ಭಗವಂತನ ಮತ್ತು ಪ್ರಾಣದೇವರ ಶಕ್ತಿವಿಶೇಷ.

ಕೊನೆಯದಾಗಿ ದೇವತೆಗಳು ಹೇಳುತ್ತಾರೆ: "ಮಾತೇವ ಪುತ್ರಾನ್ ರಕ್ಷಸ್ವ ಶ್ರೀಶ್ಚ ಪ್ರಜ್ಞಾಂ ಚ ವಿಧೇಹಿ ನಃ" ಎಂದು. ಇಲ್ಲಿ ನಮಗೆ ಈ ವಾಯುಸ್ತುತಿ ಕೇವಲ ವಾಯುಸ್ತುತಿಯಷ್ಟೇ ಅಲ್ಲ, ಹರಿಸ್ತುತಿ ಕೂಡಾ ಹೌದು ಎನ್ನುವುದು ಸ್ಪಷ್ಟವಾಗಿ ತಿಳಿಯುತ್ತದೆ. ದೇವತೆಗಳು ಕೊನೆಯದಾಗಿ "ಓ ಶ್ರೀದೇವಿಯೇ" ಎಂದು ತಾಯಿಯನ್ನು ಸಂಬೋಧಿಸಿದ್ದಾರೆ. ನಮಗೆ ತಿಳಿದಂತೆ 'ಶ್ರೀ' ಅಂದರೆ ಲಕ್ಷ್ಮಿ. ಇನ್ನೊಂದು ಅರ್ಥದಲ್ಲಿ 'ಶಂ' ಎಂದರೆ ಆನಂದಸ್ವರೂಪನಾಗಿರುವ ಪ್ರಾಣದೇವರು. ಅವನಲ್ಲಿ ರಮಿಸುವವಳು ಶ್ರೀಃ. ಅಂದರೆ ಪ್ರಾಣದೇವರ ಮಡದಿ ಭಾರತೀದೇವಿ. [ಭಾರತೀದೇವಿಯನ್ನೂ ಕೂಡಾ ಶ್ರೀ ಎಂದು ಕರೆಯುತ್ತಾರೆ ಎನ್ನುವುದು ನಮಗೆ ಪಾಂಡವರ ಸ್ವರ್ಗಾರೋಹಣದ ನಂತರ ಬರುವ ಕಥೆಯಲ್ಲಿ ತಿಳಿಯುತ್ತದೆ. ಅಲ್ಲಿ ಧರ್ಮರಾಯ ಭಾರತೀದೇವಿಯನ್ನು ದ್ರೌಪದಿ ಎಂದು ತಪ್ಪಾಗಿ ತಿಳಿದಾಗ, ಆತನಿಗೆ ಭಾರತೀದೇವಿಯ ಪರಿಚಯ ಮಾಡುವಾಗ 'ಶ್ರೀಃ' ಎಂದು ಪರಿಚಿಸುವುದನ್ನು ಕಾಣುತ್ತೇವೆ]

ದೇವತೆಗಳು ತಮ್ಮ ಸ್ತುತಿಯನ್ನು ಲಕ್ಷ್ಮೀ-ಭಾರತಿಯರ ಸ್ತುತಿಯೊಂದಿಗೆ ಉಪಸಂಹಾರ ಮಾಡುತ್ತಾ ಹೇಳುತ್ತಾರೆ: " ಓ ಶ್ರೀದೇವಿಯೇ[ಓ ಲಕ್ಷ್ಮೀ ದೇವಿಯೇ, ಓ ಭಾರತೀ ದೇವಿಯೇ] ನೀನು ನಮ್ಮನ್ನು ರಕ್ಷಿಸು. ನಾವು ನಿನ್ನ ಮಕ್ಕಳು. ಮಕ್ಕಳು ತಪ್ಪು ಮಾಡಿದಾಗ ತಾಯಿ ಹೇಗೆ ಕ್ಷಮಿಸುತ್ತಾಳೋ, ಹಾಗೆ ನಮ್ಮ ತಪ್ಪನ್ನು ಕ್ಷಮಿಸಿ ನಮ್ಮನ್ನು ಸಲಹು" ಎಂದು. "ನಾವು ನಿನ್ನಲ್ಲಿ ಬೇಡುವುದು ಒಂದನ್ನೇ. ನಮಗೆ ಒಳ್ಳೆಯ ಬುದ್ಧಿಕೊಡು ಎಂದು. ಶ್ರೇಷ್ಠವಾದ ಜ್ಞಾನ, ಜ್ಞಾನದಿಂದ ಪ್ರಾಣ ಮತ್ತು ಭಗವಂತನ ಎಚ್ಚರ, ಅದರಿಂದ ಭಗವಂತನ ನಿಯತಿಗೆ ತಕ್ಕನಾಗಿ ನಮ್ಮ ಕರ್ಮ ನಿರ್ವಹಣೆ ಮಾಡುವ ಶಕ್ತಿಯನ್ನು ನಮಗೆ ಕೊಡು" ಎಂದು ದೇವತೆಗಳು ಬೇಡುತ್ತಾರೆ.

ಇಲ್ಲಿಗೆ ದೇವತೆಗಳು ಪ್ರಾಣದೇವರ ಮುಂದೆ ಹಾಡಿದ ಒಂಬತ್ತು ಮಂತ್ರಗಳ ಅಪೂರ್ವವಾದ ಈ ವೈದಿಕ ಹರಿ-ವಾಯುಸ್ತುತಿಯ ಜೊತೆಗೆ ಎರಡನೇ ಪ್ರಶ್ನೆ/ಅಧ್ಯಾಯ ಮುಕ್ತಾಯವಾಯಿತು(ಇತಿ).

**ಇತಿ ಷಟ್ ಪ್ರಶ್ನೋಪನಿಷದಿ ದ್ವಿತೀಯಃ ಪ್ರಶ್ನಃ ॥**

ಇಲ್ಲಿಗೆ ಷಟ್ ಪ್ರಶ್ನ ಉಪನಿಷತ್ತಿನ ಎರಡನೇ ಪ್ರಶ್ನೆ/ಅಧ್ಯಾಯ ಮುಗಿಯಿತು.

*******

# ಅಥ ತೃತೀಯಃ ಪ್ರಶ್ನಃ

*ಅಥ ಹೈನಂ ಕೌಸಲ್ಯ ಆಶ್ವಲಾಯನಃ ಪಪ್ರಚ್ಛ । ಭಗವನ್ ಕುತ ಏಷ ಪ್ರಾಣೋ ಜಾಯತೇ । ಕಥಮಾಯಾತಿ ಅಸ್ಮಿನ್ ಶರೀರೇ । ಆತ್ಮಾನಂ ವಾ ಪ್ರವಿಭಜ್ಯ ಕಥಂ ಪ್ರತಿಷ್ಠತೇ । ಕೇನೋತ್ಕ್ರಮತೇ ಕಥಂ ಬಾಹ್ಯಮಭಿ ಧತೇ ಕಥಮಧ್ಯಾತ್ಮಮಿತಿ ॥ ೧॥*

ಎರಡು ಪ್ರಶ್ನೆಗಳ ವಿವರಣೆಯನ್ನು ಪಿಪ್ಪಲಾದರಿಂದ ಕೇಳಿ ತಿಳಿದ ಮೇಲೆ, ಮೂರನೇ ಋಷಿ ಕೌಸಲ್ಯ ಆಶ್ವಲಾಯನರು ತನ್ನ ಪ್ರಶ್ನೆಯನ್ನು ಗುರುಗಳ ಮುಂದಿಡುತ್ತಾರೆ. ಅವರು ಕೇಳುತ್ತಾರೆ: " ಯಾವ ಕಾರಣಕ್ಕೋಸ್ಕರ ಪ್ರಾಣತತ್ತ್ವದ ಆವಿರ್ಭಾವವಾಯಿತು ಮತ್ತು ಅದು ಯಾರಿಂದಾಯಿತು" ಎಂದು. ಹಿಂದೆ ಎಲ್ಲವೂ ಪ್ರಜಾಪತಿ ನಾಮಕ ಭಗವಂತನಿಂದ ಸೃಷ್ಟಿಯಾಯಿತು ಎನ್ನುವ ವಿವರಣೆಯನ್ನು ಪಿಪ್ಪಲಾದರು ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ಇಲ್ಲಿ ಆಶ್ವಲಾಯನರು ವಿಶೇಷವಾಗಿ ಪ್ರಾಣತತ್ತ್ವದ ಬಗೆ ಮತ್ತು ಅದರ ಆವಿರ್ಭಾವದ ಹಿನ್ನೆಲೆಯನ್ನು ಪಿಪ್ಪಲಾದರಲ್ಲಿ ಪ್ರಶ್ನಿಸುತ್ತಿದ್ದಾರೆ. "ಪ್ರಾಣದೇವರು ಹೇಗೆ ನಮ್ಮ ದೇಹವನ್ನು ಪ್ರವೇಶ ಮಾಡುತ್ತಾರೆ ಮತ್ತು ದೇಹದಲ್ಲಿ ಅನೇಕ ರೂಪಗಳಿಂದ ಏನನ್ನು ನಿಯಂತ್ರಣ ಮಾಡುತ್ತಾರೆ ಎನ್ನುವುದು ಆಶ್ವಲಾಯನರ ಪ್ರಶ್ನೆ. ನಮಗೆ ತಿಳಿದಂತೆ ಪ್ರಾಣದೇವರು ನಮ್ಮೊಳಗೆ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎನ್ನುವ ಐದು ರೂಪಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗೆ ದೇಹ ಪ್ರವೇಶಿಸಿ ತನ್ನನ್ನೇ ತಾನು ಐದು ವಿಭಾಗ ಮಾಡಿಕೊಂಡು ಅವರು ನಿರ್ವಹಿಸುವ ಚಟುವಟಿಕೆಗಳೇನು ಎನ್ನುವುದು ಇಲ್ಲಿರುವ ಪ್ರಶ್ನೆ.

ಪ್ರಾಣದೇವರು ಕೇವಲ ಪಿಂಡಾಂಡದಲ್ಲಷ್ಟೇ ಅಲ್ಲ, ಬ್ರಹ್ಮಾಂಡದಲ್ಲೂ ತುಂಬಿ ಕಾರ್ಯ ನಿರ್ವಹಿಸುತ್ತಿದ್ದಾರೆ. ದೇಹ ಪ್ರವೇಶಿಸಿ ಜೀವ ತುಂಬುವ ಅವರು, ದೇಹವನ್ನು ಬಿಟ್ಟು ಯಾರ ಜೊತೆಗೆ ಹೊರಟು ಹೋಗುತ್ತಾರೆ ಮತ್ತು ಏಕೆ ಹೊರಟು ಹೋಗುತ್ತಾರೆ? ಹೊರಗೆ ಪಂಚಭೂತಗಳಲ್ಲಿ ತುಂಬಿರುವ ಪ್ರಾಣದೇವರ ಚಟುವಟಿಕೆಗಳೇನು-ಎನ್ನುವ ಬಹಳ ಮಹತ್ವವಾದ ಪ್ರಶ್ನೆಯನ್ನು ಆಶ್ವಲಾಯನರು ಪಿಪ್ಪಲಾದರ ಮುಂದಿಡುತ್ತಾರೆ.

ಪ್ರಶ್ನೆಯಿಂದಲೇ ತಿಳಿಯುವಂತೆ ಈ ಅಧ್ಯಾಯ ಪೂರ್ಣವಾಗಿ ಪ್ರಾಣದೇವರ ಮಹಿಮೆಯನ್ನು ಹೇಳುವ ಅಧ್ಯಾಯ. ಬನ್ನಿ, ಆಶ್ವಲಾಯನರ ಪ್ರಶ್ನೆಗೆ ಪಿಪ್ಪಲಾದರ ಉತ್ತರವನ್ನು ಭಗವಂತನ ಕೃಪೆ ಬೇಡಿ ಆಲಿಸೋಣ.

*ತಸ್ಮೈ ಸ ಹೋವಾಚ । ಅತಿಪ್ರಶ್ನಾನ್ ಪೃಚ್ಛಸಿ ಬ್ರಹ್ಮಿಷ್ಠೋಽಸೀತಿ ತಸ್ಮಾತ್ ತೇಽಹಂ ಬ್ರವೀಮಿ ॥ ೨॥*

ಪಿಪ್ಪಲಾದರಿಗೆ ಆಶ್ವಲಾಯನರ ಪ್ರಶ್ನೆಯನ್ನು ಕೇಳಿ ಬಹಳ ಸಂತೋಷವಾಯಿತು. ಏಕೆಂದರೆ ಇದು ಪಂಚಭೂತಗಳಲ್ಲಿ ಮತ್ತು ದೇಹದಲ್ಲಿ ವಾಯುದೇವರ ಚಟುವಟಿಕೆ ಏನು ಎಂದು ತಿಳಿಯಬಯಸಿ ಕೇಳಿದ ಪ್ರಶ್ನೆ. ಸಾಮಾನ್ಯರಿಗೆ ಇಂತಹ ಪ್ರಶ್ನೆ ಕೇಳಲು ಸಾಧ್ಯವಿಲ್ಲ. ಇಂತಹ ಪ್ರಶ್ನೆಯನ್ನು ಕೇವಲ ವೇದಾಧ್ಯಯನ ಮಾಡಿದ ಜ್ಞಾನಿಗಳಷ್ಟೇ ಕೇಳಬಲ್ಲರು. ಈ ಪ್ರಶ್ನೆಗೆ ಉತ್ತರಿಸಬೇಕಾದರೆ ದೇಹಶಾಸ್ತ್ರ, ಮನಃಶಾಸ್ತ್ರ ಮತ್ತು ಭೌತಶಾಸ್ತ್ರ ಪೂರ್ಣ ತಿಳಿದಿರಬೇಕು. ಪಿಪ್ಪಲಾದರು ಹೇಳುತ್ತಾರೆ: "ನೀನು ವೇದಾಧ್ಯಯನ ಮಾಡಿ ಅನೇಕ ಸತ್ಯವನ್ನು ತಿಳಿದಿರುವುದರಿಂದ, ಒಬ್ಬ ಸಾಮಾನ್ಯನಿಗೆ ಹೊಳೆಯದ ಅಪೂರ್ವವಾದ ಈ ಪ್ರಶ್ನೆಯನ್ನು ಕೇಳಿದ್ದೀಯ. ನನಗೆ ಬಹಳ ಸಂತೋಷವಾಯಿತು" ಎಂದು. ಪ್ರಪಂಚದ

ಎಲ್ಲಾ ಜಿಜ್ಞಾಸುಗಳು ತಿಳಿಯಬೇಕಾದ, ಇಡೀ ಮಾನವ ಜನಾಂಗಕ್ಕೆ ಉಪಕಾರವಾಗುವ, ಅತ್ಯಮೂಲ್ಯವಾದ ವಿಷಯದ ಮೇಲೆ ಕೇಳಿರುವ ಈ ಪ್ರಶ್ನೆ 'ಅತಿಪ್ರಶ್ನೆ' ಎಂದು ಪಿಪ್ಪಲಾದರು ಶಿಷ್ಯನ ಪ್ರಶ್ನೆಯನ್ನು ಪ್ರಶಂಸಿಸುತ್ತಾರೆ.

*ಆತ್ಮತ ಏಷ ಪ್ರಾಣೋ ಜಾಯತೇ । ಯಥೈಷಾ ಪುರುಷೇ ಛಾಯ ಏತಸ್ಮಿನ್ನೇತದಾತತಮ್ । ಮನೋಕೃತೇನಾಯಾತ್ಯಸ್ಮಿನ್ ಶರೀರೇ ॥ ೩॥*

ಪಿಪ್ಪಲಾದರು ಹೇಳುತ್ತಾರೆ: "ಮುಖ್ಯಪ್ರಾಣ ಆತ್ಮನಿಂದ ಹುಟ್ಟಿದ" ಎಂದು. ಇಲ್ಲಿ 'ಆತ್ಮ' ಎಂದರೆ ಪರಮಾತ್ಮ. ಯಾವುದನ್ನು ತಿಳಿದರೆ ಎಲ್ಲವೂ ತಿಳಿಯುತ್ತದೋ ಅದೇ ಆತ್ಮತತ್ತ್ವ. ಉಪನಿಷತ್ತಿನಲ್ಲಿ ಹೇಳುವಂತೆ: ಆತ್ಮಾ ವಾ ಅರೇ ದೃಷ್ಟವ್ಯಃ ಶ್ರೋತವ್ಯಃ ಮಂತವ್ಯಃ ನಿಧಿಧ್ಯಾಸಿತ್ವ್ಯಃ ॥ ಬೃಹದಾರಣ್ಯಕ-೪-೫-೬॥ ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಂಚಥಾ ॥ಮುಂಡಕ ಉಪನಿಷತ್-೨-೨-೫॥ ಮನುಷ್ಯ ತಿಳಿಯಬೇಕಾದ ಸತ್ಯಗಳಲ್ಲಿ ಮೂಲಭೂತವಾದ ಸತ್ಯ ಎಂದರೆ ಆತ್ಮನನ್ನು ತಿಳಿಯುವುದು. ಆತ್ಮ ಎನ್ನುವುದಕ್ಕೆ ಪ್ರಾಚೀನ ವೈದಿಕ ಸಾಹಿತ್ಯದಲ್ಲಿ ಅಂತರ್ಯಾಮಿ, ಸ್ವಾಮಿ ಎನ್ನುವ ಅರ್ಥವಿದೆ. ಎಲ್ಲರೊಳಗೂ ತುಂಬಿ ಎಲ್ಲವನ್ನೂ ನಿಯಂತ್ರಿಸುವ ಪರಶಕ್ತಿ ಆತ್ಮ. ಭಾಗವತದಲ್ಲಿ ಹೇಳುವಂತೆ: ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ ॥ಭಾಗವತ-೧-೨-೧೧॥ ದೇವರನ್ನು ಬ್ರಹ್ಮ, ಪರಬ್ರಹ್ಮ, ಆತ್ಮಾ, ಪರಮಾತ್ಮ, ಭಗವಂತ, ಇತ್ಯಾದಿಯಾಗಿ ಕರೆಯುತ್ತಾರೆ. ಪಿಪ್ಪಲಾದರು ಇಲ್ಲಿ ಎಲ್ಲರ ಅಂತರ್ಯಾಮಿ, ಎಲ್ಲರ ನಿಯಾಮಕ ಭಗವಂತ ಎನ್ನುವ ಅರ್ಥದಲ್ಲಿ ಆತ್ಮ ಶಬ್ದವನ್ನು ಬಳಸಿದ್ದಾರೆ.
ನಮಗೆ ತಿಳಿದಂತೆ ಎಲ್ಲವೂ ಆ ಭಗವಂತನಿಂದ ಹುಟ್ಟಿದೆ. ಹೀಗಿರುವಾಗ ಇಲ್ಲಿ 'ಪ್ರಾಣ ಭಗವಂತನಿಂದ ಹುಟ್ಟಿದ' ಎನ್ನುವಲ್ಲಿನ ವಿಶೇಷತೆ ಏನು-ಎನ್ನುವ ಪ್ರಶ್ನೆ ನಿಮ್ಮಲ್ಲಿ ಮೂಡಬಹುದು. ಇಲ್ಲಿ ಒಂದು ವಿಶೇಷವಿದೆ. ಇತರ ದೇವತೆಗಳಿಗೆ ಒಂದು ಕಲ್ಪದಲ್ಲಿ ಅನೇಕ ಹುಟ್ಟಿದೆ. ಆದರೆ ಬ್ರಹ್ಮ-ವಾಯು ಎಲ್ಲಾ ದೇವತೆಗಳಿಗಿಂತ ಮೊದಲು ಭಗವತನಿಂದ ಸೃಷ್ಟಿಯಾಗುವ ತತ್ತ್ವ. ಇವರಿಗೆ ಪುನಃ ಯಾರಿಂದಲೂ ಮರು ಸೃಷ್ಟಿ ಇಲ್ಲ. ಭಗವಂತನಿಂದ ಸಾಕ್ಷಾತ್ ಹುಟ್ಟುವುದರಿಂದ ಮತ್ತು ಕಲ್ಪಾಂತದ ತನಕ ಮರು ಹುಟ್ಟು ಇಲ್ಲವಾದ್ದರಿಂದ ಪ್ರಾಣದೇವರನ್ನು ಭಗವಂತನ ಸಾಕ್ಷಾತ್ ಪುತ್ರ ಎನ್ನುತ್ತಾರೆ. ಹೇಗೆ ನಮ್ಮ ನೆರಳು ನಮ್ಮನ್ನು ಸದಾ ಬಿಡದೆ ಅನುಸರಿಸುತ್ತದೋ ಹಾಗೆ ಇಡೀ ವಿಶ್ವ ಭಗವಂತನನ್ನು ಆಶ್ರಯಿಸಿದೆ. ಇದೇ ರೀತಿ ಲಕ್ಷ್ಮೀ-ನಾರಾಯಣ ಮತ್ತು ಬ್ರಹ್ಮದೇವರನ್ನು ಬಿಟ್ಟರೆ, ಇತರ ಸಮಸ್ತ ವಿಶ್ವವೂ ನೆರಳಿನಂತೆ ಪ್ರಾಣದೇವರನ್ನು ಆಶ್ರಯಿಸಿಕೊಂಡಿದೆ. ಹೀಗೆ ಇಡೀ ವಿಶ್ವದಲ್ಲಿ ತುಂಬಿರುವ ಪ್ರಾಣದೇವರು ಭಗವಂತನ ಆದೇಶದಂತೆ ಪ್ರತಿಯೊಂದು ಜೀವದ ಜೀವಕಲಾಭಿಮಾನಿಯಾಗಿ, ಸಮಸ್ತ ಜೀವರ ಒಳಗೆ ಪ್ರವೇಶಿಸಿ ನೆಲೆಸಿದ್ದಾರೆ ಮತ್ತು ನಮ್ಮ ಒಳಗೂ ಹೊರಗೂ ನಿಂತು ಭಗವಂತನ ನಿಯತಿಗನುಗುಣವಾಗಿ ನಮ್ಮನ್ನು ರಕ್ಷಿಸಿ ನಡೆಸುತ್ತಿದ್ದಾರೆ.
ದೇಹವನ್ನು ಪ್ರವೇಶಿಸುವ ಪ್ರಾಣದೇವರು ತಮ್ಮನ್ನು ತಾವು ಎಷ್ಟು ವಿಭಾಗವನ್ನಾಗಿ ಮಾಡಿಕೊಳ್ಳುತ್ತಾರೆ ಮತ್ತು ಆ ವಿಭಾಗದ ಉದ್ದೇಶವೇನು, ಯಾವಯಾವ ವಿಭಾಗದಲ್ಲಿ ಏನೇನು ಕ್ರಿಯೆ ನಡೆಯುತ್ತದೆ ಎನ್ನುವುದನ್ನು ಪಿಪ್ಪಲಾದರು 'ಒಂದು ದೇಶದ ಆಡಳಿತದ' ಉದಾಹರಣೆಯೊಂದಿಗೆ ವಿವರಿಸುತ್ತಾರೆ.,

*ಯಥಾ ಸಮ್ರಾಡೇವಾಧಿಕೃತಾನ್ ವಿನಿಯುಙಕ್ತೇ ಏತಾನ್ ಗ್ರಾಮಾನಧಿತಿಷ್ಠಸ್ವೇತಾನ್ ಗ್ರಾಮಾನಧಿತಿಷ್ಠಸ್ವೇತಿ ಏವಮೇವೈಷ ಪ್ರಾಣ ಇತರಾನ್ ಪ್ರಾಣಾನ್ ಪೃಥಕ್ ಪೃಥಗೇವ ಸನ್ನಿಧತ್ತೇ ॥ ೪॥*

ಇಲ್ಲಿ ಪಿಪ್ಪಲಾದರು "ಒಬ್ಬ ಚಕ್ರವರ್ತಿ ತನ್ನ ದೇಶದಲ್ಲಿ ವಿವಿಧ ಆಡಳಿತಾಧಿಕಾರಿಗಳನ್ನು ನೇಮಿಸಿ ಹೇಗೆ ಸಮಸ್ತವಾಗಿ ಆಡಳಿತ ನಿರ್ವಹಣೆ ಮಾಡುತ್ತಾನೋ, ಹಾಗೆ ಪ್ರಾಣದೇವರು ದೇಹದಲ್ಲಿ ಕಾರ್ಯನಿರ್ವಹಿಸುತ್ತಾರೆ" ಎಂದಿದ್ದಾರೆ. ಈ ಮಾತು ನಮಗೆ ಅರ್ಥವಾಗಬೇಕಾದರೆ ನಾವು ನಮ್ಮ ಹಿಂದಿನ ದೇಶಾಡಳಿತ ಕ್ರಮವನ್ನು ತಿಳಿದಿರಬೇಕು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಒಂದು ದೇಶದ ಆಡಳಿತವನ್ನು ಯಾವ ರೀತಿ ನಿರ್ವಹಿಸಬೇಕು ಎನ್ನುವುದನ್ನು ಬಹಳ ಸುಂದರವಾಗಿ ವಿವರಿಸಲಾಗಿದೆ. ಹಿಂದೆ ಒಂದು ಗ್ರಾಮವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸುತ್ತಿದ್ದರು. ಈ ನಾಲ್ಕು ವಿಭಾಗದಲ್ಲಿ ಒಂದು ಅಂಶ ಜನವಸತಿಗೆ, ಒಂದು ಅಂಶ ಬೇಸಾಯಕ್ಕೆ, ಒಂದು ಅಂಶ ಹುಲ್ಲುಗಾವಲು ಮತ್ತು ಉಳಿದ ಒಂದು ಅಂಶ ಕಾಡು-ಹೀಗೆ ಅಭಿವೃದ್ಧಿಪಡಿಸುತ್ತಿದ್ದರು. ಇಲ್ಲಿ ಪ್ರತಿಯೊಂದು ಗ್ರಾಮವೂ ತಮಗೆ ಬೇಕಾದ ಆಹಾರ ಬೆಳೆದು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವಂತೆ ಅಭಿವೃದ್ಧಿಪಡಿಸಲಾಗುತ್ತಿತ್ತು. ಇಂತಹ ಹತ್ತು ಗ್ರಾಮಗಳ(ತಾಲೋಕು) ಆಡಳಿತವನ್ನು ನಿರ್ವಹಿಸಲು ದೇಶದ ಚಕ್ರವರ್ತಿ ಒಬ್ಬ ಸಮರ್ಥ ವ್ಯಕ್ತಿಯನ್ನು ನಿಯಮಿಸುತ್ತಿದ್ದ. ಈ ಆಡಳಿತಾಧಿಕಾರಿಯನ್ನು 'ದಶಪ' ಎಂದು ಕರೆಯುತ್ತಿದ್ದರು. ಆತನಿಗೆ ಈ ಹತ್ತು ಗ್ರಾಮದ ಒಟ್ಟು ಕಂದಾಯದ ಹತ್ತನೇ ಒಂದು ಭಾಗವನ್ನು ಸಂಬಳವಾಗಿ ಕೊಡುತ್ತಿದ್ದರು. ದಶಪನ ನಂತರ 'ವಿಂಶತಪ'. ಈತ ಇಬ್ಬರು ದಶಪರ ಮೇಲಾಧಿಕಾರಿ(ಜಿಲ್ಲಾಧಿಕಾರಿ). ಈತನ ನಂತರ 'ಶತಪ'. ಈತನ ಆಡಳಿತ ವ್ಯಾಪ್ತಿ ನೂರು ಗ್ರಾಮಗಳು. ಇದನ್ನು ಒಂದು ರಾಜ್ಯ ಎನ್ನಬಹುದು(ರಾಜ್ಯಪಾಲ). ಚಕ್ರವರ್ತಿಯಾದವನು ಈ ಎಲ್ಲಾ ಅಧಿಕಾರಿಗಳ ನೆರವು ಪಡೆದು ದೇಶದ ಪೂರ್ಣಾಡಳಿತವನ್ನು ನಡೆಸುತ್ತಿದ್ದ. ಇದೇ ರೀತಿ ಇಲ್ಲಿ ನಾವು ನಮ್ಮ ದೇಹವನ್ನು ಒಂದು ದೇಶ ಎಂದುಕೊಂಡರೆ, ದೇಹದ ಬೇರೆಬೇರೆ ಭಾಗಗಳೇ ತಾಲೋಕು, ಜಿಲ್ಲೆ ಮತ್ತು ರಾಜ್ಯಗಳು. ಅದಕ್ಕೆ ಬೇರೆಬೇರೆ ಅಧಿಕಾರಿಗಳು. ಆ ಎಲ್ಲಾ ಅಧಿಕಾರಿಗಳ ಮೂಲಕ ದೇಹದ ನಿಯಂತ್ರಣ ಮಾಡುವ ಚಕ್ರವರ್ತಿ ಪ್ರಾಣದೇವರು. ಪ್ರಾಣದೇವರ ರಾಜ್ಯಪಾಲರು-ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ.  ಇವರನ್ನು 'ಅವಾಂತರ ಪ್ರಾಣರು' ಎನ್ನುತ್ತಾರೆ. ಭಗವಂತನ ಸಾಕ್ಷಾತ್ ಪುತ್ರನಾದ 'ಪ್ರಾಣ' ಅವಾಂತರ ಪ್ರಾಣರನ್ನು ದೇಹದ ಬೇರೆಬೇರೆ ವಿಭಾಗದ ಆಡಳಿತ ನಡೆಸಲು ಕಳುಹಿಸುತ್ತಾನೆ. ಇಲ್ಲಿ ಒಂದು ವಿಶೇಷವೇನೆಂದರೆ ಒಬ್ಬ ಚಕ್ರವರ್ತಿಯಂತೆ ಪ್ರಾಣ ಮತ್ತು ಭಗವಂತ ಒಂದು ಕಡೆ ನೆಲಸಿ ಆಡಳಿತ ನಿರ್ವಹಿಸುವುದಿಲ್ಲ. ಬದಲಾಗಿ ಅವರು ಅವಾಂತರ ಅಧಿಕಾರಿಗಳ ಅಂತರ್ಯಾಮಿಯಾಗಿ ಸೇರಿ ಶಕ್ತಿಪಾತ ಮಾಡಿ ಕಾರ್ಯನಿರ್ವಹಣೆ ಮಾಡಿಸುತ್ತಾರೆ.

*ಪಾಯೂಪಸ್ಥೇಽಪಾನಂ ಚಕ್ಷುಃಶ್ರೋತ್ರೇ ಮುಖನಾಸಿಕಾಭ್ಯಾಂ ಪ್ರಾಣಃ ಸ್ವಯಂ ಪ್ರತಿಷ್ಠತೇ । ಮಧ್ಯೇ ತು ಸಮಾನಃ।*
*ಏಷ ಹ್ಯೇತದ್ಧುತಮನ್ನಂ ಸಮಂ ನಯತಿ ತಸ್ಮಾದೇತಾಃ ಸಪ್ತಾರ್ಚಿಷೋ ಭವಂತಿ ಹೃದಿ ಹ್ಯೇಷ ಆತ್ಮಾ ॥ ೫॥*

ಇಲ್ಲಿ ಪಿಪ್ಪಲಾದರು ಪ್ರತಿಯೊಬ್ಬ ಅವಾಂತರ ಪ್ರಾಣರ ಆಡಳಿತ ವ್ಯಾಪ್ತಿಯನ್ನು ವಿವರಿಸಿದ್ದಾರೆ.  ನಮ್ಮ ದೇಹದ ಒಳಗೆ ಪ್ರತಿಯೊಂದು ಕ್ರಿಯೆಯನ್ನು ನಿರಂತರವಾಗಿ ಒಂದು ವ್ಯವಸ್ಥಿತ ರೀತಿಯಲ್ಲಿ ಪ್ರಾಣದೇವರು ತನ್ನ ಐದು ರೂಪಗಳಿಂದ ನಡೆಸುತ್ತಿದ್ದಾರೆ. ಮೊದಲನೆಯದಾಗಿ ದೇಹದ ಕೆಳಭಾಗ. ಈ ಭಾಗದ ಅಧಿಕಾರ ವ್ಯಾಪ್ತಿ ಅಪಾನನಿಗೆ ಸೇರಿದೆ. ಈತ ನಮ್ಮ ಪಾಯು(ಮಲ ವಿಸರ್ಜನೆ) ಮತ್ತು ಉಪಸ್ಥ(ಮೂತ್ರ ಮತ್ತು ಸಂತಾನ ಕ್ರಿಯೆ)ದಲ್ಲಿ ನಿಂತು ಕಾರ್ಯ ನಿರ್ವಹಿಸುತ್ತಾನೆ. ಎರಡನೆಯದಾಗಿ ದೇಹದ ಮೇಲ್ಭಾಗ. ನಮ್ಮ ಕಣ್ಣು, ಕಿವಿ, ಬಾಯಿ, ಉಸಿರು. ಈ ಕ್ರಿಯೆಯನ್ನು ಸ್ವಯಂ ಪ್ರಾಣ ದೇವರು ನಿರ್ವಹಿಸುತ್ತಾರೆ. ಅವರು ನಮಗೆ ಕಣ್ಣಿನಿಂದ ನೋಡಿಸುತ್ತಾರೆ, ಕಿವಿಯಿಂದ ಕೇಳಿಸುತ್ತಾರೆ, ಬಾಯಿಯಿಂದ ಮಾತನಾಡಿಸುತ್ತಾರೆ, ಮೂಗಿನಿಂದ ಉಸಿರಾಡಿಸಿ ಬದುಕಿಸುತ್ತಾರೆ. ಮೂರನೆಯದು ದೇಹದ

ಮಧ್ಯಭಾಗ. ನಾವು ಸೇವಿಸುವ ಆಹಾರವನ್ನು ಜೀರ್ಣಗೊಳಿಸಿ, ಅದರಿಂದ ಬೇಡವಾದ ಸ್ಥೂಲಭಾಗವನ್ನು ವಿಭಾಗಿಸಿ, ದೇಹಕ್ಕೆ ಬೇಕಾದ ಆಹಾರದ ಅಂಶವನ್ನು ದೇಹದ ವಿವಿಧ ಭಾಗಕ್ಕೆ ತಲುಪಿಸಿ, ಶಕ್ತಿಯನ್ನು ನೀಡುವ ಕ್ರಿಯೆಯನ್ನು-ದೇಹದ ಮಧ್ಯಭಾಗದಲ್ಲಿ ಕುಳಿತ 'ಸಮಾನ' ನಾಮಕ ಪ್ರಾಣ ನಿರ್ವಹಿಸುತ್ತಾನೆ. [ಇದಕ್ಕಾಗಿ ಊಟ ಮಾಡುವ ಮೊದಲು ಪ್ರಾಣನಿಗೆ ಮತ್ತು ಪ್ರಾಣನ ಅಂತರ್ಯಾಮಿ ಭಗವಂತನಿಗೆ ಆಹುತಿ ಕೊಟ್ಟು ಊಟ ಮಾಡುವುದು ಪದ್ಧತಿ]. ಇಲ್ಲಿ ದೇಹದ ಮಧ್ಯಭಾಗ ಎಂದರೆ  ನಾಭಿಯಿಂದ ಹೃದಯದ ತನಕದ ಭಾಗ. ಶಾಸ್ತ್ರದಲ್ಲಿ ಹೊಟ್ಟೆಯನ್ನೂ ಕೂಡಾ ಮಧ್ಯಭಾಗ ಎನ್ನುತ್ತಾರೆ. ದೇಹದ ಮಧ್ಯಭಾಗದ ಕೇಂದ್ರಬಿಂದು ಹೃದಯ. ಇದು ದೇಹದಲ್ಲಿ ಭಗವಂತನ ಪ್ರತಿಬಿಂಬವಾಗಿರುವ ಜೀವನಿರುವ ಸ್ಥಾನ. ಬಿಂಬವಿರುವಲ್ಲೇ ಪ್ರತಿಬಿಂಬವಿರುವುದು ಸಾಧ್ಯ. ಆದ್ದರಿಂದ ಇದು ದೇಹದಲ್ಲಿ ಬಿಂಬರೂಪಿ ಭಗವಂತನಿರುವ ಸ್ಥಾನ ಕೂಡಾ ಹೌದು. ನಮಗೆ ತಿಳಿದಂತೆ ಪ್ರಾಣದೇವರು ಭಗವಂತನ ನಿತ್ಯಸಂಗಾತಿ. ಅವರು ಎಂದೂ ಭಗವಂತನನ್ನು ಬಿಟ್ಟಿರಲಾರರು. ಹಾಗಾಗಿ ಹೃತ್ಕಮಲದಲ್ಲಿ ಜೀವ-ಪ್ರಾಣ ಮತ್ತು ಬಿಂಬರೂಪಿ ಭಗವಂತ ಜೊತೆಯಾಗಿ ನೆಲೆಸಿರುತ್ತಾರೆ.

ಜೀವ ಅನ್ನುವುದು ಅತಿಸೂಕ್ಷ್ಮವಾದ ವಸ್ತು. ಅದು ಹೃತ್ಕಮಲ ಮಧ್ಯದಲ್ಲಿ ಅನಾಹತಚಕ್ರ(thymus gland)ವೆಂಬ ಶಕ್ತಿ ಕೇಂದ್ರದಲ್ಲಿದೆ. ಈ ಜೀವ ಎನ್ನುವುದು ಕೋಣೆಯಲ್ಲಿ ಹಚ್ಚಿದ ಪುಟ್ಟ ದೀಪದಂತೆ. ದೀಪ ಇಡೀ ಕೋಣೆಯನ್ನು ಬೆಳಗಿಸುವಂತೆ  ಜೀವ  ಅತಿಸೂಕ್ಷ್ಮವಾದರೂ ಕೂಡಾ ಅದರ ಬೆಳಕು ಇಡೀ ದೇಹವನ್ನು ವ್ಯಾಪಿಸಿರುತ್ತದೆ. ಇಲ್ಲೇ ಭಗವಂತ ಮತ್ತು ಪ್ರಾಣ ಜೀವನನ್ನು ಧರಿಸಿ ನೆಲೆಸಿರುತ್ತಾರೆ. ನಾರಾಯಣ ಸೂಕ್ತದಲ್ಲಿ ಹೇಳುವಂತೆ: "ಪದ್ಮಕೋಶ-ಪ್ರ'ತೀಕಾಶಗ್ಂ ಹೃದಯಂ' ಚಾಪ್ಯಧೋಮು'ಖಮ್"  ಕೆಳಮುಖವಾಗಿರುವ ಕೆಂದಾವರೆಯ ಮೊಗ್ಗಿನಂತಿರುವ ಶಕ್ತಿ ಕೇಂದ್ರದಲ್ಲಿರುವ ಅತ್ಯಂತ ಸೂಕ್ಷ್ಮ ನೆಲೆಮನೆಯಲ್ಲಿ ಜೀವನನ್ನು ಪ್ರಾಣಾಂತರ್ಗತ ಭಗವಂತ ಧರಿಸಿ ನಿಂತಿದ್ದಾನೆ. ದೇಹದ ಸಮಸ್ತ ಚಟುವಟಿಕೆಗಳು ನಡೆಯುವುದು ಈ ಶಕ್ತಿ ಕೇಂದ್ರದಿಂದ.

ದೇಹದ ಮಧ್ಯಭಾಗದಲ್ಲಿ ನೆಲೆಸಿರುವ 'ಸಮಾನ' ನಾಮಕ ಅವಾಂತರ ಪ್ರಾಣನ ಅಂತರ್ಯಾಮಿಯಾಗಿ ಪ್ರಾಣದೇವರು ನಾವು ಆಹುತಿ ರೂಪದಲ್ಲಿ ಸೇವಿಸುವ ಆಹಾರವನ್ನು ಸಮನಾಗಿ(ಸಮಮ್-ನಯತಿ) ದೇಹದ ಆಯಾ ಭಾಗಗಳಿಗೆ ತಲುಪಿಸುತ್ತಾರೆ. ದೇಹದಲ್ಲಿ ಆಹಾರ ವಿತರಣೆ ಮಾಡುವ 'ಸಮಾನ' ನಾಮಕ ಪ್ರಾಣನಿಂದಾಗಿ ನಮಗೆ ಏಳು ಬಗೆಯ ಅರಿವು(ಜ್ಞಾನ) ಮೂಡುತ್ತದೆ. ಕಣ್ಣಿನಿಂದ ರೂಪದ ಅರಿವು, ಕಿವಿಯಿಂದ ಶಬ್ದದ ಅರಿವು, ಮೂಗಿನಿಂದ ಗಂಧದ ಅರಿವು, ನಾಲಿಗೆಯಿಂದ ರಸದ ಅರಿವು, ಚರ್ಮದಿಂದ ಸ್ಪರ್ಶದ ಅರಿವು, ಮನಸ್ಸಿನಲ್ಲಿ ಬಯಕೆ, ಬುದ್ಧಿಯಿಂದ ಬೇಕು ಬೇಡಗಳ ತೀರ್ಮಾನ-ಇವೇ ಆ ಏಳು ಬಗೆಯ ಬೆಳಕುಗಳು. ಹೀಗೆ  ಎಲ್ಲಾ ಇಂದ್ರಿಯಗಳಿಗೆ ಶಕ್ತಿ ಆಧಾನ ಮಾಡಿ, ಜ್ಞಾನಪೂರ್ಣವಾದ ಸಮಸ್ತ ಚಟುವಟಿಕೆಗಳನ್ನು ಹೃದಯದಲ್ಲಿ ನೆಲಸಿರುವ 'ಸಮಾನ' ನಿರ್ವಹಿಸುತ್ತಾನೆ.

*ಅತ್ರೈತದೇಕಶತಂ ನಾಡೀನಾಂ ತಾಸಾಂ ಶತಂಶತಮೇಕ್ಯೆಕಸ್ಯಾಂ ದ್ವಾಸಪ್ತತಿಂದ್ವಾಸಪ್ತತಿಮ್ ಪ್ರತಿಶಾಖಾನಾಡೀಸಹಸ್ರಾಣಿ ಭವಂತ್ಯಾಸು ವ್ಯಾನಶ್ಚರತಿ ॥ ೬॥*

ಪ್ರಾಣ, ಅಪಾನ ಮತ್ತು ಸಮಾನರ ಕಾರ್ಯವ್ಯಾಪ್ತಿಯನ್ನು ವಿವರಿಸಿದ ಪಿಪ್ಪಲಾದರು ಇಲ್ಲಿ 'ವ್ಯಾನ' ನ ಕಾರ್ಯವ್ಯಾಪ್ತಿಯನ್ನು ವಿವರಿಸುತ್ತಾರೆ. ಇದೊಂದು ಅಪೂರ್ವವಾದ ವಿಷಯ. ಈ ವಿಷಯ ಅಧ್ಯಾತ್ಮ ಶಾಸ್ತ್ರದಲ್ಲಿ ಇನ್ನೆಲ್ಲಿಯೂ ಕಾಣಸಿಗುವುದಿಲ್ಲ. ನಮ್ಮ ಹೃದಯದ ಕೇಂದ್ರ ಭಾಗದಿಂದ  ೧೦೧ ನಾಡಿಗಳು ಕವಲೊಡೆದಿವೆ. [ಐವತ್ತು ಎಡ ಭಾಗದಲ್ಲಿ, ಐವತ್ತು ಬಲಭಾಗದಲ್ಲಿ ಮತ್ತು ನಡುವೆ ಸುಷುಮ್ನಾ ನಾಡಿ]. ಇಲ್ಲಿರುವ ಪ್ರತಿಯೊಂದು ನಾಡಿಗಳಿಗೂ

೧೦೦ ಉಪನಾಡಿಗಳಿವೆ. ಹಾಗಾಗಿ ಒಟ್ಟು ೧೦,೧೦೦ ಉಪನಾಡಿಗಳು. ಪ್ರತಿಯೊಂದು ಉಪನಾಡಿಗಳಿಗೂ ಕೂಡಾ ೭೨,೦೦೦ ಪ್ರತಿನಾಡಿಗಳಿವೆ. ಆದ್ದರಿಂದ ನಮ್ಮ ದೇಹದಲ್ಲಿರುವ ಒಟ್ಟು ನಾಡಿಗಳ ಸಂಖ್ಯೆ: ೭೨ ಕೋಟಿ ೭೨ ಲಕ್ಷ! ಇದು ಇಂದಿನ ವೈದ್ಯಶಾಸ್ತ್ರಕ್ಕೆ ತಿಳಿಯದ ವಿಚಾರ. ಏಕೆಂದರೆ ಇದರಲ್ಲಿ ಕಣ್ಣಿಗೆ ಕಾಣುವ ಮತ್ತು ಕಾಣದ ಸೂಕ್ಷ್ಮಾತಿಸೂಕ್ಷ್ಮ ಶಕ್ತಿ ಸಂಪರ್ಕಗಳು ಸೇರಿವೆ. ಈ ಎಲ್ಲಾ ನಾಡಿಗಳಲ್ಲಿ, ಕಾಲಿನ ಬೆರಳಿನಿಂದ ಹಿಡಿದು, ತಲೆಕೂದಲಿನ ತನಕ 'ವ್ಯಾನ' ಬೇರೆ ಬೇರೆ ಶಕ್ತಿಯನ್ನು ಹರಿಸುತ್ತಾನೆ. ನಮ್ಮ ದೇಹದಲ್ಲಿ ವ್ಯಾನ ಶಕ್ತಿ ದೇಹದ ಎಲ್ಲಾ ಭಾಗದಲ್ಲಿ ಹರಿಯುತ್ತಿದ್ದರೆ ಆಗ ದೇಹ ಗಟ್ಟಿಮುಟ್ಟಾಗಿರುತ್ತದೆ. ಎಲ್ಲಿ ವ್ಯಾನ ಶಕ್ತಿ ಕಡಿಮೆಯಾಯಿತೋ ಅಲ್ಲಿ ನೋವು ಕಾಣಿಸಿಕೊಳ್ಳುತ್ತದೆ. ಒಟ್ಟಿನಲ್ಲಿ ಹೇಳಬೇಕೆಂದರೆ ದೇಹದಲ್ಲಿನ ಪ್ರತಿನಾಡಿಯಲ್ಲೂ ವಿಶೇಷ ಶಕ್ತಿಯನ್ನು ತುಂಬುವ, ವಿಶಿಷ್ಟವಾದ ಕಾರ್ಯವನ್ನು ವ್ಯಾನ ನಾಮಕ ವಾಯುವಿನ ಅಂತರ್ಯಾಮಿಯಾಗಿ ಕುಳಿತು ಪ್ರಾಣದೇವರು ಮಾಡಿಸುತ್ತಿರುತ್ತಾರೆ.

*ಅಥೈಕಯೋರ್ಧ್ವ ಉದಾನಃ ಪುಣ್ಯೇನ ಪುಣ್ಯಂ ಲೋಕಂ ನಯತಿ ಪಾಪೇನ ಪಾಪಮುಭಾಭ್ಯಾಮೇವ ಮನುಷ್ಯಲೋಕಮ್ ॥೭॥*

ಕಂಠದಲ್ಲಿ ಕಿರುನಾಲಿಗೆಯ ಕೆಳಗೆ ಸೂಜಿ ಮೊನೆಯಷ್ಟು ಸೂಕ್ಷ್ಮವಾಗಿರುವ ವಿಶುದ್ಧಿಚಕ್ರದ ಮೂಲಕ ನಮಗೆ ಕನಸಿನ ಅನುಭವವನ್ನು ಕೊಡುವವನು ಉದಾನ. ಜೀವನನ್ನು ದೇಹದ ಯಾವುದಾದರೊಂದು ನಾಡಿಯ ಮೂಲಕ ಹೊರ ಕರೆದುಕೊಂಡು ಹೋಗಿ, ಜೀವ ಸೇರಬೇಕಾದ ಲೋಕಕ್ಕೆ ಸೇರಿಸುವವನೂ ಅವನೇ. ಜೀವ ದೇಹದಿಂದ ಯಾವುದೇ ಭಾಗದಿಂದ ಕೂಡಾ ಹೊರ ಹೋಗಬಹುದು. ಕೇವಲ ನವದ್ವಾರದಲ್ಲಷ್ಟೇ ಅಲ್ಲ, ರೋಮಕೂಪದಲ್ಲಿ ಕೂಡಾ ಜೀವ ಹೊರ ಹೋಗಬಹುದು. ಸಾಮಾನ್ಯವಾಗಿ ಪುಣ್ಯ ಮಾಡಿದ ಜೀವ ದೇಹದ ಊರ್ಧ್ವಭಾಗದಿಂದ ಹೊರ ಹೋಗುತ್ತದೆ. ಇಂತಹ ಜೀವರನ್ನು ಉದಾನನ ಅಂತರ್ಯಾಮಿ ಪ್ರಾಣ ಸುಖವನ್ನು ಅನುಭವಿಸುವ ಸ್ವರ್ಗದಂತಹ ಪುಣ್ಯಲೋಕಕ್ಕೆ ಕರೆದುಕೊಂಡು ಹೋಗುತ್ತಾನೆ. ಪಾಪ ಮಾಡಿದ ಜೀವ ದೇಹದ ಸೊಂಟದ ಕೆಳಗಿನ ಭಾಗದಿಂದ ಹೊರ ಹೋಗುತ್ತದೆ. ಅಂತಹ ಜೀವರನ್ನು ಪ್ರಾಣದೇವರು ದುಃಖವನ್ನು ಅನುಭವಿಸುವ ನರಕಾದಿ ಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ. ಪುಣ್ಯ-ಪಾಪಗಳೆರಡೂ ಸಮನಾಗಿದ್ದಾಗ ಅಂತಹ ಜೀವ ನೇರವಾಗಿ ಮನುಷ್ಯ ಲೋಕದಲ್ಲಿ ಹುಟ್ಟುತ್ತದೆ. ಕೆಲವೊಮ್ಮೆ ಪ್ರಸವಕಾಲದಲ್ಲಿ ಜೀವ ದೇಹವನ್ನು ಬಿಟ್ಟು ಹೋಗುವುದುಂಟು. ಅಂತಹ ಸಮಯದಲ್ಲಿ ನೇರ ಮನುಷ್ಯಲೋಕದಲ್ಲಿ ಹುಟ್ಟಬೇಕಾದ ಜೀವ ಆ ದೇಹವನ್ನು ಪ್ರವೇಶಿಸಿ ಹುಟ್ಟಬಹುದು. ಇದು ಅತ್ಯಂತ ವಿರಳ. ಆದರೆ ಈ ರೀತಿ ಜೀವ ಇನ್ನೊಂದು ಶರೀರವನ್ನು ತಕ್ಷಣ ಪ್ರವೇಶಿಸಿದರೆ ಆಗ ಆ ಜೀವನಿಗೆ ತನ್ನ ಹಿಂದಿನ ಜನ್ಮದ ಸ್ಮರಣೆ ಇರುತ್ತದೆ.
ಒಟ್ಟಿನಲ್ಲಿ ಹೇಳಬೇಕೆಂದರೆ ಗರ್ಭದಲ್ಲಿರುವ ಒಂಬತ್ತು ತಿಂಗಳಿನಿಂದ ಹಿಡಿದು, ಹುಟ್ಟಿ ಸಾಯುವ ತನಕ, ಸತ್ತ ನಂತರ ಲೋಕಾಂತರ ಹೋಗಿ ಮತ್ತೆ ಹುಟ್ಟುವ ತನಕ, ಪ್ರತಿಯೊಂದು ಜೀವರ ಕ್ರಿಯೆ ಪಂಚಪ್ರಾಣರ ಅಧೀನವಾಗಿ ನಡೆಯುತ್ತಿರುತ್ತದೆ. ಈ ಪ್ರಾಣತತ್ತ್ವವನ್ನು ತಿಳಿದರೆ ಪ್ರಪಂಚದ ರಹಸ್ಯವನ್ನು ತಿಳಿದಂತೆ.

*ಆದಿತ್ಯೋ ಹ ವೈ ಬಾಹ್ಯಃ ಪ್ರಾಣಃ ಉದಯತ್ಯೇಷ ಹ್ಯೇನಂ ಚಾಕ್ಷುಷಂ ಪ್ರಾಣಮನುಗೃಹ್ಣಾನಃ । ಪೃಥಿವ್ಯಾಂ ಯಾ ದೇವತಾ ಸೌಷಾ ಪುರುಷಸ್ಯಾಪಾನಮವಷ್ಟಭ್ಯಾಂತರಾ ಯದಾಕಾಶಃ ಸ ಸಮಾನೋ ವಾಯುರ್ವ್ಯಾನಃ ॥೮॥*

ನಮ್ಮ ಅಂತರಂಗ ಪ್ರಪಂಚ(ಪಿಂಡಾಂಡ)ದಲ್ಲಿ ಪ್ರಾಣದೇವರ ಕಾರ್ಯವ್ಯಾಪ್ತಿಯನ್ನು ವಿವರಿಸಿದ ಪಿಪ್ಪಲಾದರು, ಮುಂದೆ ಬ್ರಹ್ಮಾಂಡದಲ್ಲಿ ಪ್ರಾಣದೇವರ ಐದು ರೂಪಗಳ ಕಾರ್ಯಕ್ಷೇತ್ರವನ್ನು ವಿವರಿಸುತ್ತಾರೆ. ಇಲ್ಲಿ ದೇಹದ ಒಳಗೆ ಮತ್ತು ದೇಹದ ಹೊರಗೆ ಪ್ರಾಣದೇವರ ಕ್ರಿಯೆಯನ್ನು ಸಮನ್ವಯ ಮಾಡಿ ವಿವರಿಸಲಾಗಿದೆ. ಪಂಚಪ್ರಾಣರಿಗೂ ಮತ್ತು ಪಂಚಭೂತಗಳಿಗೂ ಇರುವ ಸಂಬಂಧವನ್ನು ಇಲ್ಲಿ ಪಿಪ್ಪಲಾದರು ವಿವರಿಸಿದ್ದಾರೆ.

ಹೇಗೆ ನಮ್ಮ ದೇಹದ ಊರ್ಧ್ವಭಾಗದಲ್ಲಿದ್ದು ಪ್ರಾಣದೇವರು ಜ್ಞಾನದಬೆಳಕು ನೀಡುತ್ತಾರೋ, ಹಾಗೇ ದೇಹದ ಹೊರಗೆ ಸೂರ್ಯನಲ್ಲಿದ್ದು, ಇಡೀ ವಿಶ್ವವನ್ನು ಬೆಳಗುವ ಶಕ್ತಿ ಪ್ರಾಣದೇವರು. ಸೂರ್ಯನಿಗೂ ನಮ್ಮ ಕಣ್ಣಿಗೂ ನೇರ ಸಂಬಂಧ. ಬ್ರಹ್ಮಾಂಡದಲ್ಲಿರುವ ಸೂರ್ಯನೇ ಪಿಂಡಾಂಡದಲ್ಲಿ ಕಣ್ಣಾಗಿದ್ದಾನೆ. ಐತರೇಯ ಉಪನಿಷತ್ತಿನಲ್ಲಿ ಹೇಳುವಂತೆ: ಆದಿತ್ಯಶ್ಚಕ್ಷುರ್ಭೂತ್ವಾಽಕ್ಷಿಣೀ ಪ್ರಾವಿಶದ್ ॥ಐ-ಉ-೨-೪ ॥ ಸೂರ್ಯಶಕ್ತಿಯಿಂದಲೇ ನಮಗೆ ಕಣ್ಣು ಕಾಣುವುದು. ಇಲ್ಲಿ ವಿಶೇಷವೇನೆಂದರೆ ಪ್ರಾಣದೇವರೇ ಸೂರ್ಯನಲ್ಲಿ ನಿಂತು ಬೆಳಕು ನೀಡುವವರು ಹಾಗೂ ನಮ್ಮ ಕಣ್ಣಿನಲ್ಲಿ ನಿಂತು ನಮಗೆ ನೋಡುವ ಶಕ್ತಿ ಕೊಡುವವರು. ಎಲ್ಲಾ ಇಂದ್ರಿಯಗಳನ್ನು ನಿಯಂತ್ರಿಸುವ ಶಕ್ತಿ ಪ್ರಾಣ ಶಕ್ತಿಯಾದರೂ ಸಹ, ಇದೊಂದು ಪ್ರಾಣದೇವರ ವಿಶೇಷ ಸನ್ನಿಧಾನ.

ಪ್ರಾಣದೇವರು ಪಂಚಭೂತಗಳಲ್ಲಿ ಒಂದಾದ ನೀರಿನಲ್ಲಿ ಸನ್ನಿಹಿತರಾಗಿದ್ದಾರೆ. ನಾವು ಒಂದು ವೇಳೆ ಊಟ ಮಾಡದೇ ಕೆಲವು ದಿನ ಬದುಕಬಹುದು, ಆದರೆ ನೀರಿಲ್ಲದೇ ಬದುಕಲು ಸಾಧ್ಯವಿಲ್ಲ. ನೀರಿನಲ್ಲಿ ಮತ್ತು ಕಣ್ಣಿನಲ್ಲಿ ಪ್ರಾಣದೇವರ ವಿಶೇಷ ಸನ್ನಿಧಾನವಿದೆ. ಹಾಗಾಗಿ ನಮಗೆ ಬಹಳ ಆನಂದವಾದಾಗ ಅಥವಾ ಬಹಳ ದುಃಖವಾದಾಗ ಕಣ್ಣಿನಿಂದ ನೀರು ಬರುತ್ತದೆ. ಅದೇ ರೀತಿ ಹೊರಗೆ ನೀರನ್ನು ಆವಿಯಾಗಿಸಿ ಮಳೆ ಸುರಿಸುವವರೂ ಸೂರ್ಯನ ಅಂತರ್ಯಾಮಿಯಾಗಿರುವ ಪ್ರಾಣದೇವರು. 'ಮೇಘೋ ಭೂತ್ವಾ ಪ್ರಾವಸ್ಯತಿ' ಎನ್ನುವ ಒಂದು ಮಾತಿದೆ. ಇದು ಪ್ರಾಣದೇವರ ಒಂದು ವಿಶೇಷ ಕ್ರಿಯೆಯನ್ನು ಹೇಳುತ್ತದೆ. ಪ್ರಾಣದೇವರು ಸಮುದ್ರಕ್ಕೆ ಸೇರುವ ಎಲ್ಲಾ ನದಿನೀರನ್ನು ಸಮುದ್ರದ ಲವಣನೀರಿನಿಂದ ಬೇರ್ಪಡಿಸಿ ಮಳೆ ಬರಿಸುತ್ತಾರೆ. ಹೀಗೆ ಆಕಾಶದಿಂದ ಮಳೆ ಸುರಿಯುವುದೂ ಪ್ರಾಣದೇವರಿಂದ ಮತ್ತು ಕಣ್ಣಿನಿಂದ ನೀರು ಸುರಿಯುವುದೂ ಪ್ರಾಣದೇವರಿಂದ. ಒಟ್ಟಿನಲ್ಲಿ ಹೇಳಬೇಕೆಂದರೆ: ಪ್ರಾಣದೇವರು ಕಣ್ಣಿನಲ್ಲಿ ಸನ್ನಿಹಿತರಾಗಿ ಅರಿವಿನ ಬೆಳಕು ನೀಡುತ್ತಾರೆ; ನೀರಿನಲ್ಲಿ ಸನ್ನಿಹಿತರಾಗಿ ಜೀವನವನ್ನು ಕೊಡುತ್ತಾರೆ; ಸೂರ್ಯನ ಅಂತರ್ಯಾಮಿಯಾಗಿ ನಿಂತು, ಆದಿತ್ಯನಾಮಕರಾಗಿ, ಉದಯಿಸುವ ಸೂರ್ಯನಲ್ಲಿದ್ದು, ಸೌರಶಕ್ತಿ ಹರಿಸುತ್ತಾ, ನಮಗೆ ಕಾಣಿಸಿಕೊಳ್ಳುತ್ತಾರೆ. ಇದು ನಮ್ಮ ಪ್ರಾಚೀನ ಋಷಿಗಳು ಕಂಡುಕೊಂಡ ದೈವವಿಜ್ಞಾನ.

ದೇಹದಲ್ಲಿ ಅಪಾನನಾಮಕನಾಗಿ ನಮ್ಮ ಮಲ-ಮೂತ್ರ ವಿಸರ್ಜನೆಗೆ ಕಾರಣವಾಗಿರುವ ಶಕ್ತಿಯೇ, ಭೂಮಿಯಲ್ಲಿ ಮೇಲಿನಿಂದ ಕೆಳಕ್ಕೆಳೆಯುವ ಶಕ್ತಿಯಾಗಿದೆ. ಇದೇ ಭೂಮಿಯ ಗುರುತ್ವಾಕರ್ಷಣ ಶಕ್ತಿ. [ಪಿಪ್ಪಲಾದರ ಈ ಮಾತಿನಿಂದ ಇಲ್ಲಿ ನಮಗೆ ಸ್ಪಷ್ಟವಾಗಿ ತಿಳಿಯುವುದೇನೆಂದರೆ: ನಮ್ಮ ಪ್ರಾಚೀನ ಋಷಿಗಳಿಗೆ ಭೂಮಿಯ ಗುರುತ್ವಾಕರ್ಷಣ ಶಕ್ತಿಯ ಬಗ್ಗೆ ಪೂರ್ಣ ತಿಳುವಳಿಕೆ ಇತ್ತು; ಅದು ಇಂದಿನ ಪಾಶ್ಚಾತ್ಯರು ಕಂಡುಕೊಂಡ ಹೊಸ ವಿಚಾರವೇನೂ ಅಲ್ಲ ಎನ್ನುವುದು. ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಆರ್ಯಭಟ್ಟ "ಆಕೃಷ್ಟಿ ಶಕ್ತಿಶ್ಚ ಮಹೀ" ಎಂದು ಭೂಮಿಯ ಗುರುತ್ವಾಕರ್ಷಣ ಶಕ್ತಿಯ ಬಗ್ಗೆ ಹೇಳಿರುವುದನ್ನು ಇಲ್ಲಿ ನಾವು ನೆನಪಿಸಿಕೊಳ್ಳಬೇಕು. ಭೂಮಿಯನ್ನು 'ಭೂಗೋಲ' ಎಂದು ಕರೆದಿದ್ದ ನಮ್ಮ ಪ್ರಾಚೀನ ಋಷಿಗಳು, ಭೂಮಿ ದುಂಡಗಿದೆ ಎಂದು ತಿಳಿದಿದ್ದರು ಎನ್ನುವುದು ಅವರು ಬಳಸಿರುವ 'ಗೋಲ' ಎನ್ನುವ ಪದದಿಂದಲೇ ತಿಳಿಯುತ್ತದೆ. ದುರಾದೃಷ್ಟವಶಾತ್ ಇಂದು ನಮಗೆ ನಮ್ಮ ಪೂರ್ವಿಕರು ಕೊಟ್ಟ ಅಪೂರ್ವ ವಿಜ್ಞಾನದ ಬಗ್ಗೆ ಯಾವುದೇ ತಿಳುವಳಿಕೆ/ಗೌರವ ಇಲ್ಲಾ ]. ಭೂಮಿಯಲ್ಲಿ ಅಪಾನಶಕ್ತಿ ಇರುವುದರಿಂದ ಅದು ತನ್ನ ಕಕ್ಷೆಯಲ್ಲಿ, ಭೌತಿಕವಾಗಿ ನಿರಾಲಂಭವಾಗಿ ನಿಂತಿದೆ. ಇಂತಹ ಪ್ರಕೃತಿಸತ್ಯ ಹಿಂದೆ ಋಷಿಗಳಿಗೆ

ಸ್ಫುರಣವಾಗುತ್ತಿತ್ತು. ನ್ಯೂಟನ್ ಕೂಡಾ ಈ ಸತ್ಯವನ್ನು ಕಂಡುಕೊಂಡಿದ್ದು ಯಾವುದೇ ಸಂಶೋಧನೆಯಿಂದಲ್ಲ, ಬದಲಾಗಿ ಸೇಬುಹಣ್ಣಿನ ಮರದಿಂದ ಸೇಬು ಕೆಳಕ್ಕೆ ಬಿದ್ದಾಗ ಅದು ಅವನಿಗೆ ಸ್ಫುರಣವಾಯಿತು.

ಪ್ರಾಣ ಮತ್ತು ಅಪಾನರು ಮಣ್ಣು-ನೀರಿನಲ್ಲಿ ತುಂಬಿ ಈ ವಿಶ್ವದ ಭೌತಿಕ ರೂಪಕ್ಕೆ ಕಾರಣರಾದರು. ಅವರೇ ನಮ್ಮ ಪಿಂಡಾಂದಲ್ಲಿದ್ದು, ನಮ್ಮ ಅನ್ನಮಯಕೋಶಕ್ಕೆ ಆಕಾರ ಕೊಟ್ಟವರು. ಪಂಚಭೂತಗಳಲ್ಲಿ ಮಣ್ಣು ಮತ್ತು ನೀರಿನಲ್ಲಿ ತುಂಬಿರುವ ಪ್ರಾಣಶಕ್ತಿಯನ್ನು ವಿವರಿಸಿದ ಪಿಪ್ಪಲಾದರು, ಮುಂದೆ ಆಕಾಶದಲ್ಲಿರುವ ಪ್ರಾಣಶಕ್ತಿಯನ್ನು ವಿವರಿಸುತ್ತಾರೆ. ಅವರು ಹೇಳುತ್ತಾರೆ: “ಅಂತರಾ ಯದಾಕಾಶಃ ಸ ಸಮಾನಃ” ಎಂದು. ಹಿಂದೆ ಹೇಳಿದಂತೆ ನಮ್ಮ ಹೃದಯಾಕಾಶದಲ್ಲಿ ಹೇಗೆ ‘ಸಮಾನ’ ನಾಮಕ ಪ್ರಾಣ ತುಂಬಿ ನಿಂತು ನಡೆಸುತ್ತಿದ್ದಾನೋ, ಹಾಗೇ ಹೊರಗೆ ಭೂಮಿ ಮತ್ತು ಸ್ವರ್ಗಲೋಕದ ನಡುವೆ ಇರುವ ಆಕಾಶದಲ್ಲಿ, ‘ಅವಕಾಶವಾಗಿ’, ಪ್ರಾಣದೇವರು ಆಕಾಶದ ದೇವತೆಯಾದ ಗಣಪತಿಯ ಅಂತರ್ಯಾಮಿಯಾಗಿ ನೆಲಸಿ, ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಪಂಚದ ಸಮಸ್ತ ಚಟುವಟಿಕೆಗಳು ನಡೆಯುವುದು ಆಕಾಶದಲ್ಲಿ. ಆಕಾಶವೇ ಇಲ್ಲದಿದ್ದರೆ ಯಾವ ಚಟುವಟಿಕೆಗೂ ಅವಕಾಶವಿಲ್ಲ. ವಿಶ್ವದಲ್ಲಿ ಪ್ರತಿಯೊಂದು ಚಟುವಟಿಕೆಗಳಿಗೆ ಅವಕಾಶ ಮಾಡಿಕೊಡುವವರು ‘ಸಮಾನನ’ ಅಂತರ್ಯಾಮಿ ಮುಖ್ಯಪ್ರಾಣ ದೇವರು. ದೇಹದಲ್ಲಿರುವ ೭೨ಕೋಟಿ ೭೨ಲಕ್ಷ ನಾಡಿಗಳಲ್ಲಿ ಜೀವವಾಗಿ ತುಂಬಿರುವ ‘ವ್ಯಾನ’ ನಾಮಕ ಪ್ರಾಣ, ಹೊರಗೆ ಆಕಾಶದಲ್ಲಿ ವಾಯುವಾಗಿ ನಮಗೆ ಜೀವವಾಯುವಾದ ಆಮ್ಲಜನಕವನ್ನು ನೀಡುತ್ತಾರೆ. ಆಕಾಶದಲ್ಲಿ ಗಾಳಿ ಇರುವುದರಿಂದ ನಮಗೆ ಶಬ್ದದ ಅನುಭವವಾಗುತ್ತದೆ. ಗಾಳಿಯಲ್ಲಿ, ಹತ್ತು ದಿಕ್ಕುಗಳಲ್ಲಿ, ನಮ್ಮ ಗ್ರಹಣೇಂದ್ರಿಯದಲ್ಲಿ ತುಂಬಿ ನಮಗೆ ಶಬ್ದ ಕೇಳುವಂತೆ ಮಾಡುವವರು ‘ವ್ಯಾನ’ ಅಂತರ್ಗತ ಮುಖ್ಯಪ್ರಾಣ ದೇವರು. ಈ ಎಲ್ಲಾ ವಿಚಾರಗಳೂ ಬಹಳ ಅದ್ಭುತವಾದ ವಿಜ್ಞಾನ. ಇದು ಯಾವುದೇ ಸಂಶೋಧನೆಗೆ ನಿಲುಕದ ವಿಷಯ. ಇದು ನಮ್ಮ ಪ್ರಾಚೀನ ಋಷಿಗಳು ಭಗವದನುಗ್ರಹದಿಂದ ಅಂತರ್ದರ್ಶನದಲ್ಲಿ ಕಂಡುಕೊಂಡ ಸತ್ಯ.

*ತೇಜೋ ಹವಾ ಉದಾನಃ । ತಸ್ಮಾದುಪಶಾಂತತೇಜಾಃ । ಪುನರ್ಭವಮಿಂದ್ರಿಯೈರ್ಮನಸಿ ಸಂಪದ್ಯಮಾನೈರ್ಯಚ್ಚಿತ್ತಸ್ತೇನೈಷ ಪ್ರಾಣ ಆಯತಿ ॥೯॥*
*ಪ್ರಾಣಸ್ತೇಜಸಾ ಯುಕ್ತಃ ಸ ಹಾऽತ್ಮನಾ ಯಥಾಸಂಕಲ್ಪಿತಂ ಲೋಕಂ ನಯತಿ ॥೧೦॥*

ಈ ಹಿಂದೆ ವಿವರಿಸಿದಂತೆ: ‘ಉದಾನ’ ಜೀವನನ್ನು ದೇಹದಲ್ಲಿನ ಯಾವುದೋ ಒಂದು ನಾಡಿಯ ಮುಖೇನ ದೇಹದಿಂದ ಹೊರ ಕರೆದುಕೊಂಡು ಹೋಗುತ್ತಾನೆ. ಪ್ರಾಣದೇವರು ಜೀವನೊಂದಿಗೆ ದೇಹವನ್ನು ಬಿಟ್ಟ ತಕ್ಷಣ, ದೇಹ ಶವವಾಗುತ್ತದೆ ಮತ್ತು ತಣ್ಣಗಾಗುತ್ತದೆ. ಹೇಗೆ ನಮ್ಮ ದೇಹದ ಒಳಗೆ ಪ್ರಾಣಾಗ್ನಿಯಾಗಿ ತೇಜಸ್ಸಿನ ದೇವತೆ ‘ಉದಾನ’ ಸನ್ನಿಹಿತನಾಗಿದ್ದಾನೋ, ಹಾಗೇ ದೇಹದ ಹೊರಗೆ ಪಂಚಭೂತಗಳಲ್ಲಿ ‘ಉದಾನ’ ನಾಮಕ ಪ್ರಾಣ ಅಗ್ನಿಯಲ್ಲಿ ಸನ್ನಿಹಿತನಾಗಿದ್ದಾನೆ.

ಹೀಗೆ ಸಮಸ್ತ ಬ್ರಹ್ಮಾಂಡ ಮತ್ತು ಪಿಂಡಾಂಡದಲ್ಲಿರುವ ಒಂದೊಂದು ಶಕ್ತಿಯ ಹಿಂದಿರುವ ಮೂಲಶಕ್ತಿ ಪ್ರಾಣದೇವರು. ಪ್ರಪಂಚದಲ್ಲಿ ಪ್ರಾಣದೇವರ ಪ್ರವೇಶವಿಲ್ಲದೇ ಒಂದು ಹುಲ್ಲುಕಡ್ಡಿಗೂ ಅಸ್ತಿತ್ವವಿಲ್ಲ. ಇಡೀ ಬ್ರಹ್ಮಾಂಡದಲ್ಲಿ ಪಂಚಭೂತಗಳ ಒಳಗೆ, ಪಂಚೇಂದ್ರಿಯದ ಒಳಗೆ, ಪಂಚಪ್ರಾಣನಾಗಿ ತುಂಬಿ, ಇಡೀ ಪ್ರಪಂಚವನ್ನು ನಿಯಂತ್ರಿಸುವ ಈ ಪಂಚಪ್ರಾಣರ ಮಹಿಮೆಯೇ ಇಷ್ಟಿರುವಾಗ, ಇನ್ನು ಈ ಪ್ರಾಣದೇವರನ್ನೂ ನಿಯಂತ್ರಿಸುವ ಭಗವಂತನ ಮಹಿಮೆ ಅದೆಷ್ಟಿರಬಹುದು? ಅದು ನಮ್ಮ ಮನಸ್ಸು ಗ್ರಹಿಸಲು ಅಸಾಧ್ಯವಾದ ಅಗಣಿತ ಶಕ್ತಿ!

ದೇಹದಿಂದ ಜೀವನನ್ನು ಆಚೆ ಕರೆದುಕೊಂಡು ಹೋಗುವ ಪ್ರಾಣದೇವರು, ಆ ಜೀವದ ಮುಂದಿನ ಗತಿಯನ್ನು ಜೀವದ ಕರ್ಮಕ್ಕನುಸಾರವಾಗಿ ನಿರ್ಧರಿಸುತ್ತಾರೆ. ಜೀವಕ್ಕೆ ಮರುಹುಟ್ಟು ತಕ್ಷಣ ಆಗಬಹುದು ಅಥವಾ ಸೂಕ್ಷ್ಮಲೋಕದಲ್ಲಿ ಸುಖವನ್ನೋ ಅಥವಾ ದುಃಖವನ್ನೋ ಅನುಭವಿಸಿದ ನಂತರ ಆಗಬಹುದು. ಜೀವ ದೇಹವನ್ನು ಬಿಟ್ಟು ಹೊರ ಹೋದಾಗ, ಆ ಜೀವಕ್ಕೆ ಸಂಬಂಧಿಸಿದ ಚಕ್ಷುರಾದಿ ಇಂದ್ರಿಯಗಳು  ಮನಸ್ಸಿನ ಜೊತೆಗೆ ಜೀವದ ಸೂಕ್ಷ್ಮ ಶರೀರದೊಂದಿಗಿರುತ್ತವೆ.

ಮೂಲತಃ ಎಲ್ಲಾ ಇಂದ್ರಿಯಗಳು ಇರುವುದು ಸೂಕ್ಷ್ಮ ಶರೀರದಲ್ಲೇ. ಸ್ಥೂಲ ಶರೀರದ ಭೌತಿಕ ಇಂದ್ರಿಯ ಕೆಲಸ ಮಾಡದೇ ಇರಬಹುದು, ಆದರೆ ಸೂಕ್ಷ್ಮ ಶರೀರದಲ್ಲಿನ ಎಲ್ಲಾ ಇಂದ್ರಿಯಗಳು ಸುಸೂತ್ರವಾಗಿರುತ್ತವೆ. ಆದ್ದರಿಂದ ಒಬ್ಬ ವ್ಯಕ್ತಿ ಕುರುಡನಾಗಿದ್ದರೆ, ಆತನ ಸೂಕ್ಷ್ಮ ಶರೀರದ ಇಂದ್ರಿಯ ಕುರುಡಾಗಿರುವುದಿಲ್ಲ. [ಈ ಕುರಿತು ಕೆಲವು ನೈಜ ಘಟನೆಗಳನ್ನೊಳಗೊಂಡ ವಿಷಯವನ್ನು ನಾವು **Raymond moody** ಬರೆದಿರುವ **Life after life**  ಎನ್ನುವ ಪುಸ್ತಕದಲ್ಲಿ ಕಾಣಬಹುದು]. ಜೀವ ಮರುಹುಟ್ಟು ಪಡೆದಾಗ ಇದೇ ಇಂದ್ರಿಯಗಳೊಂದಿಗೆ ಮರಳಿ ಹುಟ್ಟುತ್ತಾನೆ.

ಜೀವದ ಮರುಜನ್ಮಕ್ಕೆ ನಿರ್ಣಾಯಕ 'ದೇಹತ್ಯಾಗ ಮಾಡುವ ಕೊನೇ ಕ್ಷಣದಲ್ಲಿ ಜೀವ ಮಾಡುವ ಚಿಂತನೆ'. ಇದನ್ನೇ ಕೃಷ್ಣ ಗೀತೆಯಲ್ಲಿ ಹೀಗೆ ಹೇಳಿದ್ದಾನೆ: ಯಂ ಯಂ ವಾಽಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಳೇಬರಮ್ । ತನ್ತಮೇವೈತಿ ಕೌಂತೇಯ ಸದಾ ತದ್ ಭಾವಭಾವಿತಃ ॥ಭಗವದ್ಗೀತಾ-೮-೬॥ ಕೃಷ್ಣ ಹೇಳುತ್ತಾನೆ: "ಕೊನೆಯಲ್ಲಿ ಯಾವ ಯಾವ ವಿಷಯವನ್ನು ನೆನೆಯುತ್ತಾ ದೇಹವನ್ನು ತೊರೆಯುತ್ತಾನೋ, ಅದರಲ್ಲೇ ಅನುಗಾಲ ಬೇರೂರಿದ ಸಂಸ್ಕಾರದಿಂದ ಅದನ್ನೆ ಪಡೆಯುತ್ತಾನೆ" ಎಂದು. [ಇದಕ್ಕೆ ಉತ್ತಮ ದೃಷ್ಟಾಂತ ಭರತ ಚಕ್ರವರ್ತಿ ಜಿಂಕೆಯಾಗಿ ಹುಟ್ಟುವ ಕಥೆ (ಭಾಗವತ-೫-೮)]. ಇಲ್ಲಿ ಪಿಪ್ಪಲಾದರು ಇದನ್ನೇ 'ಯಚ್ಚಿತ್ತಃ' ಎಂದು ವಿವರಿಸಿದ್ದಾರೆ. ಪ್ರಾಣದೇವರು ಜೀವದ ಕೊನೇ ಕ್ಷಣದ ಇಚ್ಛೆಗನುಗುಣವಾಗಿ ಮತ್ತು ಜೀವದ ಕರ್ಮಕ್ಕನುಗುಣವಾಗಿ, ಆ ಜೀವ ಎಲ್ಲಿ ಮರಳಿ ಹುಟ್ಟಬೇಕೋ ಅಲ್ಲಿಗೆ ಕರೆದುಕೊಂಡು ಹೋಗಿ ಹುಟ್ಟಿಸುತ್ತಾರೆ.[ಇಲ್ಲಿ ಎಲ್ಲವೂ ಪರಾಬ್ಧ ಕರ್ಮಕ್ಕನುಗುಣವಾಗಿ ಭಗವಂತನ ಇಚ್ಛೆಯಂತೆಯೇ ನಡೆಯುತ್ತದೆ. ಚಿತ್ತದ ದೇವತೆ ಕೂಡಾ ಪ್ರಾಣನಾಗಿರುವುದರಿಂದ ಜೀವದ ಕೊನೇ ಇಚ್ಛೆ ಕೂಡಾ ಪ್ರಾಣದೇವರ ಅಧೀನ!]

ಇಲ್ಲಿಯ ತನಕ ಪಿಪ್ಪಲಾದರು ಒಂದು ಅದ್ಭುತವಾದ ಪ್ರಾಣತತ್ತ್ವದ ಮಹಿಮೆಯನ್ನು ವಿವರಿಸಿದರು. ಈ ಪ್ರಾಣತತ್ತ್ವದ ಮಹತ್ವವನ್ನು ನಾವೆಲ್ಲರೂ ಎಲ್ಲಾ ಸಮಯದಲ್ಲೂ ತಿಳಿದಿರಬೇಕು. ಉದಾಹರಣೆಗೆ ನಾವು ದೇವಸ್ಥಾನಕ್ಕೆ ಹೋಗುತ್ತೇವೆ, ಅಥವಾ ಮನೆಯಲ್ಲಿ ಪ್ರಾಣದೇವರ ಉಪಾಸನೆ ಮಾಡುತ್ತೇವೆ. ಈ ರೀತಿ ಪೂಜೆ ಮಾಡುವಾಗ ನಮಗೆ ಪ್ರಾಣದೇವರ ಈ ಮಹಿಮೆಯ ಎಚ್ಚರ ಇರಬೇಕು. ತಿಳಿದು ಉಪಾಸನೆ ಮಾಡಿದಾಗ ಅಲ್ಲಿ ಸಿಗುವ ಆನಂದ ಅಪರಂಪಾರವಾದುದು. ಆ ಆನಂದವನ್ನು ವಿವರಿಸಲು ಸಾಧ್ಯವಿಲ್ಲ, ಕೇವಲ ಅನುಭವಿಸಬೇಕು!  ಇಲ್ಲಿ ಮುಂದುವರಿದು ಪಿಪ್ಪಲಾದರು ಪ್ರಾಣದೇವರ ಬಗಿಗಿನ ಈ ಜ್ಞಾನವನ್ನು ಅರಿತು ಉಪಾಸನೆ ಮಾಡುವುದರ ಫಲಶ್ರುತಿಯನ್ನು ವಿವರಿಸುತ್ತಾರೆ.

*ಯ ಏವಂ ವಿದ್ವಾನ್ ಪ್ರಾಣಂ ವೇದ ನ ಹಾಸ್ಯ ಪ್ರಜಾ ಹೀಯತೇಽಮೃತೋ ಭವತಿ ॥೧೧॥*

ಪ್ರಾಣದೇವರು ಒಳಗಿನಿಂದ ಪಂಚಪ್ರಾಣರಾಗಿದ್ದಾರೆ; ಹೊರಗೆ ಪಂಚಭೂತಗಳಲ್ಲಿದ್ದಾರೆ; ಸೂರ್ಯನಲ್ಲಿದ್ದಾರೆ; ಇಂದ್ರಿಯಗಳಲ್ಲಿದ್ದಾರೆ; ಹುಟ್ಟು-ಸಾವುಗಳಲ್ಲಿದ್ದಾರೆ; ಪಂಚಕೋಶಗಳಲ್ಲಿ ತುಂಬಿ ನಮ್ಮನ್ನು ನಡೆಸುತ್ತಿದ್ದಾರೆ; ನಮ್ಮ

ಬದುಕಿನ ಒಂದೊಂದು ಕ್ಷಣವೂ ಪ್ರಾಣದೇವರಿಂದ ನಿಯಂತ್ರಿಸಲ್ಪಡುತ್ತದೆ. ಹೀಗೆ ತಿಳಿದು ಯಾರು ಉಪಾಸನೆ ಮಾಡುತ್ತಾರೋ: ಅವರು ಜೀವನದಲ್ಲಿ ಎಂದೂ ದುರಂತವನ್ನು[ಚಿಕ್ಕವರು ತಮ್ಮ ಕಣ್ಣ ಮುಂದೆ ಸಾಯುವ ದುರಂತ] ಕಾಣುವುದಿಲ್ಲ; ಅವರ ಬುದ್ಧಿಶಕ್ತಿ ಎಂದೂ ಕುಂದುವುದಿಲ್ಲ; ಅವರು ಬುದ್ಧಿವಂತ ಜ್ಞಾನಿಯಾಗಿ ಬೆಳೆಯುತ್ತಾರೆ; ಬಂದ ಜ್ಞಾನ ಅವರಲ್ಲಿ ಕೊನೇ ತನಕ ಸ್ಮರಣಶಕ್ತಿಯಾಗಿ ಉಳಿಯುತ್ತದೆ. ಮುಖ್ಯವಾಗಿ ಪ್ರಾಣದೇವರ ಉಪಾಸನೆ ಮಾಡುವುದರಿಂದ ಅವರು ಸಂಸಾರದಿಂದ ಪಾರಾಗಿ, ಶಾಶ್ವತವಾಗಿ ಮೋಕ್ಷದಲ್ಲಿ ಭಗವಂತನನ್ನು ಸೇರುತ್ತಾರೆ.
ಮೋಕ್ಷ ಸಾಧನೆಯಲ್ಲಿ ಅತ್ಯಂತ ಶ್ರೇಷ್ಠ ಸಾಧನೆ -ಭಗವಂತನನ್ನು ಪ್ರಾಣದೇವರ ಮೂಲಕ ಉಪಾಸನೆ ಮಾಡುವುದು. ಇದನ್ನೇ ವೇದದಲ್ಲಿ ಈ ರೀತಿ ಹೇಳಲಾಗಿದೆ ಎಂದು ಪಿಪ್ಪಲಾದರು ವೇದದ ಒಂದು ಮಂತ್ರವನ್ನು ಇಲ್ಲಿ ಉಲ್ಲೇಖಿಸುತ್ತಾರೆ:

*ತದೇಷ ಶ್ಲೋಕಃ -*

*ಉತ್ಪತ್ತಿಮಾಗತಿಂ ಸ್ಥಾನಂ ವಿಭುತ್ವಂ ಚೈವ ಪಂಚಧಾ ।*
*ಅಧ್ಯಾತ್ಮಂ ಚೈವ ಪ್ರಾಣಸ್ಯ ವಿಜ್ಞಾಯಾಮೃತಮಶ್ನುತೇ ವಿಜ್ಞಾಯಾಮೃತಮಶ್ನುತ ಇತಿ ॥ ೧೨॥*

ನಾವು ತಿಳಿಯಬೇಕಾದುದು: ಪ್ರಾಣದೇವರ ಹುಟ್ಟಿನ ಮಹಿಮೆಯನ್ನು; ಇಡೀ ವಿಶ್ವದಲ್ಲಿ ತುಂಬಿರುವ ಪ್ರಾಣಶಕ್ತಿಯ ಮಹಿಮೆಯನ್ನು; ಪಂಚಭೂತಗಳಲ್ಲಿ ಮತ್ತು ಪಂಚಪ್ರಾಣರಾಗಿ ನಮ್ಮ ದೇಹದಲ್ಲಿ ತುಂಬಿರುವ ಅವರ ಮಹಿಮೆಯನ್ನು. ನಾವು ಬ್ರಹ್ಮಾಂಡ ಮತ್ತು ಪಿಂಡಾಂಡದಲ್ಲಿ ಪ್ರಾಣದೇವರ ವೈಭವವನ್ನು ಅರಿತಿರಬೇಕು. ಇದನ್ನೆಲ್ಲವನ್ನು ತಿಳಿದರೆ ಮಾತ್ರ ಭಗವಂತನನ್ನು ಕಾಣಲು ಸಾಧ್ಯ. ಪ್ರಾಣದೇವರನ್ನು ತಿಳಿಯದೇ ಭಗವಂತನನ್ನು ತಿಳಿಯಲು ಸಾಧ್ಯವಿಲ್ಲ.
ಇಲ್ಲಿ ಬಳಕೆಯಾದ 'ಚ'-ಕಾರ ಅಧ್ಯಾತ್ಮದಲ್ಲಿ ಪ್ರಾಣದೇವರ ಮಹಿಮೆ ಅತ್ಯಂತ ಮುಖ್ಯವಾದುದು ಎನ್ನುವುದನ್ನು ಸೂಚಿಸುತ್ತದೆ. ಅದೇ ರೀತಿ ನಾವು ಅಧ್ಯಾತ್ಮದಲ್ಲಿ ಪ್ರಾಣದೇವರ ಮಹಿಮೆಯನ್ನು ತಿಳಿದಿರಲೇಬೇಕು ಎನ್ನುವುದನ್ನು 'ಏವ'-ಕಾರ ಸೂಚಿಸುತ್ತದೆ. ಪ್ರಾಣದೇವರ ಈ ಮಹಿಮೆಯನ್ನು ಅರಿತವನು ಸಾವಿಲ್ಲದ, ಆನಂದಮಯವಾದ ಮೋಕ್ಷವನ್ನು ಸೇರುತ್ತಾನೆ ಎನ್ನುತ್ತದೆ ವೇದ.
ಇಲ್ಲಿ ಕೊನೆಯಲ್ಲಿ 'ವಿಜ್ಞಾಯಾಮೃತಮಶ್ನುತ' ಎನ್ನುವ ಪದವನ್ನು ಎರಡು ಬಾರಿ ಬಳಸಲಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ಒಂದು ಅಧ್ಯಾಯ ಮುಗಿಯಿತು ಎನ್ನುವುದನ್ನು ಸೂಚಿಸಲು ಈ ರೀತಿ ಕೊನೆಯಲ್ಲಿ ಒಂದು ಪದವನ್ನು ಎರಡು ಬಾರಿ ಬಳಸುತ್ತಾರೆ. ಅದೇ ರೀತಿ ಇಲ್ಲಿ ಬಳಸಲಾದ 'ಇತಿ' ಎನ್ನುವ ಪದ ಇಲ್ಲಿಗೆ ಮೂರನೇ ಪ್ರಶ್ನೆಗೆ ಉತ್ತರರೂಪವಾದ ಗ್ರಂಥ ಸಮಾಪ್ತಿಯಾಯಿತು ಎನ್ನುವುದನ್ನು ಸೂಚಿಸುತ್ತದೆ.

*ಇತಿ ಪ್ರಶ್ನೋಪನಿಷದಿ ತೃತೀಯಃ ಪ್ರಶ್ನಃ ॥*

ಇಲ್ಲಿಗೆ ಷಟ್ ಪ್ರಶ್ನ ಉಪನಿಷತ್ತಿನ ಮೂರನೇ ಪ್ರಶ್ನೆ/ಅಧ್ಯಾಯ ಮುಗಿಯಿತು.

*******

# ಅಥ ಚತುರ್ಥಃ ಪ್ರಶ್ನಃ

ಇಲ್ಲಿಯ ತನಕ ಪ್ರಾಣ ದೇವರು ಭೌತಿಕವಾಗಿ, ಪ್ರಾಪಂಚಿಕವಾಗಿ, ಆಧ್ಯಾತ್ಮಿಕವಾಗಿ, ಹುಟ್ಟಿನಲ್ಲಿ, ಸಾವಿನಲ್ಲಿ ಮತ್ತು ಬದುಕಿನಲ್ಲಿ ಯಾವ ರೀತಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ಎಲ್ಲವನ್ನೂ ಹೇಗೆ ನಿಯಂತ್ರಿಸುತ್ತಾರೆ ಎನ್ನುವುದನ್ನು ಪಿಪ್ಪಲಾದರು ವಿವರಿಸಿದರು. ಈ ಎಲ್ಲಾ ವಿವರಣೆಯನ್ನು ಕೇಳಿದ 'ಸೌರ್ಯಾಯಣಿ ಗಾರ್ಗ್ಯಃರು' ನಮ್ಮ ನಿದ್ದೆ ಹಾಗೂ ಕನಸಿನ ಮನಃಶಾಸ್ತ ಮತ್ತು ಅದರ ಹಿಂದಿನ ವಿಜ್ಞಾನವನ್ನು ತಿಳಿಯಬಯಸಿ ಮುಂದಿನ ಪ್ರಶ್ನೆ ಕೇಳುವುದರೊಂದಿಗೆ ಪ್ರಶ್ನೋಪನಿಷತ್ತಿನ ನಾಲ್ಕನೇ ಅಧ್ಯಾಯ ಆರಂಭವಾಗುತ್ತದೆ. ಪ್ರೀತಿಯ ಅಧ್ಯಾತ್ಮ ಬಂಧುಗಳೇ, ಬನ್ನಿ, ಎಲ್ಲಿಯೂ ಕಾಣಸಿಗದ ಈ ಅಪೂರ್ವ ವಿಷಯವನ್ನು ಪ್ರಾಣದೇವರ ಮತ್ತು ಪ್ರಾಣಾಂತರ್ಗತ ಭಗವಂತನ ಕೃಪೆ ಬೇಡಿ, ಆರು ಋಷಿಗಳ ಜೊತೆ ಸೇರಿ ಪಿಪ್ಪಲಾದರಿಂದ ಕೇಳಿ ತಿಳಿಯೋಣ.

*ಅಥ ಹೈನಂ ಸೌರ್ಯಾಯಣಿ ಗಾರ್ಗ್ಯಃ ಪಪ್ರಚ್ಛ । ಭಗವನ್ನೇತಸ್ಮಿನ್ ಪುರುಷೇ ಕಾನಿ ಸ್ವಪಂತಿ ಕಾನ್ಯಸ್ಮಿನ್ ಜಾಗ್ರತಿ ಕತರ ಏಷ ದೇವಃ ಸ್ವಪ್ನಾನ್ ಪಶ್ಯತಿ । ಕಸ್ಯೈತತ್ ಸುಖಂ ಭವತಿ । ಕಸ್ಮಿನ್ನು ಸರ್ವೇ ಸಂಪ್ರತಿಷ್ಠಿತಾ ಭವಂತೀತಿ ॥೧॥*

ಸೌರ್ಯಾಯಣಿ ಗಾರ್ಗ್ಯರು' ಪಿಪ್ಪಲಾದರ ಮುಂದೆ ತಮ್ಮ ಪ್ರಶ್ನೆಯನ್ನು ನಿವೇದಿಸಿಕೊಳ್ಳುತ್ತಾರೆ. ಅವರು ಕೇಳುವ ಪ್ರಶ್ನೆ ಹೀಗಿದೆ: ಎಚ್ಚರ-ಕನಸು-ನಿದ್ದೆ ಇವು ನಾವು ಅನುಭವಿಸುವ ಮೂರು ಅವಸ್ಥೆಗಳು. ನಮ್ಮ ದೇಹದಲ್ಲಿ ನಮ್ಮ ಇಂದ್ರಿಯಗಳನ್ನು ನಿಯಂತ್ರಿಸುವ ತತ್ತ್ವಾಭಿಮಾನಿ ದೇವತೆಗಳಿದ್ದಾರೆ. ನಾವು ಎಚ್ಚರವಾಗಿದ್ದಾಗ ಈ ತತ್ತ್ವಾಭಿಮಾನಿ ದೇವತೆಗಳು ತಮ್ಮ ಕಾರ್ಯನಿರ್ವಹಿಸಿ ನಮಗೆ ಇಂದ್ರಿಯಾನುಭವವನ್ನು ಕೊಡುತ್ತಾರೆ. ನಾವು ಪೂರ್ಣನಿದ್ರಾವಸ್ಥೆಯಲ್ಲಿದ್ದಾಗ[Deep Sleep] ನಮ್ಮ ದೇಹವನ್ನು ನಿಯಂತ್ರಿಸುವವರಲ್ಲಿ ಯಾವ ದೇವತೆಗಳು ವಿಶ್ರಾಂತಿ ತೆಗೆದುಕೊಳ್ಳುತ್ತಾರೆ? ನಾವು ನಿದ್ದೆ ಮಾಡಿದಾಗಲೂ ಎಚ್ಚರವಾಗಿದ್ದು ಈ ದೇಹವನ್ನು ನಿಯಂತ್ರಿಸುವ ದೇವತೆಗಳು ಯಾರು? ನಿದ್ದೆಯಲ್ಲೂ ಜೀವನನ್ನು ಬದುಕಿಸಿ ಜೀವದಾನ ಮಾಡುವ ಶಕ್ತಿ ಯಾವುದು? ಇದು ಗಾರ್ಗ್ಯರ ಪ್ರಶ್ನೆ.

ಮುಂದುವರಿದು ಗಾರ್ಗ್ಯರು ಕನಸಿನ ಸ್ಥಿತಿಯ ಬಗ್ಗೆ ತಮ್ಮ ಪ್ರಶ್ನೆಯನ್ನು ಪಿಪ್ಪಲಾದರ ಮುಂದೆ ಪ್ರಸ್ತಾಪಿಸುತ್ತಾರೆ. ಎಚ್ಚರವೂ ಅಲ್ಲದ, ನಿದ್ದೆಯೂ ಅಲ್ಲದ ಮೂರನೇ ಸ್ಥಿತಿ 'ಕನಸಿನ' ಸ್ಥಿತಿ. ಈ ಕನಸಿನ ಪ್ರಪಂಚ ಬಹಳ ವಿಸ್ಮಯ. ನಾವು ಎಚ್ಚರದಲ್ಲಿ ಕಾಣಲು ಸಾಧ್ಯವೇ ಇಲ್ಲದ ವಿಷಯವನ್ನು ಕನಸಿನಲ್ಲಿ ಕಾಣುತ್ತೇವೆ. ನಾವು ಬಯಸಿದಂತೆ ನಮ್ಮ ಕನಸಿರುವುದಿಲ್ಲ. ನಮಗೆ ನಮ್ಮ ಕನಸಿನ ಮೇಲೆ ನಿಯಂತ್ರಣವಿಲ್ಲ. ಕೆಲವೊಮ್ಮೆ ನಮ್ಮ ಜೀವನದಲ್ಲಿ ಮುಂದೆ ನಡೆಯಬಹುದಾದ ವಿಷಯವನ್ನು ಮುನ್ಸೂಚನೆಯಾಗಿ ಕನಸಿನರೂಪದಲ್ಲಿ ಕಾಣುತ್ತೇವೆ. ಇನ್ನು ಕೆಲವೊಮ್ಮೆ ಅರ್ಥಶೂನ್ಯ ಕನಸುಗಳನ್ನೂ ಕಾಣುತ್ತೇವೆ. ಈ ಕಾಣದ ಪ್ರಪಂಚವನ್ನು ನಮಗೆ ಕಾಣಿಸುವವರು ಯಾರು? ಯಾವ ದೇವತಾ ಶಕ್ತಿ ನಮಗೆ ಕನಸಿನ ಅನುಭವವನ್ನು ಕೊಡುತ್ತದೆ?

ಸಾಮಾನ್ಯವಾಗಿ ನಾವು ಒಳ್ಳೆಯ ನಿದ್ದೆ ಮಾಡಿ ಎದ್ದಾಗ "ಬಹಳ ಆನಂದವಾಗಿ ನಿದ್ರಿಸಿದೆ" ಎನ್ನುತ್ತೇವೆ. ಕನಸಿನಲ್ಲಿ ದುಃಖಪಡಬಹುದು, ಆದರೆ ನಿದ್ದೆಯಲ್ಲಿ ಯಾರೂ ದುಃಖ ಪಡುವುದಿಲ್ಲ. ಜೀವನಿಗೆ ಸುಖದ ಅನುಭವವಾಗುವುದು ಇಂದ್ರಿಯಾನುಭವದಿಂದ. [ನೋಡುವುದು, ಕೇಳುವುದು, ಮುಟ್ಟುವುದು, ತಿನ್ನುವುದು, ಇತ್ಯಾದಿ] ನಿದ್ದೆಯಲ್ಲಿ ನಮಗೆ ಇಂದ್ರಿಯಾನುಭವ ಇರುವುದಿಲ್ಲ. ನಿದ್ದೆಯಲ್ಲಿ ಇಂದ್ರಿಯ ಮತ್ತು ಮನಸ್ಸು ಎರಡೂ ಕಾರ್ಯ ನಿರ್ವಹಿಸುವುದಿಲ್ಲ.

ಹೀಗಿರುವಾಗ ಆನಂದ ಆಗುವುದು ಹೇಗೆ? ಈ ಆನಂದವನ್ನು ನೀಡುವವರು ಯಾರು? ನಾವು ನಿದ್ದೆ ಮಾಡಿದಾಗ ನಮ್ಮ ಇಂದ್ರಿಯಾಭಿಮಾನಿ ದೇವತೆಗಳು ಏನಾಗುತ್ತಾರೆ? ಅವರೇಕೆ ಕೆಲಸ ಮಾಡುವುದಿಲ್ಲ? ನಿದ್ದೆಯಲ್ಲಿ ನಮಗೆ ತಿಳಿಯದೇ ಅನೇಕ ಕ್ರಿಯೆಗಳು ನಡೆಯುತ್ತವೆ [ಉದಾಹರಣೆಗೆ: ಜೀರ್ಣಕ್ರಿಯೆ, ಉಸಿರಾಟ]. ನಾವು ನಿದ್ರಿಸಿದಾಗ ಎಚ್ಚರವಾಗಿದ್ದು ಈ ಕ್ರಿಯೆಗಳನ್ನು ಮಾಡಿ ನಮ್ಮನ್ನು ರಕ್ಷಿಸುವ ಶಕ್ತಿ ಯಾವುದು? ಇದು ಪ್ರಶ್ನೋಪನಿಷತ್ತಿನ ನಾಲ್ಕನೇ ಪ್ರಶ್ನೆ. ಈ ಪ್ರಶ್ನೆ ಅಪೂರ್ವವಾದುದು ಮತ್ತು ಈ ಪ್ರಶ್ನೆಯ ಉತ್ತರ ಆನಂದ ತರುವಂತಹದ್ದು ಎನ್ನುವುದನ್ನು ಇಲ್ಲಿ ಬಳಸಿರುವ[ಅಥ ಹೈನಂ ಎನ್ನುವಲ್ಲಿ] 'ಹ'ಕಾರ ಸೂಚಿಸುತ್ತದೆ.

*ತಸ್ಮೈ ಸ ಹೋವಾಚ । ಯಥ ಗಾರ್ಗ್ಯ ಮರೀಚಯೋऽರ್ಕಸ್ಯಾಸ್ತಂ ಗಚ್ಛತಃ ಸರ್ವಾ ಏತಸ್ಮಿಂಸ್ತೇಜೋಮಂಡಲ ಏಕೀಭವಂತಿ । ತಾಃ ಪುನರುದಯತಃ ಪ್ರಚರಂತ್ಯೇವಂ ಹ ವೈ ತತ್ ಸರ್ವಂ ಪರೇ ದೇವೇ ಮನಸ್ಯೇಕೀಭವತಿ । ತೇನ ತರ್ಹ್ಯೇಷ ಪುರುಷೋ ನ ಶೃಣೋತಿ ನ ಪಶ್ಯತಿ ನ ಜಿಘ್ರತಿ ನ ರಸಯತೇ ನ ಸ್ಪೃಶತೇ ನಾಭಿವದತೇ ನಾऽದತ್ತೇ ನಾऽನಂದಯತೇ ನ ವಿಸೃಜತೇ ನೇಯಾಯತೇ ಸ್ವಪಿತೀತ್ಯಾಚಕ್ಷತೇ ॥೨॥*

ಗಾರ್ಗ್ಯರ ಪ್ರಶ್ನೆಗೆ ಇಲ್ಲಿ ಪಿಪ್ಪಲಾದರು ಕೊಡುವ ಉತ್ತರ ಅಪೂರ್ವವಾದುದು. ನಾವು ನಿತ್ಯವೂ ಅನುಭವಿಸುವ, ಆದರೂ ನಮಗೆ ತಿಳಿಯದ; ಎಂದೂ ಯೋಚಿಸದ; ನಾವು ಯೋಚಿಸಲೇ ಇಲ್ಲವಲ್ಲಾ ಎಂದು ಗಾಬರಿಗೊಳಿಸುವ ಮತ್ತು ಕಣ್ಣುತೆರೆಸುವ; ರೋಚಕವಾದ ಉತ್ತರವನ್ನು ಒಂದು ದೃಷ್ಟಾಂತದ ಮುಖೇನ ಪಿಪ್ಪಲಾದರು ಇಲ್ಲಿ ವಿವರಿಸಿದ್ದಾರೆ.
ಸಂಜೆಯಾದಾಗ ಸೂರ್ಯ ಮುಳುಗುತ್ತಾನೆ. ಆಗ ನಮಗೆ ಆತನ ಕಿರಣಗಳು ಆತನ ಒಳಗೆ ಸೇರಿಕೊಂಡಂತೆ ಕಾಣುತ್ತದೆ. ಆದರೆ ವಾಸ್ತವವಾಗಿ ಸೂರ್ಯ ಮುಳುಗುವುದಿಲ್ಲ, ಆತನ ಕಿರಣಗಳು ಆತನ ಒಳ ಸೇರುವುದಿಲ್ಲ. ಸೂರ್ಯ ಮುಳುಗಿದಂತೆ ಮತ್ತು ಆತನ ಕಿರಣಗಳು ಆತನ ಒಳ ಸೇರಿದಂತೆ ಭೂಮಿಯಲ್ಲಿರುವ ನಮಗೆ ಕಾಣಿಸುತ್ತದೆ ಅಷ್ಟೇ. ಅದೇ ರೀತಿ ಮುಂಜಾನೆ ಸೂರ್ಯ ಉದಯಿಸುತ್ತಾನೆ ಮತ್ತು ಆತನ ಪ್ರಖರವಾದ ಕಿರಣಗಳು ಆತನಿಂದ ಹೊರಬಂದಂತೆ ಕಾಣುತ್ತವೆ. ಇದೇ ರೀತಿ ನಾವು ಮಲಗಿದಾಗ ನಮ್ಮೊಳಗಿರುವ ದೇವತಾಶಕ್ತಿಗಳು ತಮ್ಮ ಪರಶಕ್ತಿಯಾದ, ನಮ್ಮ ಮನಸ್ಸಿನಲ್ಲಿ ಸದಾ ಸನ್ನಿಹಿತನಾಗಿರುವ, ಜ್ಞಾನಸ್ವರೂಪ ಭಗವಂತನನ್ನು ಹೋಗಿ ಸೇರುತ್ತವೆ ಮತ್ತು ಮುಂಜಾನೆ ಎದ್ದಾಗ, ಭಗವಂತನಿಂದ ಹೊರಬಂದು ಕಾರ್ಯ ನಿರ್ವಹಿಸುತ್ತವೆ. ವಾಸ್ತವವಾಗಿ ದೇವತೆಗಳು ಭಗವಂತನಲ್ಲಿ ಐಕ್ಯ ಹೊಂದುವುದಿಲ್ಲ. ಆದರೆ ನಮಗೆ ಆ ರೀತಿ ಅನುಭವವಾಗುತ್ತದೆ.
ಭಗವಂತ ಜ್ಞಾನಸ್ವರೂಪ. ಹೇಗೆ ಸೂರ್ಯನಿಗೆ ಬೆಳಕಿನ ಲೋಪವಿಲ್ಲವೋ ಹಾಗೇ ಭಗವಂತನಿಗೆ ಜ್ಞಾನದ ಲೋಪವಿಲ್ಲ. ಸೂರ್ಯ ಬೆಳಕಿನ ಉಂಡೆಯಾದರೆ ಭಗವಂತ ಜ್ಞಾನಸಾಗರ. ಈ ಜ್ಞಾನಸ್ವರೂಪ ಭಗವಂತ ಮತ್ತು ಪ್ರಾಣದೇವರು ನಿದ್ದೆಯಲ್ಲಿ ನಮ್ಮನ್ನು ನಿಯಂತ್ರಿಸುತ್ತಾರೆ. ಅವರು ನಿದ್ದೆಯಲ್ಲೂ ಸದಾ ನಮ್ಮನ್ನು ಉಸಿರಾಡಿಸಿ, ನಾವು ಸೇವಿಸಿದ ಆಹಾರವನ್ನು ಪಚನ ಮಾಡಿ, ನಮ್ಮನ್ನು ರಕ್ಷಿಸುತ್ತಾರೆ. ಇತರ ದೇವತಾಶಕ್ತಿಗಳು ಈ ಸಮಯದಲ್ಲಿ ಪ್ರಾಣದೇವರು ಮತ್ತು ಭಗವಂತನಲ್ಲಿ ಸೇರಿಕೊಂಡಿರುತ್ತಾರೆ. ಹೇಗೆ ಭಗವಂತ ಪ್ರಾಣದೇವರ ಅಂತರ್ಯಾಮಿಯಾಗಿ ನೆಲಸಿ ನಾವು ಉಂಡ ಆಹಾರವನ್ನು ಜೀರ್ಣಗೊಳಿಸುತ್ತಾನೆ ಎನ್ನುವುದನ್ನು ಕೃಷ್ಣ ಗೀತೆಯಲ್ಲಿ ಸುಂದರವಾಗಿ ವಿವರಿಸಿದ್ದಾನೆ. ಕೃಷ್ಣ ಹೇಳುತ್ತಾನೆ : ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ । ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್ ॥ಭಗವದ್ಗೀತಾ-೧೫-೧೪॥ "ನಾನು 'ವೈಶ್ವಾನರ'ನಾಗಿ

ಜೀವಿಗಳ ದೇಹದೊಳಗಿದ್ದು, ಪ್ರಾಣ-ಅಪಾನರಿಂದೊಡಗೂಡಿ [ತಿನ್ನುವ, ಚೀಪುವ, ನೆಕ್ಕುವ, ಕುಡಿಯುವ] ನಾಲ್ಕು ಬಗೆಯ ಆಹಾರವನ್ನು ಕರಗಿಸುತ್ತೇನೆ" ಎಂದು.

ಇಂದ್ರಿಯಾಭಿಮಾನಿ ದೇವತೆಗಳೆಲ್ಲರೂ ಭಗವಂತನಲ್ಲಿ ಸೇರಿಕೊಂಡಾಗ, ಜೀವನಿಗೆ(ಪುರುಷಃ) ಯಾವುದೇ ಇಂದ್ರಿಯಾನುಭವ ಆಗುವುದಿಲ್ಲ. ಆತನಿಗೆ ಮಾತು ಕೇಳದು, ಕಣ್ಣು ಕಾಣದು, ವಾಸನೆ ಗ್ರಹಣವಾಗದು, ರುಚಿ ತಿಳಿಯದು, ಸ್ಪರ್ಶಜ್ಞಾನವಿಲ್ಲ, ಮಾತನಾಡಲಾಗುವುದಿಲ್ಲ, ಕೊಟ್ಟರೆ ಕೈ ತೆಗೆದುಕೊಳ್ಳುವುದಿಲ್ಲ, ಆನಂದಕೊಡುವ ಜನನೇಂದ್ರಿಯ ಕೆಲಸ ಮಾಡದು, ವಿಸರ್ಜನೆ ಕ್ರಿಯೆ ಇಲ್ಲ, ನಡೆಯಲು ಸಾಧ್ಯವಿಲ್ಲ. ಹೀಗೆ ನಿದ್ದೆಯಲ್ಲಿ ಕರ್ಮೇಂದ್ರಿಯ ಮತ್ತು ಜ್ಞಾನೇಂದ್ರಿಯಗಳೆರಡೂ ಕೆಲಸ ಮಾಡುವುದಿಲ್ಲ. ಈ ಸ್ಥಿತಿಯನ್ನು 'ಸ್ವಪೀತಿ' ಎನ್ನುತ್ತಾರೆ. ಮೇಲ್ನೋಟಕ್ಕೆ ಸ್ವಪೀತಿ ಎಂದರೆ ನಿದ್ರಿಸಿದ್ದಾನೆ ಎಂದರ್ಥ. ಆದರೆ ಸ್ವಪೀತಿ ಎಂದರೆ ಸ್ವತಂತ್ರನಾದ ಭಗವಂತನನ್ನು ಸೇರಿದ್ದಾನೆ ಎಂದರ್ಥ.

ಓದುಗರು ಇಲ್ಲಿ ಒಂದು ಅಪೂರ್ವವಾದ ಭಾಷಾ ವಿಶೇಷವನ್ನು ಗಮನಿಸಬೇಕು. ಇಲ್ಲಿ ಇಂದ್ರಿಯಗಳ ಕ್ರಿಯೆಯನ್ನು ಹೇಳುವಾಗ ಕೆಲವು 'ಪರಸ್ಮೈಪದ' ಮತ್ತೆ ಕೆಲವು 'ಆತ್ಮನೇಪದ'ವನ್ನು ಬಳಸಲಾಗಿದೆ. ಪ್ರಾಚೀನ ಸಂಸ್ಕೃತದಲ್ಲಿ ಈ ರೀತಿ ಪ್ರಯೋಗವಿದ್ದರೆ ಅದಕ್ಕೆ ಅಲ್ಲಿ ಒಂದು ವಿಶೇಷ ಅರ್ಥವಿದೆ ಎಂದರ್ಥ. ಇದನ್ನು ನಾವು ತಿಳಿಯಬೇಕಾದರೆ ಮೊದಲು ನಮಗೆ ಪರಸ್ಮೈಪದ ಮತ್ತು ಆತ್ಮನೇಪದ ಅಂದರೆ ಏನು ಎನ್ನುವುದು ತಿಳಿದಿರಬೇಕು. ಉದಾಹರಣೆಗೆ ಅಡಿಗೆ ಮಾಡುವುದನ್ನು ಸಂಸ್ಕೃತದಲ್ಲಿ 'ಪಚತಿ' ಅಥವಾ 'ಪಚತೇ' ಎನ್ನುತ್ತಾರೆ. ಇಲ್ಲಿ 'ಪಚತಿ' ಪರಸ್ಮೈಪದ ಮತ್ತು 'ಪಚತೇ' ಆತ್ಮನೇಪದ. ಅಡಿಗೆಯನ್ನು ಬೇರೆಯವರಿಗಾಗಿ ಮಾಡುತ್ತಿದ್ದರೆ ಅದು ಪಚತಿ. ತನಗಾಗಿ ತಾನು ಅಡಿಗೆ ಮಾಡಿಕೊಂಡರೆ ಅದು ಪಚತೇ.

ಇಲ್ಲಿ ಮೊದಲ ಮೂರು ಕ್ರಿಯಾಪದಗಳು(ಶೃಣೋತಿ, ಪಶ್ಯತಿ ಮತ್ತು ಜಿಘ್ರತಿ) ಪರಸ್ಮೈಪದದಲ್ಲಿವೆ. ಉಳಿದ ಎಲ್ಲಾ ಕ್ರಿಯೆಗಳೂ ಆತ್ಮನೇಪದಗಳು. ಇದನ್ನು ವಿಶ್ಲೇಷಿಸಿದಾಗ ನಮಗೆ ಇದರ ಹಿಂದಿನ ಕಾರಣ ತಿಳಿಯುತ್ತದೆ. ಶೃಣೋತಿ, ಪಶ್ಯತಿ ಮತ್ತು ಜಿಘ್ರತಿ ಅಂದರೆ ಕೇಳುವುದು, ನೋಡುವುದು ಮತ್ತು ಆಘ್ರಾಣ ಮಾಡುವುದು. ಈ ಮೂರೂ ಕ್ರಿಯೆಗಳು ಹೊರಗಿನಿಂದ ಬರುವಂತವು. ಇವು ಏಕಕಾಲದಲ್ಲಿ ಎಲ್ಲರಿಗೂ ಅನ್ವಯವಾಗುವ ಕ್ರಿಯೆ. ಏಕಕಾಲದಲ್ಲಿ ಒಂದು ವಸ್ತುವನ್ನು ಅನೇಕ ಮಂದಿ ನೋಡಿ, ಕೇಳಿ, ಮೂಸಿ ಅನುಭವಿಸಬಹುದು. ಆದ್ದರಿಂದ ಈ ಮೂರು ಕ್ರಿಯೆಗಳನ್ನು ಹೇಳುವಾಗ ಪರಸ್ಮೈಪದ ಬಳಸಿದ್ದಾರೆ. ಇತರ ಕ್ರಿಯೆಗಳನ್ನು ನೋಡಿದರೆ ಅವು ಸಾರ್ವತ್ರಿಕವಲ್ಲ. ಅವು ಇಂದ್ರಿಯದಲ್ಲಿದ್ದು ಅನುಭವ ಕೊಡುವಂತವು. ಉದಾಹರಣೆಗೆ 'ರಸಯತೇ' . ಇಲ್ಲಿ 'ರುಚಿಯನ್ನು' ಯಾರು ತಿನ್ನುತ್ತಿದ್ದಾನೋ ಅವನಷ್ಟೇ ಅನುಭವಿಸಬಲ್ಲ. ಅದು ಸಾರ್ವತ್ರಿಕವಲ್ಲ. ಅದೇ ರೀತಿ ಸ್ಪೃಶತೇ-ಸ್ಪರ್ಶ, ನಾಭಿವದತೇ-ಮಾತನಾಡುವುದು, ನಾಽದತ್ತೇ-ಸ್ವೀಕರಿಸುವುದು, ನಾಽನಂದಯತೇ-ಆನಂದ ಹೊಂದುವುದು[ಗಂಡು-ಹೆಣ್ಣು ಪರಸ್ಪರ, ಆದರೆ ಅದು ಸಾರ್ವತ್ರಿಕವಲ್ಲ] , ವಿಸೃಜತೇ-ವಿಸರ್ಜಿಸುವುದು ಮತ್ತು ನೇಯಾಯತೇ-ನಡೆಯುವುದು. ಇದು ಸಂಸ್ಕೃತ ಭಾಷೆಯ ಚೆಲುವು. ಈ ಸೊಗಸು ಇನ್ನ್ಯಾವುದೇ ಭಾಷೆಯಲ್ಲಿ ಕಾಣಸಿಗುವುದಿಲ್ಲ.

*ಪ್ರಾಣಾಗ್ನಯ ಏವೈತಸ್ಮಿನ್ ಪುರೇ ಜಾಗ್ರತಿ ಗಾರ್ಹಪತ್ಯೋ ಹವಾ ಏಷೋಽಪಾನೋ ವ್ಯಾನೋಽನ್ವಾಹಾರ್ಯಪಚನೋ ಯದ್ ಗಾರ್ಹಪತ್ಯಾತ್ ಪ್ರಣೀಯತೇ ಪ್ರಣಯನಾದಾಹವನೀಯಃ ಪ್ರಾಣಃ ॥೩॥*

ನಾವು ಗಾಢ ನಿದ್ದೆ ಮಾಡಿದಾಗಲೂ ಎಚ್ಚರವಾಗಿದ್ದು ಕಾರ್ಯ ನಿರ್ವಹಿಸುವವರು 'ಪ್ರಾಣದೇವರು ಎನ್ನುವ ಬೆಂಕಿ' ಎನ್ನುತ್ತಾರೆ ಪಿಪ್ಪಲಾದರು. ಪ್ರಾಣದೇವರು ಎಂದೂ ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಆಯಾಸವಾದರೆ ಮಾತ್ರ ವಿಶ್ರಾಂತಿಯ ಅವಶ್ಯಕತೆ. ಆದರೆ ಪ್ರಾಣದೇವರಿಗೆ ಎಂದೂ ಆಯಾಸವಿಲ್ಲ. ಇದನ್ನು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹೀಗೆ ವಿವರಿಸಿದ್ದಾರೆ: ನೈವಾತ್ರ ವಿಶ್ರಮಣಾಮೈಚ್ಛತ ನಿಃಶ್ರಮೋಽಸೌ ನಿಃಸ್ಸೀಮಪೌರುಷಗುಣಸ್ಯ ಕುತಃ ಶ್ರಮೋಽಸ್ಯ । ಆಶ್ಲಿಷ್ಯ ಪರ್ವತವರಂ ಸ ದದರ್ಶ ಗಚ್ಛನ್ ದೇವೈಸ್ತು ನಾಗಜನನೀಂ ಪ್ರಹಿತಾ ವರೇಣ ॥ಮಹಾಭಾರತ ತಾತ್ಪರ್ಯ ನಿರ್ಣಯ ೭.೪॥ ಪ್ರಾಣದೇವರಿಗೆ ಆಯಾಸವೂ ಇಲ್ಲ, ವಿಶ್ರಾಂತಿಯೂ ಇಲ್ಲ. "ಪ್ರಳಯೇ ಅಪಿ ಪ್ರತಿಭಾತ ಪರಾ-ವರಾಹ"-ಅವರು ಪ್ರಳಯಕಾಲದಲ್ಲಿ ಕೂಡಾ ಎಚ್ಚರವಾಗಿದ್ದು, ಸದಾ ಭಗವಂತನನ್ನು ನೆನೆಯುತ್ತಿರುತ್ತಾರೆ ಮತ್ತು ಪ್ರತಿಯೊಬ್ಬನ ಒಳಗಿದ್ದು ಉಸಿರಾಡಿಸುತ್ತಿರುತ್ತಾರೆ.

ಹೀಗೆ ಪ್ರಾಣದೇವರು ಅನಾದಿ ಅನಂತ ಕಾಲದಲ್ಲಿ ವಿಶ್ರಾಂತಿ ಇಲ್ಲದೆ ಕಾರ್ಯಪ್ರವೃತ್ತರಾಗಿರುವ, ನಮ್ಮನ್ನು ಉಸಿರಾಡಿಸುವ ತತ್ತ್ವ. ಅವರು ಮಾಡುವ ಭಗವಂತನ ಪೂಜೆ ಅತಿ ದೊಡ್ಡದು. ಉಸಿರಾಡಿಸುವುದು ಎಂದರೆ ಅದು ಅವರು ಮಾಡುವ ಹಂಸಮಂತ್ರ ಜಪ. ಹಾಗಾಗಿ ಪ್ರಾಣದೇವರು ಮಾಡುವ ತಪಸ್ಸಿಗೆ ತುದಿ ಬುಡವಿಲ್ಲ ಹಾಗೂ ಅತಿಶ್ರೇಷ್ಠವಾದ ಇಂತಹ ತಪಸ್ಸನ್ನು ಪ್ರಾಣತತ್ತ್ವವಲ್ಲದೆ ಇನ್ನ್ಯಾರಿಂದಲೂ ಮಾಡಲು ಸಾಧ್ಯವಿಲ್ಲ. ಹಾಗಾಗಿ ಪ್ರಾಣ ಎಂದರೆ ಬೆಂಕಿ. ಅದು ಬೆಳಕು. ಜ್ಞಾನದ ಪುಂಜ. ದೇಹದಲ್ಲಿ ಪ್ರಾಣದೇವರ ಐದು ರೂಪಗಳು ಸದಾ ಎಚ್ಚರವಾಗಿರುತ್ತವೆ. ಪ್ರಾಣದೇವರು ದೇಹದ ಒಳಗೆ ಅಗ್ನಿಯ ಕಾರ್ಯವನ್ನು ಮಾಡುವುದರಿಂದ ಅವರನ್ನು ಇಲ್ಲಿ ಅಗ್ನಿ ಎಂದು ಕರೆದಿದ್ದಾರೆ. "ನಾನು ವೈಶ್ವಾನರ ಅಗ್ನಿಯಾಗಿ ದೇಹದಲ್ಲಿದ್ದೇನೆ, ನನಗೆ ಸಹಾಯಕರಾಗಿ ಪ್ರಾಣಾಪಾನರು ಕಾರ್ಯ ನಿರ್ವಹಿಸುತ್ತಾರೆ" ಎಂದು ಕೃಷ್ಣ ಗೀತೆಯಲ್ಲಿ ಹೇಳಿರುವುದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು.-॥ಭಗವದ್ಗೀತಾ-೧೫.೧೪॥. [ಅಗ್ನಿಯ ಕಾರ್ಯವನ್ನು ಪ್ರಾಣದೇವರು ಮಾಡುತ್ತಾರೆ ಎಂದು ಮುಂದೆ ಉಪನಿಷತ್ತಿನಲ್ಲೇ ಹೇಳಲಾಗಿದೆ].

ಇಲ್ಲಿ ನಮಗೆ ಪಿಪ್ಪಲಾದರ ಮಾತು ಅರ್ಥವಾಗಬೇಕಾದರೆ, ನಮಗೆ ಪಂಚಾಗ್ನಿಯ ಪರಿಚಯವಿರಬೇಕಾಗುತ್ತದೆ. ಹಿಂದೆ ಯಜ್ಞ ಮಾಡುವಾಗ ಐದು ಕುಂಡಗಳನ್ನು ಮಾಡಿ ಆರಾಧನೆ ಮಾಡುತ್ತಿದ್ದರು. ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ- ಇವು ತ್ರೇತಾಗ್ನಿಗಳು. ಇದರೊಂದಿಗೆ ಸಭ್ಯ ಮತ್ತು ಆವಸಥ್ಯ ಎನ್ನುವ ಎರಡು ಉಪ ಅಗ್ನಿ ಸೇರಿದಾಗ ಅದು ಪಂಚಾಗ್ನಿ. ಗ್ರಹಸ್ಥರಾದವರು ಮನೆಯಲ್ಲಿ ತಪ್ಪದೇ ಅಗ್ನಿಹೋತ್ರ ಮಾಡುವುದು ಹಿಂದಿನ ಕ್ರಮವಾಗಿತ್ತು.[ಹಿಂದಿನವರ ಅಗ್ನಿಕಾರ್ಯ ಉಪನಯನ ಆದ ತಕ್ಷಣ ಆರಂಭವಾಗುತ್ತಿತ್ತು. ಅವರು ಪ್ರಯಾಣ ಕಾಲದಲ್ಲಿ ಸಹ ಅಗ್ನಿ ಸಮೇತರಾಗಿ ಪ್ರಯಾಣಿಸುತ್ತಿದ್ದರು. ರಾಮಾಯಣದಲ್ಲಿ "ಕಾಡಿಗೆ ಹೋದ ಶ್ರೀರಾಮಚಂದ್ರನನ್ನು ಮರಳಿ ಕರೆತರಲು ಎಲ್ಲಾ ಪುರುಷರು ಅಗ್ನಿಸಮೇತರಾಗಿ ಹೊರಟರು" ಎಂದು ವಾಲ್ಮೀಕಿ ಉಲ್ಲೇಖ ಮಾಡಿರುವುದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು. ಸನ್ಯಾಸಿಗಳಿಗೆ ಅಗ್ನಿಕಾರ್ಯವಿಲ್ಲ. ಅವರು ಅಗ್ನಿತ್ಯಾಗಿಗಳು. ಜ್ಞಾನಾಗ್ನಿಯೇ ಅವರ ಅಗ್ನಿ ]. ಮನೆಯಲ್ಲಿ ನಿತ್ಯಪೂಜೆಯ ಹೋಮಕ್ಕೆ ಬಳಸುವ ಅಗ್ನಿ ಗಾರ್ಹಪತ್ಯ. ಇದು ನಂದದೇ ನಿತ್ಯ ಉರಿಯುವ ಬೆಂಕಿ. ವಿಶೇಷಯಜ್ಞ ಮಾಡುವಾಗ ಗಾರ್ಹಪತ್ಯದಿಂದ ಪ್ರಜ್ವಲಿಸುವ ಬೆಂಕಿಯನ್ನು ತಂದು ಇನ್ನೊಂದು ಕುಂಡದಲ್ಲಿ ಅಗ್ನಿ ಸ್ಥಾಪನೆ ಮಾಡುತ್ತಾರೆ. ಅದನ್ನು ವಿಶೇಷ ಆಹವನೀಯ ಅಗ್ನಿ ಎನ್ನುತ್ತಾರೆ. ಪ್ರತಿಯೊಂದು ಶುಭಕರ್ಮ ಮಾಡುವಾಗ ದೇವತೆಗಳ ಆರಾಧನೆಯ ಜೊತೆಗೆ ಪಿತೃಆರಾಧನೆ ಮಾಡಬೇಕು. ಅದಕ್ಕೆ ನಾಂದಿ ಅಥವಾ ನಾಂದಿಶ್ರಾದ್ಧ ಎಂದೂ ಕರೆಯುತ್ತಾರೆ. ಹಾಗಾಗಿ ಪ್ರತಿಯೊಂದು ಯಜ್ಞದಲ್ಲೂ ಕೂಡಾ ಪಿತೃದೇವತೆಗಳ ಆರಾಧನೆ ಮಾಡುವುದು ಕ್ರಮ. ಪಿತೃಗಳಿಗೆ ಆಹುತಿ ಕೊಡಲು ಗಾರ್ಹಪತ್ಯದಿಂದ ತುಂಡು ಬೆಂಕಿಯನ್ನು(ಕೆಂಡವನ್ನು) ತಂದು, ತೆಂಕುಬದಿಯ

ಕುಂಡದಲ್ಲಿ ಅಗ್ನಿ ಸ್ಥಾಪನೆ ಮಾಡುತ್ತಾರೆ. ಅದನ್ನು ದಕ್ಷಿಣಾಗ್ನಿ ಅಥವಾ ಅನ್ವಾಹಾರ್ಯಪಚನ ಎನ್ನುತ್ತಾರೆ. ಹೀಗೆ ನಿತ್ಯ ಆರಾಧನೆಗೆ ಒಂದು ಅಗ್ನಿ [ಗಾರ್ಹಪತ್ಯ], ದೇವತೆಗಳ ಯಜ್ಞಕ್ಕೋಸ್ಕರ ಒಂದು ಅಗ್ನಿ [ಆಹವನೀಯ] ಮತ್ತು ಪಿತೃಗಳ ಯಜ್ಞಕ್ಕೋಸ್ಕರ ಒಂದು ಅಗ್ನಿ [ದಕ್ಷಿಣಾಗ್ನಿ ಅಥವಾ ಅನ್ವಾಹಾರ್ಯಪಚನ] ಇವು ತ್ರೇತಾಗ್ನಿಗಳು.

ಪ್ರಾಣದೇವರು ಪಂಚರೂಪದಿಂದ ದೇಹವನ್ನು ರಕ್ಷಣೆ ಮಾಡುವ ಅಗ್ನಿ. ಆದ್ದರಿಂದ ಐದು ಪ್ರಾಣಾಗ್ನಿ ದೇಹದ ಒಳಗಾದರೆ ಐದು ಅಗ್ನಿ (ಪಂಚಾಗ್ನಿ) ದೇಹದಿಂದ ಹೊರಗೆ. ನಮ್ಮ ಮೂಲಾಧಾರದಲ್ಲಿರುವ ಅಪಾನವಾಯು ಇಡೀ ದೇಹದ ವ್ಯವಸ್ಥೆಗೆ ಮೂಲಶಕ್ತಿ. ಆದ್ದರಿಂದ ಅವನೇ ಗಾರ್ಹಪತ್ಯಾಗ್ನಿ. ಆತನ ನಂತರ ನಮ್ಮ ನರನಾಡಿಗಳಲ್ಲಿ ಹರಿದು ನಮ್ಮ ನೆತ್ತರನ್ನು ಶುದ್ಧಗೊಳಿಸಿ ಆರೋಗ್ಯ ಕಾಪಾಡುವ ವ್ಯಾನನೇ ದಕ್ಷಿಣಾಗ್ನಿ. ದಕ್ಷಿಣಾಗ್ನಿಯನ್ನು ಗಾರ್ಹಪತ್ಯಾಗ್ನಿಯ ತುಂಡು ಬೆಂಕಿಯಿಂದ ಸ್ಥಾಪನೆ ಮಾಡುವುದರಿಂದ ಆತ ವಿಭಜ್ಯ(ವಿ)+ಆನಯತಿ(ಆ)->ವ್ಯಾನಃ. ಹಿಂದೆ ಹೇಳಿದಂತೆ ಈ ಅಗ್ನಿಯನ್ನು ಅನ್ವಾಹಾರ್ಯಪಚನ ಎಂದೂ ಕರೆಯುತ್ತಾರೆ. ಅನು+ಆಹಾರ್ಯ+ಪಚನ=ದೇಹದ ವಿವಿಧ ಭಾಗದಲ್ಲಿ ಏನೇನು ಕ್ರಿಯೆ ನಡೆಯಬೇಕೋ ಅದಕ್ಕೆ ಅನುಗುಣವಾಗಿ ಆರೋಗ್ಯವನ್ನು ಒದಗಿಸಿ, ಆಹಾರವನ್ನು ಪಚನ ಮಾಡುವವನಾಗಿ ನಾಡಿಗಳಲ್ಲಿ ತುಂಬಿರುವವ. ಇದಲ್ಲದೆ ವ್ಯಾನ ಹೃದಯದ ದಕ್ಷಿಣದ್ವಾರದಿಂದ ಹೊರಬರುತ್ತಾನೆ ಎಂದು ಶಾಸ್ತ್ರ ಹೇಳುತ್ತದೆ. ಆದ್ದರಿಂದ ಆತ ದಕ್ಷಿಣಾಗ್ನಿಗೆ ಸಮಾನ.

ನಮ್ಮ ಊರ್ಧ್ವಭಾಗದ ನಿಯಂತ್ರಣ ಮಾಡುವ ಪ್ರಾಣಃ ಆಹವನೀಯಾಗ್ನಿ. ಗಾರ್ಹಪತ್ಯದಿಂದ ಪ್ರಜ್ವಲಿಸುತ್ತಾ ತರಲ್ಪಡುವ ಆಹವನೀಯ->ಪ್ರಜ್ವಲಂತಮ್(ಪ್ರ)+ಆನಯತಿ(ಆ)->ಪ್ರಾಣಃ. ಹಿಂದೆ ಹೇಳಿದಂತೆ ನಮ್ಮ ದೇಹದಲ್ಲಿ ಪ್ರಾಣವಾಯು ಮುಖ್ಯವಾಗಿ ಮುಖದಲ್ಲಿನ ಇಂದ್ರಿಯ ನಿರ್ವಹಣೆ ಮಾಡುತ್ತಾನೆ. ನಮ್ಮ ದೇಹದಲ್ಲಿ ಮುಖ್ಯವಾಗಿ ಎಲ್ಲಾ ವಿಷಯಗಳ ಹೋಮ ನಡೆಯುವುದು ಮುಖದಲ್ಲಿ. ಕಣ್ಣಿನಲ್ಲಿ-ರೂಪದಹೋಮ, ಕಿವಿಯಲ್ಲಿ-ಶಬ್ದದಹೋಮ, ಮೂಗಿನಲ್ಲಿ-ಗಂಧದಹೋಮ, ಬಾಯಿಯಲ್ಲಿ-ಅನ್ನದಹೋಮ. ಇದೇ ರೀತಿ ಬಾಹ್ಯ ಯಜ್ಞದಲ್ಲಿ ಆಹುತಿ ಕೊಡುವಂತಹ ಜ್ವಲನಶಕ್ತಿ ಇರುವುದು ಪ್ರಾಣನಿಗೆ. ಆದ್ದರಿಂದ ಪ್ರಧಾನ ಹೋಮ ನಡೆಯುವುದು ಆಹವನೀಯಾಗ್ನಿಯಲ್ಲಿ. ಹೀಗೆ ಇಲ್ಲಿ ಪಿಪ್ಪಲಾದರು ತ್ರೇತಾಗ್ನಿ ಮತ್ತು ಅದಕ್ಕೆ ಸಂಬಂಧಿಸಿದ ಅಂತರಂಗದ ಮುಖ್ಯಪ್ರಾಣ ದೇವರ ಮೂರು ರೂಪಗಳನ್ನು ವಿವರಿಸಿದರು. ಮುಂದೆ ಪಿಪ್ಪಲಾದರು ಮುಖ್ಯಪ್ರಾಣ ದೇವರ ಇನ್ನೆರಡು ರೂಪವನ್ನು ಭಿನ್ನ ಮುಖದಲ್ಲಿ ವಿವರಿಸುವುದನ್ನು ಕಾಣಬಹುದು.

*ಯದುಚ್ಛ್ವಾಸನಿಃಶ್ವಾಸಾವೇತಾವಾಹುತಿ ಸಮಂ ನಯತೀತಿ ಸ ಸಮಾನೋ ಮನೋ ಹ ವಾವ ಯಜಮಾನ ಇಷ್ಟಫಲಮೇವೋದಾನಃ । ಸ ಏನಂ ಯಜಮಾನಮಹರಹರ್ಬ್ರಹ್ಮ ಗಮಯತಿ ॥೪॥*

ಉಚ್ಛ್ವಾಸ ಮತ್ತು ನಿಶ್ವಾಸ ಕೂಡಾ ಪ್ರಾಣದೇವರ ಎರಡು ಆಹುತಿ. ಈ ಆಹುತಿ ದೇಹದಲ್ಲಿರುವ ಸಮಸ್ತ ಅಂಗಾಂಗಗಳಿಗೂ ಅನ್ವಯಪಡುವುದರಿಂದ ಮತ್ತು ಅದನ್ನು ಪ್ರಾಣದೇವರು ಸಮವಾಗಿ ಹಂಚುವುದರಿಂದ, ಅವರಿಗೆ ಸಮಾನ ಎಂದು ಹೆಸರು. ಅಗ್ನಿಹೊತ್ರದಲ್ಲಿ ಅಗ್ನಿಯೇ ಸಮಾನನಾಗಿ ಕೆಲಸ ಮಾಡುವ ಒಂದು ವಿಧಾನವಿದೆ. ಇದನ್ನು ತಿಳಿಯಲು ನಾವು ಅಗ್ನಿಹೋತ್ರದ ಒಂದು ಅದ್ಭುತ ವಿಚಾರವನ್ನು ತಿಳಿದಿರಬೇಕು. ಬನ್ನಿ, ಅಗ್ನಿಹೊತ್ರದ ಷೋಡಶ ಕಲೆಗಳ ಕುರಿತು ತಿಳಿದು, 'ಸಮಾನ' ನಾಮಕ ಪ್ರಾಣದೇವರ ಕಾರ್ಯವ್ಯಾಪ್ತಿಯನ್ನರಿಯೋಣ.

ಅಗ್ನಿಹೊತ್ರದಲ್ಲಿ ಪ್ರಧಾನ ಆಹುತಿ 'ಹಸುವಿನ ಹಾಲು'. ಇಲ್ಲಿ ಮನೆಯಲ್ಲಿ ಸಾಕಿದ ಹಸುವಿನ ಹಾಲನ್ನು ಕರೆದು ಕಾಯಿಸಿ ಅರ್ಪಣೆ ಮಾಡುತ್ತಾರೆ. ಈ ರೀತಿ ಅರ್ಪಣೆ ಮಾಡಲು ಒಟ್ಟು ಹದಿನಾರು ಹಂತಗಳನ್ನು ಅನುಸರಿಸಲಾಗುತ್ತದೆ ಮತ್ತು

ಪ್ರತೀ ಹಂತಕ್ಕೂ ಒಬ್ಬ ದೇವತೆ ಇರುತ್ತಾನೆ. ಮೊದಲು ಹಾಲು ದನದ ಕೆಚ್ಚಲಿನಲ್ಲಿರುತ್ತದೆ. ಐತರೇಯ ಆರಣ್ಯಕದಲ್ಲಿ ಹೇಳುವಂತೆ 'ರೌದ್ರಂ ಗವಿಸತ್'. ಕೆಚ್ಚಲಲ್ಲಿರುವ ಹಾಲಿಗೆ ರುದ್ರದೇವರು ದೇವತೆ. ನಂತರ ಹಾಲನ್ನು ಕರೆಯುವುದಕ್ಕಾಗಿ ಕರುವನ್ನು ಬಿಡುತ್ತೇವೆ. ಕೆಚ್ಚಲಿಗೆ ಕರು ಬಾಯಿ ಹಾಕುವಾಗ ಅದರ ದೇವತೆ ವಾಯು. ನಂತರ ಹಾಲು ಕರೆಯುವುದು; ಕೆಚ್ಚಲಿನಿಂದ ಪಾತ್ರೆಗೆ ಹಾಲು ಬೀಳುವ ಹಂತದ ದೇವತೆ ಅಶ್ವಿನೀ ದೇವತೆಗಳು. ಆನಂತರ ಪಾತ್ರೆಯಲ್ಲಿ ಹಾಲು ತುಂಬುತ್ತದೆ. 'ಸೌಮ್ಯಂ ದುಗ್ಧಂ' – ಹಾಲುತುಂಬಿದ ಪಾತ್ರೆಯ ದೇವತೆ ಚಂದ್ರ. ಈ ಹಾಲನ್ನು ಒಲೆಯ ಮೇಲೆ ಇಟ್ಟೆವು; ಈ ಹಂತದ ದೇವತೆ ವರುಣ. ಒಲೆಯ ಮೇಲಿಟ್ಟಿರುವ ಹಾಲು ಉಕ್ಕುತ್ತದೆ. ಉಕ್ಕುವ ಹಾಲಿನ ದೇವತೆ ಆದಿತ್ಯ(ಪೂಷಾ). ಹಾಲು ಉಕ್ಕಿ ಕೆಳಕ್ಕೆ ಹರಿಯಿತು; ಈ ಉಕ್ಕಿ ಹರಿಯುವ ಹಾಲಿನ ದೇವತೆ ಮರುತ್ತು. [ಹಾಲು ಉಕ್ಕಿ ಹರಿಯಬೇಕು, ಅದು ಪರಮ ಮಾಂಗಲಿಕ. ಇದಕ್ಕಾಗಿ ಗೃಹ ಪ್ರವೇಶಕಾಲದಲ್ಲಿ ಹಾಲನ್ನು ಉಕ್ಕಿಸುತ್ತಾರೆ]. ಹಾಲು ಉಕ್ಕಿದಮೇಲೆ ಬೆಂಕಿ ಕಡಿಮೆ ಮಾಡುತ್ತೇವೆ. ಆಗ ಹಾಲಿನ ಮೇಲೆ ಸಣ್ಣಸಣ್ಣ ಬಿಂದುಗಳು ಕಾಣಿಸಿಕೊಳ್ಳುತ್ತವೆ. ಈ ರೀತಿ ಚುಕ್ಕೆಬಿದ್ದ ಹಾಲಿಗೆ ದೇವತೆ ವಿಶ್ವೇದೇವತೆಗಳು. ಆ ನಂತರ ಚುಕ್ಕೆ ಹೋಗಿ ಕೆನೆ ಕಾಣಿಸಿಕೊಳ್ಳುತ್ತದೆ. ಕೆನೆ ಕಟ್ಟಿದ ಹಾಲಿಗೆ ಮಿತ್ರ ನಾಮಕ ಆದಿತ್ಯ ದೇವತೆ. ಇಂತಹ ಹಾಲನ್ನು ಒಲೆಯಿಂದ ಕೆಳಗಿಳಿಸುತ್ತೇವೆ. ಹೀಗೆ ಕೆಳಕ್ಕಿಟ್ಟ ಹಾಲಿಗೆ ದ್ಯಾವಾ-ಪೃಥ್ವೀ ದೇವತೆಗಳು. ಹಾಲು ತಣ್ಣಗಾದ ಮೇಲೆ ಅದನ್ನು ಎತ್ತಿಕೊಂಡು ಹೋಗುತ್ತೇವೆ. ಆ ಹಂತದಲ್ಲಿ ಸವಿತ್ರ ಅದರ ದೇವತೆ. ಈ ಹಾಲನ್ನು ಯಜ್ಞಶಾಲೆಯೊಳಗೆ ಒಯ್ಯುತ್ತೇವೆ. ಆಗ ಸ್ವಯಂ ವಿಷ್ಣು ಅದರ ದೇವತೆ. ಇಂತಹ ಹಾಲನ್ನು ಪುರೋಹಿತರ ಪಕ್ಕದಲ್ಲಿ ಇಟ್ಟೆವು. ಆಗ ಅದಕ್ಕೆ ಬೃಹಸ್ಪತಿ ದೇವತೆ. ನಂತರ ಮೊದಲನೇ ಆಹುತಿ. ಆ ಆಹುತಿಯ ದೇವತೆ ಅಗ್ನಿ [ಅಗ್ನಯೇ ಪೂರ್ವಾಹುತಿಃ]. 'ಅಗ್ನಯೇ ಸ್ವಾಹಾ-ಅಗ್ನಯ ಇದಂ ನ ಮಮ' ಎಂದು ಆಹುತಿ ಕೊಡುವುದು. ನಂತರ - ಪ್ರಜಾಪತಯೇ ಸ್ವಾಹ ಪ್ರಜಾಪತಯ ಇದಂ ನ ಮಮ ಎಂದು ಆಹುತಿ ಕೊಡುತ್ತಾರೆ. ಕೊನೆಯದಾಗಿ 'ಇಂದ್ರಮ್ ಹುತಮ್'- ಎಂದು ಇಂದ್ರನಿಗೆ ಆಹುತಿ ಕೊಡುತ್ತಾರೆ. ಈತ ಹದಿನಾರನೇ ದೇವತೆ. ಇವಿಷ್ಟು ಅಗ್ನಿಹೊತ್ರದ ಷೋಡಶ ಕಲೆಗಳು. ಏತದ್ವಾ ಅಗ್ನಿಹೋತ್ರಂ ವೈಶ್ವೇದೇವಂ ಷೋಡಶಕಲಮ್ ಎಂದು ಐತರೇಯ ಹೇಳುತ್ತದೆ. ಈ ಹದಿನಾರು ಕಲೆಗಳಲ್ಲಿ ಸಮಾನವಾಗಿ ಎಲ್ಲಾ ಕಲಾ ದೇವತೆಗಳಿಗೂ ಆಹುತಿಯನ್ನು ಮುಟ್ಟಿಸುವವ ಅಗ್ನಿ. ಆತನನ್ನು ಹುತವಃ ಎಂದು ಕರೆಯುತ್ತಾರೆ. ಇದೇ ರೀತಿ ದೇಹದಲ್ಲಿ ಉಚ್ಛ್ವಾಸ ಮತ್ತು ನಿಶ್ವಾಸ ಪೂರ್ವಾಪರ ಆಹುತಿಗಳು. ಈ ಆಹುತಿಯನ್ನು ಸಮನಾಗಿ ದೇಹದ ಅಂಗಾಂಗಗಳಿಗೆ ತಲುಪಿಸುವವರು ಸಮಾನ ನಾಮಕ ಮುಖ್ಯಪ್ರಾಣದೇವರು.

ಸಮಾನನ ನಂತರ ಉದಾನನ ಕುರಿತು ವಿವರಿಸುತ್ತಾ ಪಿಪ್ಪಲಾದರು ಹೇಳುತ್ತಾರೆ: "ಇಷ್ಟಫಲಮೇವೋದಾನಃ" ಎಂದು. ನಾವು ಕೊಡುವ ಆಹುತಿಯಿಂದ ಬರುವ ಪುಣ್ಯಫಲವನ್ನು ಕೊಡುವವ ಉದಾನ. [ಉತ್+ಆನಯತಿ=ಮೇಲಕ್ಕೆ ಕರೆದುಕೊಂಡು ಹೋಗುವವ →ಉದಾನ]. ಪುಣ್ಯದ ಸುಖವನ್ನು ಅನುಭವಿಸುವುದಕ್ಕೋಸ್ಕರ ಊರ್ಧ್ವಲೋಕಕ್ಕೆ ಕೊಂಡೊಯ್ಯುವವನು ಉದಾನ. ಬಾಹ್ಯವಾಗಿ ಅಗ್ನಿಯೂ ಕೂಡಾ ಪುಣ್ಯಫಲವನ್ನು ಕೊಡುವುದಕ್ಕೋಸ್ಕರ ನಮ್ಮನ್ನು ಊರ್ಧ್ವಲೋಕಕ್ಕೆ ಒಯ್ಯುತ್ತಾನೆ.

ಉದಾನ ನಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಾನೆ ಎಂದರೆ-"ಕೊನೆಗೆ ವೈಕುಂಠ ಲೋಕಕ್ಕೆ ಕರೆದುಕೊಂಡು ಹೋಗಬಹುದು" ಎಂದುಕೊಂಡರೆ, ಇಲ್ಲಿ ಪಿಪ್ಪಲಾದರು ಹೇಳುತ್ತಾರೆ: "ಸ ಏನಂ ಯಜಮಾನಮಹರಹರ್ಬ್ರಹ್ಮ ಗಮಯತಿ" - ಪ್ರತಿ ದಿನವೂ ಪ್ರಾಣದೇವರು ನಿಮ್ಮನ್ನು ದೇವರ ಬಳಿ ಕೊಂಡೊಯ್ಯುತ್ತಾರೆ" ಎಂದು. ಪ್ರತಿ ದಿನವೂ ಜೀವ ನಿದ್ರೆಯಲ್ಲಿ ತನ್ನ ಹೃದಯದಲ್ಲಿರುವ ಭಗವಂತನನ್ನು ಸೇರುತ್ತಾನೆ. ಆತನನ್ನು ಅಲ್ಲಿಗೆ ಕರೆದುಕೊಂಡು ಹೋಗುವವರು ಉದಾನ ನಾಮಕ ಪ್ರಾಣದೇವರು. ಹೀಗೆ ಪ್ರತಿದಿನವೂ ನಿದ್ರೆಯಲ್ಲಿ ತಾನು ಎಚ್ಚರವಾಗಿದ್ದು, ನಮ್ಮನ್ನು

ಭಗವಂತನ ಬಳಿ ಕರೆದುಕೊಂಡು ಹೋಗಿ, ನಿದ್ರೆಯ ಸುಖವನ್ನು ಕೊಡುವವರು ಪ್ರಾಣದೇವರು. ಇದೇ ಅವರು ನಮಗೆ ಕೊಡುವ ಇಷ್ಟಫಲ. ಹೀಗೆ ಎಚ್ಚರ ಅನ್ನುವುದೇ ಒಂದು ಯಜ್ಞ ಹಾಗೂ ನಿದ್ದೆ ಎನ್ನುವುದೇ ಆ ಯಜ್ಞದ ಇಷ್ಟಫಲ. ಎಚ್ಚರದಲ್ಲಿ ಮಾಡಿದ ಯಜ್ಞದ ಫಲವಾಗಿ ಜೀವ ನಿದ್ರೆಯಲ್ಲಿ ಭಗವಂತನ ಸಮೀಪದಲ್ಲಿ ಕುಳಿತು ಆನಂದಾನುಭವವನ್ನು ಪಡೆಯುತ್ತದೆ. ಇದೊಂದು ಅತ್ಯಂತ ಅಪೂರ್ವವಾದ ಜೀವನಯಜ್ಞ. ಈ ಯಜ್ಞವನ್ನು ನಡೆಸುವವರು ನಾವಲ್ಲ, ನಮ್ಮೊಳಗೆ ಪಂಚರೂಪದಲ್ಲಿದ್ದು ನಿರಂತರ ಎಚ್ಚರ-ಕನಸುಗಳಲ್ಲಿ ಜೀವನಯಜ್ಞ ನಡೆಸುವವರು ಉದಾನ ನಾಮಕ ಪ್ರಾಣತತ್ತ್ವ.

ಎಲ್ಲಾ ಸರಿ, ಇಲ್ಲಿ ಯಜ್ಞದ ಯಜಮಾನ ಯಾರು ಎನ್ನುವುದು ನಿಮ್ಮ ಪ್ರಶ್ನೆಯಾಗಿದ್ದರೆ ಅದಕ್ಕೆ ಪಿಪ್ಪಲಾದರು ಇಲ್ಲಿ ಉತ್ತರಿಸಿದ್ದಾರೆ. ಪಿಪ್ಪಲಾದರು ಹೇಳುತ್ತಾರೆ: "ಮನೋ ಹ ವಾವ ಯಜಮಾನಃ ಎಂದು. ಇಲ್ಲಿ ಮನಸ್ಸು ಎಂದರೆ ಮನನಶೀಲವಾದ ಜೀವ. ಆ ಜೀವನೇ ಯಜಮಾನ. ಈ 'ಜೀವ'ನ ಮೂಲಕ ದೇವತಾಶಕ್ತಿಗಳು ಯಜ್ಞ ಮಾಡಿಸುತ್ತಾರೆ. ಮಾಡಿದ ಯಜ್ಞದ ಫಲವಾಗಿ ಉದಾನ 'ಜೀವ'ನನ್ನು ಪ್ರತಿದಿನ ಭಗವಂತನ ಬಳಿ ಕರೆದುಕೊಂಡುಹೋಗಿ ಆನಂದದ ಅನುಭವನ್ನು ನೀಡುತ್ತಾನೆ. ಹೀಗೆ ನಮ್ಮೊಳಗೆ ಪಂಚರೂಪದಲ್ಲಿ ಪಂಚಾಗ್ನಿಯಾಗಿ ಪ್ರಾಣದೇವರು ನಿರಂತರ ಕಾರ್ಯನಿರ್ವಹಿಸುತ್ತಿರುತ್ತಾರೆ.

*ಅತ್ರೈಷ ದೇವಃ ಸ್ವಪ್ನೇ ಮಹಿಮಾನಮನುಭವತಿ । ಯದ್ ದೃಷ್ಟನ್ದೃಷ್ಟಮನುಪಶ್ಯತಿ ಶ್ರುತಂ-ಶ್ರುತಮೇವಾರ್ಥಮನುಶೃಣೋತಿ ದೇಶದಿಗಂತರೈಶ್ಚ ಪ್ರತ್ಯನುಭೂತಂ ಪುನಃ ಪುನಃ ಪ್ರತ್ಯನುಭವತಿ ದೃಷ್ಟಂ ಚಾದೃಷ್ಟಂ ಚ ಶ್ರುತಂ ಚಾಶ್ರುತಂ ಚಾನುಭೂತಂ ಚಾನನುಭೂತಂ ಚ ಸ್ಚಾ ಸಚ್ಚ ಸರ್ವಂ ಪಶ್ಯತಿ ಸರ್ವಃ ಪಶ್ಯತಿ ॥೫॥*

ಗಾರ್ಗ್ಯರ ಪ್ರಶ್ನೆಯ ಮುಂದಿನ ಭಾಗ "ಕತರ ಏಷ ದೇವಃ ಸ್ವಪ್ನಾನ್ ಪಶ್ಯತಿ" – ಕನಸು ಕಾಣುವವನು ಮತ್ತು ಕಾಣಿಸುವವನು ಯಾರು ಎನ್ನುವುದು. ಈ ಪ್ರಶ್ನೆಗೆ ಪಿಪ್ಪಲಾದರು ಉತ್ತರಿಸುತ್ತಾ ಕನಸಿನ ವಿವಿಧ ಮುಖಗಳನ್ನು ಇಲ್ಲಿ ವಿವರಿಸಿದ್ದಾರೆ. ಹಿಂದೆ ಹೇಳಿದಂತೆ ಕನಸಿನ ಪ್ರಪಂಚ ಅತ್ಯಂತ ವಿಸ್ಮಯ. ಇಂತಹ ಅಂತರಂಗದ ವಿಸ್ಮಯವನ್ನು ಪ್ರಾಣದೇವರು ಭಗವಂತನೊಂದಿಗೆ ನೋಡುತ್ತಾರೆ ಮತ್ತು ಸ್ವಪ್ನದಲ್ಲಿ ನಮಗೆ ತೋರಿಸುತ್ತಾರೆ. ನಾವು ಅನೇಕ ಹಿನ್ನೆಲೆಯಲ್ಲಿ ಕನಸನ್ನು ಕಾಣುತ್ತೇವೆ. ಸಾಮಾನ್ಯವಾಗಿ ನಾವು ಕಂಡಿರುವ ಅಥವಾ ಕೇಳಿರುವ ವಸ್ತು ನಮ್ಮ ಮೇಲೆ ಗಾಢವಾದ ಪರಿಣಾಮ ಬೀರಿದ್ದರೆ ಅದು ರಾತ್ರಿ ಕನಸಾಗಿ ಕಾಣಬಹುದು. ಹಾಗೆ ಕನಸು ಬಿದ್ದಾಗ ಅಲ್ಲಿ ಯಥಾಸ್ಥಿತಿಗಿಂತ ಭಿನ್ನವಾದದ್ದನ್ನು ನಾವು ಕಾಣಬಹುದು. ಕೆಲವೊಮ್ಮೆ ದಿಕ್ಕು-ದೇಶಗಳ ಹಂಗಿಲ್ಲದೆ, ಯಾವುದೋ ಒಂದು ದೇಶದಲ್ಲಿ ಯಾವುದೋ ಕಾಲದಲ್ಲಿ ನಡೆದ ಅಥವಾ ನಡೆಯದೇ ಇರುವ ಘಟನೆ ಕನಸಾಗಿ ಕಾಣಬಹುದು. ಈ ಜನ್ಮದಲ್ಲಿ ನಾವು ಕಾಣದ್ದು ಅಥವಾ ಕೇಳರಿಯದ್ದು ನಮಗೆ ಕನಸಿನಲ್ಲಿ ಕಾಣಬಹುದು. ಯಾವುದು ಎಚ್ಚರದಲ್ಲಿ ಅಸಂಭವವೋ ಅದು ಕನಸಾಗಿ ಕಾಣಬಹುದು. [ಉದಾಹರಣೆಗೆ ಕೊಂಬಿರುವ ಮೊಲ, ಬಿಳಿ ಆನೆ ಇತ್ಯಾದಿ]. ಈ ರೀತಿಯ ಎಲ್ಲಾ ಅದ್ಭುತವನ್ನು ಕನಸಿನಲ್ಲಿ ಕಾಣಬಹುದು. ಏಕೆಂದರೆ ಈ ಕನಸನ್ನು ಕಾಣಿಸುವವ ಎಲ್ಲವನ್ನು ಬಲ್ಲವನು.

ನಮ್ಮಲ್ಲಿ ಕೆಲವರಿಗೆ ಕನಸಿನ ಅನುಭವ ಕಡಿಮೆ, ಇನ್ನು ಕೆಲವರಿಗೆ ಕನಸು ನೆನಪಿರುವುದಿಲ್ಲ, ಮತ್ತೆ ಕೆಲವರಿಗೆ ರಾತ್ರಿಯಿಂದ ಬೆಳಗಿನ ತನಕ ನಿದ್ದೆಯೇ ಇಲ್ಲದ ಕನಸಿನ ಪ್ರಪಂಚ. ನಾವು ಕಾಣುವ ಕನಸು ಅರ್ಥಪೂರ್ಣವಾಗಿದ್ದು ಅದರಲ್ಲಿ ಯಾವುದೋ ಒಂದು ಸಂದೇಶವಿರಬಹುದು. ಕನಸಿನ ಪ್ರಪಂಚದಲ್ಲಿನ ಸಂದೇಶವನ್ನು ಅಲ್ಲಿನ ಬಣ್ಣ, ದಿಕ್ಕು, ವಸ್ತುಗಳ ಆಧಾರದಮೇಲೆ ತಿಳಿಯಲಾಗುತ್ತದೆ. ಇದನ್ನು ಕನಸಿನ ಮನಃಶಾಸ್ತ್ರ[dream psychology] ಎನ್ನುತ್ತಾರೆ.

ಕನಸಿನಲ್ಲಿ ಬಿಳಿ ಬಣ್ಣ ಬಹಳ ಶುಭಸೂಚಕವಾದರೆ, ಕೆಂಪು ಬಣ್ಣ –ಕೆಲಸ ಕೈಗೂಡದ ಮುನ್ಸೂಚನೆಯಾಗಿರುತ್ತದೆ. ಸೀತೆಯನ್ನು ಲಂಕೆಗೆ ಅಪಹರಿಸಿಕೊಂಡು ಹೋದ ರಾವಣ ಆಕೆಯಲ್ಲಿ ತನ್ನನ್ನು ಮದುವೆಯಾಗು ಎಂದು ಪದೇಪದೇ ಒತ್ತಡ ತರುತ್ತಿರುವ ಸಮಯದಲ್ಲಿ ಅಲ್ಲಿದ್ದ ತ್ರಿಜಟೆ ಎನ್ನುವ ಒಬ್ಬ ರಾಕ್ಷಸ ವೃದ್ಧೆಗೆ ಒಂದು ಕನಸು ಬೀಳುತ್ತದೆ. ಅಲ್ಲಿ ಆಕೆ ಬಿಳಿ ಬಣ್ಣದ ವಸ್ತ್ರವನ್ನು ತೊಟ್ಟ ರಾಮ-ಲಕ್ಷ್ಮಣರು ಸೀತೆಯನ್ನು ಬಿಳಿಬಣ್ಣದ ಆನೆಯ ಮೇಲೆ ಕುಳ್ಳಿರಿಸಿಕೊಂಡು ಕರೆದುಕೊಂಡು ಹೋದಂತೆ, ರಾವಣ ಕೆಂಪು ಬಣ್ಣದ ಬಟ್ಟೆಯನ್ನು ತೊಟ್ಟು, ಮೈತುಂಬಾ ಎಣ್ಣೆಯನ್ನು ಸವರಿಕೊಂಡು, ದಕ್ಷಿಣಾಭಿಮುಖವಾಗಿ ಕತ್ತೆಯಮೇಲೆ ಸವಾರಿ ಮಾಡಿಕೊಂಡು ಹೋದಂತೆ ಕನಸು ಕಾಣುತ್ತಾಳೆ. ತಕ್ಷಣ ಆಕೆ ಹೇಳುತ್ತಾಳೆ: ಸೀತೆಗೆಂದೂ ಅಪಾಯವಿಲ್ಲ, ಅಪಾಯವಿರುವುದು ಲಂಕೆಗೆ ಎಂದು. ಹೀಗೆ ಭಗವಂತ ತೋರಿಸುವ ಕನಸಿನ ಪ್ರಪಂಚ ಬಹಳ ವಿಚಿತ್ರ. ಅಲ್ಲಿ ಬರುವ ಪಾತ್ರಗಳಿಗೆ, ಬಣ್ಣಕ್ಕೆ, ವಸ್ತುವಿಗೆ ವಿಶೇಷ ಅರ್ಥವಿರುತ್ತದೆ. ಆದರೆ ಅದು ನಮಗೆ ತಿಳಿಯಲಾಗದ (ದುಃ)ಸ್ವಪ್ನವೂ ಆಗಿರಬಹುದು!

[ಪದೇಪದೇ ದುಃಸ್ವಪ್ನ ಬಿದ್ದರೆ ಆ ಬಗ್ಗೆ ಎಂದೂ ಭಯಪಡಬೇಕಾಗಿಲ್ಲ. ಏಕೆಂದರೆ ಇದು ಭಗವಂತ ನಮಗೆ ಕೊಟ್ಟ ಮುನ್ಸೂಚನೆ. ಇಂತಹ ಸಂಧರ್ಭದಲ್ಲಿ ಆ ಭಗವಂತನಲ್ಲಿ ಸಂಪೂರ್ಣ ಶರಣಾದರೆ ಆತ ಖಂಡಿತವಾಗಿ ನಮಗೆ ಪರಿಹಾರವನ್ನು ತೋರಿಸುತ್ತಾನೆ. ಮುಂದೆ ಆಗತಕ್ಕಂತಹ ಅನಿಷ್ಟದಿಂದ ನಮ್ಮನ್ನು ಪಾರು ಮಾಡುತ್ತಾನೆ. ವಿಷ್ಣುಸಹಸ್ರನಾಮದಲ್ಲಿ ಬರುವ ಭಗವಂತನ "ದುಃಸ್ವಪ್ನನಾಶನಃ" ನಾಮವನ್ನು ಶ್ರದ್ಧಾ-ಭಕ್ತಿಯಿಂದ ನಿರಂತರ ಪಾರಾಯಣ ಮಾಡಿದರೆ ದುಃಸ್ವಪ್ನ ಮುಕ್ತಿ ಸಾಧ್ಯ.]

*ಸ ಯದಾ ತೇಜಸಾSಭಿಭೂತೋ ಭವತ್ಯತ್ರೈಷ ದೇವಃ ಸ್ವಪ್ನಾನ್ ನ ಪಶ್ಯತಿ । ಅಥ ಯದೇತದಸ್ಮಿನ್ ಶರೀರೇ ಸುಖಂ ಭವತಿ ॥೬॥*

ಕನಸಿನ ಪ್ರಪಂಚದಿಂದ ನಿದ್ದೆಯ ಪ್ರಪಂಚಕ್ಕೆ ನಮ್ಮನ್ನು ಕೊಂಡೊಯ್ಯುವವ ಉದಾನ. ಉದಾನನ ತೇಜಸ್ಸಿನೊಂದಿಗೆ ಭಗವಂತನ ತೇಜಸ್ಸು ಸೇರಿದಾಗ ಜೀವ ಭಗವಂತನ ಮಡಿಲಲ್ಲಿ ಆನಂದವನ್ನು ಪಡೆಯುತ್ತಾನೆ. ನಮಗೆ ನಿದ್ದೆಯಲ್ಲಿ ಯಾವ ಎಚ್ಚರವೂ ಇರುವುದಿಲ್ಲವಾದರೂ ಸಹ, ಅಲ್ಲಿ ಆನಂದದ ಅರಿವು(Awareness of bliss), ಕಾಲದ ಅರಿವು (Awareness of time), ನಮ್ಮ ಅಜ್ಞಾನದ ಅರಿವು (Awareness of ignorance) ಮತ್ತು ಆತ್ಮದ ಅರಿವಿರುತ್ತದೆ(Awareness of self). ನಮಗೆ ತಿಳಿದಂತೆ ಜೀವ ಸುಖವನ್ನು ಅನುಭವಿಸಬೇಕಾದರೆ ಅದರ ಶರೀರ, ಇಂದ್ರಿಯ, ಮನಸ್ಸು ಕಾರ್ಯನಿರ್ವಹಿಸುತ್ತಿರಬೇಕು. ಜೀವನಿಗೆ ಬಾಹ್ಯ ವಸ್ತುವಿನ ಸಂಪರ್ಕ ಇಂದ್ರಿಯ ಮತ್ತು ಮನಸ್ಸಿನ ಮೂಲಕವಾಗುತ್ತದೆ. ಉದಾಹರಣೆಗೆ ಒಂದು ಸುಂದರವಾದ ವಸ್ತುವನ್ನು ನೋಡಿದಾಗ, ಒಂದು ಸುಂದರ ನಾದವನ್ನು ಕೇಳಿದಾಗ, ಒಳ್ಳೆಯ ಸುಗಂಧ ಮೂಸಿದಾಗ, ರುಚಿಯಾದ ಆಹಾರವನ್ನು ಸೇವಿಸಿದಾಗ, ಕೋಮಲವಾದ ವಸ್ತುವನ್ನು ಮುಟ್ಟಿದಾಗ ಸುಖದ ಅನುಭವವಾಗುತ್ತದೆ. ಇಂದ್ರಿಯಗಳಿಂದ ಬಂದ ಸಂದೇಶವನ್ನು ಮನಸ್ಸು ಸ್ವೀಕರಿಸಿ ಒಳಗಿರುವ ಆತ್ಮಕ್ಕೆ ತಲುಪಿಸಿದಾಗ ಜೀವಕ್ಕೆ ಆನಂದದ ಅನುಭವವಾಗುತ್ತದೆ. ಇದು ಜೀವಕ್ಕೆ ಆನಂದದ ಅನುಭವವಾಗುವ ಸಹಜ ವಿಧಾನ.

ಕನಸಿನಲ್ಲಿ ನಮ್ಮ ಯಾವ ಇಂದ್ರಿಯಗಳೂ ಕೆಲಸ ಮಾಡುವುದಿಲ್ಲ. ಆದರೆ ಕೇವಲ ಮನಸ್ಸು ಕೆಲಸ ಮಾಡುತ್ತಿರುತ್ತದೆ. ಅದು ತಾನು ಹಿಂದೆ ಕಂಡಿರುವ, ಕೇಳಿರುವ ವಿಷಯಗಳ ಸಂಸ್ಕಾರದಿಂದ ತನಗೆ ಬೇಕಾಗಿರುವ ಚಿತ್ರ ಬಿಡಿಸಿ, ಆ ಚಿತ್ರವನ್ನು ಆತ್ಮ ನೋಡುವಂತೆ ಮಾಡುತ್ತದೆ. ಒಟ್ಟಿನಲ್ಲಿ ಹೇಳಬೇಕೆಂದರೆ ನಮ್ಮ ಮನಸ್ಸು ಕಾರ್ಯ

ನಿರ್ವಹಿಸುವುದರಿಂದ ನಮಗೆ ಎಚ್ಚರ ಮತ್ತು ಕನಸಿನಲ್ಲಿ ಆನಂದದ ಅನುಭವವಾಗುತ್ತದೆ. ಆದರೆ ನಾವು ನಿದ್ದೆ(Deep Sleep) ಮಾಡಿದಾಗ ನಮ್ಮ ಯಾವ ಇಂದ್ರಿಯಗಳೂ ಕೆಲಸ ಮಾಡುವುದಿಲ್ಲ; ಮನಸ್ಸೂ ಕೆಲಸ ಮಾಡುವುದಿಲ್ಲ. ಹಾಗಿರುವಾಗ ದುಃಖ ಸ್ಪರ್ಶವಿಲ್ಲದ ಆನಂದವನ್ನು ಜೀವ ಹೇಗೆ ಪಡೆಯುತ್ತಾನೆ ಎನ್ನುವುದು ಇಲ್ಲಿರುವ ಪ್ರಶ್ನೆ.[ಕಸ್ಯ ಏತತ್ ಸುಖಂ ಭವತಿ].

ಪಿಪ್ಪಲಾದರು ಹೇಳುತ್ತಾರೆ: "ಅಥ ಏತದ್ ತಸ್ಮಿನ್ ಶರೀರೇ ಸುಖಂ ಭವತಿ" ಎಂದು. ಅಂದರೆ ಸುಖ ಆಗುವುದು ಶರೀರದ ಮೂಲಕ ಎಂದು. ಇಲ್ಲಿ ನಾವು ಪಿಪ್ಪಲಾದರು ಹೇಳಿರುವ 'ಶರೀರ' ಯಾವುದು ಎನ್ನುವುದನ್ನು ತಿಳಿಯಬೇಕು. ಮನಸ್ಸು ಇಂದ್ರಿಯಗಳು ನಿದ್ರಿಸುವಾಗ ಈ ಸ್ಥೂಲವಾದ ಶರೀರ ಕೂಡಾ ನಿದ್ರಿಸುತ್ತಿರುತ್ತದೆ. ಆದರೆ ನಿದ್ರಿಸದೇ ಸುಖದ ಅನುಭವವನ್ನು ಪಡೆಯುವ ಶರೀರ ಯಾವುದು? ನಮಗೆ ತಿಳಿದಂತೆ ಜೀವನಿಗೆ ಒಟ್ಟು ನಾಲ್ಕು ಶರೀರ. ಒಂದು ಬಾಹ್ಯವಾಗಿ ಕಾಣುವ ಸ್ಥೂಲಶರೀರ. ಇದು ವ್ಯಕ್ತಿ ಸತ್ತಾಗ ಬಿದ್ದು ಹೋಗುವ ಶರೀರ. ಸ್ಥೂಲಶರೀರದ ಒಳಗೆ ಸ್ವರ್ಗಾದಿ ಸೂಕ್ಷ್ಮಲೋಕದ ಅನುಭವವನ್ನು ಪಡೆಯುವ ಸೂಕ್ಷ್ಮಶರೀರವಿದೆ. ಇದು ಪ್ರಳಯ ಕಾಲದಲ್ಲಿ ಬಿದ್ದು ಹೋಗುವ ಶರೀರ. ಸೂಕ್ಷ್ಮಶರೀರದ ಒಳಗೆ ಅನಾದಿ ಕಾಲದಿಂದಲೂ ಪಡೆದು ಬಂದಿರುವ ಲಿಂಗಶರೀರವಿದೆ. ಇದು ಮುಕ್ತಿ ಪ್ರಾಪ್ತಿಯಾದಾಗ ಬಿದ್ದು ಹೋಗುವ ಶರೀರ. ಈ ಲಿಂಗ ಶರೀರದ ಒಳಗೆ ಪ್ರಾಣ-ನಾರಾಯಣರಿಗೆ ಶರೀರ ಸ್ಥಾನೀಯವಾಗಿರುವ ಸ್ವರೂಪಭೂತ ಶರೀರವಿದೆ. ಈ ಶರೀರದಿಂದ ಸ್ವರೂಪಭೂತನಾದ ಭಗವಂತನನ್ನು ಕಾಣಲು ಮತ್ತು ಸೇರಲು ಸಾಧ್ಯ. ಈ ಸ್ವರೂಪಭೂತವಾದ ಶರೀರ ನಿದ್ದೆಯಲ್ಲಿ ಸ್ವರೂಪಭೂತನಾದ ಭಗವಂತನಿಂದ ಆನಂದದ ಅನುಭವವನ್ನು ಪಡೆಯುತ್ತದೆ.

ಮೋಕ್ಷದಲ್ಲಿ ಮತ್ತು ನಿದ್ದೆಯಲ್ಲಿ ಭಗವಂತನನ್ನು ಕಾಣುವುದರಲ್ಲಿ ಇರುವ ವ್ಯತ್ಯಾಸವೇನೆಂದರೆ ಮೋಕ್ಷದಲ್ಲಿ ಜೀವನಿಗೆ ಭಗವಂತನೊಂದಿಗಿದ್ದೇನೆ ಎನ್ನುವ ಎಚ್ಚರವಿರುತ್ತದೆ, ಆದರೆ ನಿದ್ದೆಯಲ್ಲಿ ಆ ಎಚ್ಚರ ಇರುವುದಿಲ್ಲ.

ವೇದ ಉಪನಿಷತ್ತುಗಳಲ್ಲಿ ಬಂದಿರುವ ಈ ವಿವರಣೆ ಇಂದಿನ ವಿಜ್ಞಾನಕ್ಕೆ ತಿಳಿಯದ ವಿಚಾರ. ಇಂದಿನ ವಿಜ್ಞಾನ ಅಂದರೆ ಅದು ನಿರಂತರ ಸಂಶೋಧನೆ. ವಿಜ್ಞಾನಿಗಳು ಇಂದು ನಿಜವೆಂದು ನಾವು ಭಾವಿಸಿರುವುದನ್ನು ನಾಳೆ ತಪ್ಪು ಎಂದು ಹೊಸ ಸಂಶೋಧನೆಯಿಂದ ತಿದ್ದಬಹುದು. ಆದರೆ ಉಪನಿಷತ್ತಿನಲ್ಲಿ ಹೇಳಿರುವ ವಿಷಯಗಳಿಗೆ ಎಂದೂ ಯಾವುದೇ ತಿದ್ದುಪಡಿ ಇಲ್ಲ. ಅದು ಸತ್ಯವನ್ನು[ಭಗವತನನ್ನು] ಸಾಕ್ಷಾತ್ಕರಿಸಿಕೊಂಡ ಋಷಿಗಳು ಕಂಡ ಸತ್ಯ. ನಿದ್ದೆಯ ಈ ವಿಸ್ಮಯ ಮತ್ತು ಸಮಾಧಿಸ್ಥಿತಿ(ತುರಿಯಾವಸ್ಥೆ ಅಥವಾ ಉನ್ಮನೀಭಾವ)ಯಲ್ಲಿನ ಆನಂದಕ್ಕೆ ಕಾರಣ ಏನೆಂಬುದನ್ನು ಇಂದಿನ ವಿಜ್ಞಾನ ವಿವರಿಸುವುದಿಲ್ಲ.

ನಿದ್ದೆಯಲ್ಲಿ ನಮ್ಮ ದೇಹದಲ್ಲಿರುವ ಪಂಚಭೂತಗಳು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚತನ್ಮಾತ್ರೆಗಳು, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಚೇತನ ಯಾವುದೂ ಕೆಲಸ ಮಾಡುವುದಿಲ್ಲ; ಕೇವಲ ಪಂಚಪ್ರಾಣರು ಮತ್ತು ಪಂಚರೂಪಿ ಭಗವಂತ[ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ನಾರಾಯಣ] ಸದಾ ಎಚ್ಚರವಾಗಿದ್ದು, ನಿರಂತರ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಹೀಗಿರುವಾಗ ನಿದ್ದೆಯ ಸಮಯದಲ್ಲಿ ದೇಹದಲ್ಲಿರುವ ಉಳಿದ ತತ್ತ್ವಾಭಿಮಾನಿ ದೇವತೆಗಳು ಎಲ್ಲಿ ಹೋಗುತ್ತಾರೆ ಎನ್ನುವುದು ನಮ್ಮ ಮುಂದಿನ ಪ್ರಶ್ನೆ. ["ಕಸ್ಮಿನ್ನು ಸರ್ವೇ ಸಂಪ್ರತಿಷ್ಠಿತಾ ಭವಂತಿ"]. ಬನ್ನಿ, ಈ ಪ್ರಶ್ನೆಗೆ ಉತ್ತರ ರೂಪವಾಗಿರುವ ಪಿಪ್ಪಲಾದರ ಉಪದೇಶವನ್ನಾಲಿಸೋಣ.

*ಸ ಯಥಾ ಸೋಮ್ಯ ವಯಾಂಸಿ ವಾಸೋವೃಕ್ಷಂ ಸಂಪ್ರತಿಷ್ಠಂತೇ । ಏವಂ ಹ ವೈ ತತ್ ಸರ್ವಂ ಪರ ಆತ್ಮನಿ ಸಂಪ್ರತಿಷ್ಠತೇ ॥೭॥*

ಇಲ್ಲಿ ಪಿಪ್ಪಲಾದರು ತನ್ನ ಶಿಷ್ಯನನ್ನು 'ಸೋಮ್ಯ' ಎಂದು ಸಂಬೋಧಿಸಿದ್ದಾರೆ. ಈ ಪದ ಕನ್ನಡದಲ್ಲಿ ಬಳಕೆಯಲ್ಲಿಲ್ಲ. ಸೋಮ್ಯ ಎನ್ನುವುದಕ್ಕೆ ಎರಡು ಅರ್ಥವಿದೆ. ಸೋಮಯಾಗ ಮಾಡಿ, ವೇದದಲ್ಲಿ ಹೇಳಿರುವ ಎಲ್ಲಾ ಕರ್ಮಾನುಷ್ಠಾನದಲ್ಲಿ ಪರಿಣತನಾಗಿ, ಆ ಕರ್ಮದ ಆಚೆಗಿರುವ ಜ್ಞಾನದ ಮುಖವನ್ನು ತಿಳಿಯ ಬಂದವ ಸೋಮ್ಯ; ಭಕ್ತಿಯಿಂದ ಭಗವದ್ ಉಪಾಸನೆ ಮಾಡಿದವ ಸೋಮ್ಯ.

ಇಲ್ಲಿ ಪಿಪ್ಪಲಾದರು ಹೇಳುತ್ತಾರೆ: "ಹೇಗೆ ಪಕ್ಷಿಗಳು ಸಂಜೆ ಹೊತ್ತು ತಮ್ಮ ವಾಸಸ್ಥಾನವಾದ ವೃಕ್ಷಕ್ಕೆ ಬಂದು ಸೇರುತ್ತವೋ, ಹಾಗೇ ಜೀವ ನಿದ್ರಿಸಿದಾಗ ಎಲ್ಲಾ ತತ್ತ್ವಾಭಿಮಾನಿ ದೇವತೆಗಳು ತಮ್ಮ ವಾಸದ ನೆಲೆವೀಡಾದ ಪ್ರಾಣಾಂತರ್ಗತ ಭಗವಂತನನ್ನು ಹೋಗಿ ಸೇರುತ್ತಾರೆ" ಎಂದು. ಇಲ್ಲಿ ಪಿಪ್ಪಲಾದರು ಬಳಸಿರುವ ದೃಷ್ಟಾಂತ ಅದೆಷ್ಟು ಸುಂದರವಾಗಿದೆ. ಈ ರೀತಿ ಒಬ್ಬ ಸಾಮಾನ್ಯನಿಗೂ ಅರ್ಥವಾಗುವ ಹಾಗೆ ಸರಳ ದೃಷ್ಟಾಂತವನ್ನು ಬಳಸಿ ಜ್ಞಾನ ಧಾರೆಯನ್ನು ಹರಿಸಿರುವ ಪಿಪ್ಪಲಾದರಿಗೆ ನಾವು ಚಿರಋಣಿಗಳು.

*ಪೃಥಿವೀ ಚ ಪೃಥಿವೀಮಾತ್ರಾ ಚಾಽಪಶ್ಚಾಽಪೋಮಾತ್ರಾ ಚ ತೇಜಶ್ಚ ತೇಜೋಮಾತ್ರಾ ಚ ವಾಯುಶ್ಚ ವಾಯುಮಾತ್ರಾ ಚಾಽಕಾಶಶ್ಚಾಽಕಾಶಮಾತ್ರಾ ಚ ಚಕ್ಷುಶ್ಚ ದ್ರಷ್ಟವ್ಯಂ ಚ ಶ್ರೋತ್ರಂ ಚ ಶ್ರೋತವ್ಯಂ ಚ ಘ್ರಾಣಂ ಚ ಘ್ರಾತವ್ಯಂ ಚ ರಸಶ್ಚ ರಸಯಿತವ್ಯಂ ಚ ತ್ವಕ್ ಚ ಸ್ಪರ್ಶಯಿತವ್ಯಂ ಚ ವಾಕ್ ಚ ವಕ್ತವ್ಯಂ ಚ ಹಸ್ತೌ ಚಾಽದಾತವ್ಯಂ ಚ ಪಾದೌ ಚ ಗಂತವ್ಯಂ ಚ ಪಾಯುಶ್ಚ ವಿಸರ್ಜಯಿತವ್ಯಂ ಚೋಪಸ್ಥಶ್ಚಾಽನಂದಯಿತವ್ಯಂ ಮನಶ್ಚ ಮಂತವ್ಯಂ ಚ ಬುದ್ಧಿಶ್ಚ ಬೋದ್ಧವ್ಯಂ ಚಾಹಂಕಾರಶ್ಚಾಹಂಕರ್ತವ್ಯಂ ಚ ಚಿತ್ತಂ ಚ ಚೇತಯಿತವ್ಯಂ ಚ ತೇಜಶ್ಚ ವಿದ್ಯೋತಯಿತವ್ಯಂ ಚ ಪ್ರಾಣಶ್ಚ ವಿಧಾರಯಿತವ್ಯಂ ಚ ॥೮॥*

ಯಾವ ಯಾವ ದೇವತೆಗಳು ಭಗವಂತನೆಂಬ ಗೂಡನ್ನು ಸೇರುತ್ತಾರೆ ಎನ್ನುವುದನ್ನು ಈ ಗದ್ಯದಲ್ಲಿ ವಿವರಿಸಲಾಗಿದೆ. ಈ ಪಿಂಡಾಂಡದಲ್ಲಿ ಮುಖ್ಯವಾಗಿ ಕಾರ್ಯನಿರ್ವಹಿಸುವ ತತ್ತ್ವಗಳ[ತತ್ತ್ವಾಭಿಮಾನಿ ದೇವತೆಗಳ] ಒಂದು ಪಟ್ಟಿಯನ್ನು ಇಲ್ಲಿ ನೀಡಲಾಗಿದೆ. ಮೊದಲು ಇಲ್ಲಿ ಪಂಚಭೂತಗಳಿಂದಾದ ಅನ್ನಮಯ ಮತ್ತು ಪ್ರಾಣಮಯ ಕೋಶದ ವಿವರವನ್ನು ಹೇಳುತ್ತಾ ಪಿಪ್ಪಲಾದರು ಹೇಳುತ್ತಾರೆ: "ಪೃಥಿವೀ ಚ ಪೃಥಿವೀಮಾತ್ರಾ ಚ; ಆಪಶ್ಚ ಆಪೋಮಾತ್ರಾ ಚ" ಎಂದು. ನಮಗೆ ಕಾಣುವ ಸ್ಥೂಲಶರೀರ ಅನ್ನಮಯಕೋಶ. ಅದು ಮಣ್ಣು ಮತ್ತು ನೀರಿನಿಂದಾಗಿದೆ. ಇಲ್ಲಿ ಪೃಥಿವಿ ಮತ್ತು ಪೃಥಿವೀಮಾತ್ರೆ ಎಂದಿದ್ದಾರೆ. 'ಪೃಥಿವಿ' ಎಂದರೆ ಮಣ್ಣು, 'ಪೃಥಿವೀಮಾತ್ರೆ' ಎಂದರೆ ಮಣ್ಣಿನ ಅತ್ಯಂತ ಸೂಕ್ಷ್ಮಾವಸ್ಥೆ. ಮಣ್ಣಿನ ಅತ್ಯಂತ ಸೂಕ್ಷ್ಮಾವಸ್ಥೆ ಎಂದರೆ ಅದು ಪರಮಾಣು. ಅದು ಕೇವಲ ಗಂಧ. ನಂತರ ನೀರು ಮತ್ತು ನೀರಿನ ಮೂಲದ್ರವ್ಯವಾದ ಜಲಪರಮಾಣು(ರಸ). ಒಟ್ಟಿನಲ್ಲಿ ಮಣ್ಣು ಮತ್ತು ನೀರು ಸೇರಿ ಕಾಣುವ ಅನ್ನಮಯಕೋಶ ನಿರ್ಮಾಣವಾಯಿತು.

ಅನ್ನಮಯಕೋಶದ ನಂತರ ಅನ್ನಮಯಕೋಶದ ಒಳಗಿರುವ ಪ್ರಾಣಮಯಕೋಶ. ಅದು ಬೆಂಕಿ, ಗಾಳಿ ಮತ್ತು ಆಕಾಶದಿಂದಾಗಿದೆ. ದೇಹದಲ್ಲಿ ಪ್ರಾಣಾಗ್ನಿ ಇರುವುದರಿಂದ ಅಲ್ಲಿ ಉಷ್ಣತೆ ಇದೆ. ಗಾಳಿ ಇರುವುದರಿಂದ ಉಸಿರಾಟವಿದೆ, ಉಸಿರಾಟಕ್ಕೆ ಬೇಕಾದ ಅವಕಾಶವಾಗಿ ಆಕಾಶವಿರುವುದರಿಂದ ಈ ದೇಹದ ಒಳಗೆ ಗಾಳಿ ಸಂಚಾರವಾಗುತ್ತದೆ. ಹಾಗಾಗಿ ಪಂಚಭೂತಗಳಿಂದ ಅನ್ನಮಯ ಮತ್ತು ಪ್ರಾಣಮಯಕೋಶ ನಿರ್ಮಾಣವಾಗಿದೆ.

ಪಂಚಭೂತಕ್ಕೆ ಸಂಬಂಧಿಸಿದ ತನ್ಮಾತ್ರೆಗಳು ಐದು. ಮಣ್ಣಿನ ತನ್ಮಾತ್ರೆ ಗಂಧ, ನೀರಿನ ತನ್ಮಾತ್ರೆ ರಸ, ಬೆಂಕಿಯ ತನ್ಮಾತ್ರೆ ರೂಪ, ಗಾಳಿಯ ತನ್ಮಾತ್ರೆ ಸ್ಪರ್ಶ ಮತ್ತು ಆಕಾಶದ ತನ್ಮಾತ್ರೆ ಶಬ್ದ. ಈ ಪಂಚ ತನ್ಮಾತ್ರೆಗಳನ್ನು ಗ್ರಹಣ

ಮಾಡುವ ಇಂದ್ರಿಯಗಳು ಐದು. ಚಕ್ಷುಶ್ಚ ದ್ರಷ್ಟವ್ಯಂ ಚ -ಕಣ್ಣು ಮತ್ತು ಕಣ್ಣಿನ ಮುಂದಿರುವ ರೂಪ; ಶ್ರೋತ್ರಂ ಚ ಶ್ರೋತವ್ಯಂ ಚ - ಕಿವಿ ಮತ್ತು ಶಬ್ದ; ಗ್ರಾಣಂ ಚ ಘ್ರಾತವ್ಯಂ ಚ - ಮೂಗು ಮತ್ತು ಕಂಪು; ರಸಶ್ಚ ರಸಯಿತವ್ಯಂ ಚ - ನಾಲಿಗೆ ಮತ್ತು ರುಚಿ; ತ್ವಕ್ಚ ಸ್ಪರ್ಶಯಿತವ್ಯಂ ಚ - ತ್ವಗೇಂದ್ರಿಯ ಮತ್ತು ಅದರ ಗುಣವಾದ ಸ್ಪರ್ಶ. ಇವಿಷ್ಟು ಪಂಚಜ್ಞಾನೇಂದ್ರಿಯಗಳು ಮತ್ತು ಅವುಗಳ ಮುಖೇನ ಆಗುವ ಕ್ರಿಯೆಗಳು. ನಂತರ ಪಂಚ ಕರ್ಮೇಂದ್ರಿಯಗಳು: ವಾಕ್ಚ ವಕ್ತವ್ಯಂ ಚ- ಬಾಯಿ ಮತ್ತು ಮಾತು; ಹಸ್ತೌ ಚಾದಾತವ್ಯಂಚ - ಕೈ ಮತ್ತು ಸ್ವೀಕರಿಸುವ ಕ್ರಿಯೆ; ಯಾದೌ ಚ ಗಂತವ್ಯಂಚ - ಕಾಲು ಹಾಗೂ ನಡೆಯುವ ಕ್ರಿಯೆ. ಈ ಮೂರು ಕರ್ಮೇಂದ್ರಿಯಗಳು ಮುಖ್ಯವಾಗಿ ಮನುಷ್ಯನಲ್ಲಿ ಜ್ಞಾನ ಸಾಧನಗಳಾಗಿವೆ. ಬಾಯಿ ಇರುವುದು ನಮ್ಮ ಜ್ಞಾನದ ಅರಿವನ್ನು ಇನ್ನೊಬ್ಬರಿಗೆ ಮುಟ್ಟಿಸಲು; ಕಾಲು ಪುಣ್ಯಕ್ಷೇತ್ರಗಳಿಗೆ ಹೋಗಲು ಅಥವಾ ಎಲ್ಲಿ ಜ್ಞಾನವಿದೆ ಅಲ್ಲಿಗೆ ಹೋಗಲು; ಕೈ- ಜ್ಞಾನ ಸಾಧನವಾದ ಕುಸುರಿ ಕೆಲಸ, ಶಿಲ್ಪಕಲೆ, ಇತ್ಯಾದಿಯೊಂದಿಗೆ ಮುಖ್ಯವಾಗಿ ಸ್ವೀಕರಿಸುವ ಕ್ರಿಯೆಗೆ. ಹೀಗೆ ಈ ಮೂರು ಕರ್ಮೇಂದ್ರಿಯಗಳು ಮನುಷ್ಯನ ಜ್ಞಾನ ಸಾಧನಗಳಾಗಿವೆ. ಇದಲ್ಲದೆ ಆರೋಗ್ಯ ಸಾಧನವಾಗಿ ಪಾಯು ಮತ್ತು ಉಪಸ್ಥಗಳಿವೆ. ಇಲ್ಲಿ ಪಾಯು ವಿಸರ್ಜನ ಕ್ರಿಯೆಗಾಗಿ ಎಂದು ಹೇಳಿದರೆ, "ಉಪಸ್ಥಚ ಆನಂದಯಿತವ್ಯಂ ಚ" ಎಂದು ಹೇಳಿದ್ದಾರೆ. ಏಕೆಂದರೆ ಉಪಸ್ಥದ[ಜನನೇಂದ್ರಿಯದ] ಪ್ರಧಾನ ಕ್ರಿಯೆ ಸ್ತ್ರೀ-ಪುರುಷ ಸಮಾಗಮದಿಂದ ಆನಂದವನ್ನನುಭವಿಸುವುದು. ಹೀಗೆ ಪಂಚಭೂತಗಳು, ಪಂಚತನ್ಮಾತ್ರೆಗಳು, ಪಂಚಜ್ಞಾನೇಂದ್ರಿಯಗಳು ಹಾಗೂ ಪಂಚಕರ್ಮೇಂದ್ರಿಯದ ವಿವರಣೆ ನೀಡಿದ ನಂತರ ಇಲ್ಲಿ ಮುಂದೆ ಪಂಚವಿಧ ಅಂತಃಕರಣದ ಪಟ್ಟಿ ಮಾಡಿರುವುದನ್ನು ಕಾಣುತ್ತೇವೆ.

ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಮತ್ತು ಚೇತನ ಇವು ಐದು ವಿಧದ ಅಂತಃಕರಣಗಳು. ನಾವು ಒಂದು ವಸ್ತುವನ್ನು ನೋಡಿದ ತಕ್ಷಣ ಅದು ಬೇಕು ಅನಿಸುವುದು ನಮ್ಮ ಮನ್ಸಸ್ಸಿನಿಂದ. ಆದರೆ ಅದು ಬೇಕೋ ಬೇಡವೋ ಅನ್ನುವ ತೀರ್ಮಾನ ಮಾಡುವುದು ಬುದ್ಧಿ. ಹೊರಗಿನ ಪ್ರಪಂಚಕ್ಕೂ ತನಗೂ ಸಂಬಂಧವನ್ನು ಕಲ್ಪಿಸುವ ಅಂತರಂಗ ಪ್ರಪಂಚ 'ಅಹಂಕಾರ'. [ಇಲ್ಲಿ ಅಹಂಕಾರ ಎಂದರೆ ಹೆಮ್ಮೆ(Ego), ಭೂಟಾಟಿಕೆ ಅಲ್ಲ, ಬದಲಿಗೆ 'ನಾನು ಎನ್ನುವ ಅರಿವು' (Awareness of self)]. ನೋಡಿದ್ದನ್ನು ಕೇಳಿದ್ದನ್ನು ನೆನಪಿಟ್ಟುಕೊಳ್ಳುವುದು ನಮ್ಮ ಚಿತ್ತ. ಚಿತ್ತವಿಲ್ಲದೆ ನಮಗೆ ಬದುಕೇ ಇಲ್ಲ. ಚಿತ್ತ ವಿಸ್ತಾರವಾದರೆ ಅದು ತೇಜಸ್ಸು. ಅದು ನಮಗೆ ಜನ್ಮಾಂತರದ ನೆನಪು ಕೊಡುವ ಬೆಳಕು. ಭೂತ ಮತ್ತು ಭವಿಷ್ಯತ್ಕಾಲ ವರ್ತಮಾನವಾಗಿ ಕಾಣುವುದು 'ಚೇತನ'ದಿಂದ.

ಪಂಚಭೂತಗಳು, ಪಂಚತನ್ಮಾತ್ರೆಗಳು, ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ ಮತ್ತು ಪಂಚವಿಧ ಅಂತಃಕರಣ ಈ ಇಪ್ಪತ್ತೈದು ತತ್ತ್ವಗಳನ್ನು[ಅದರ ಅಭಿಮಾನಿ ದೇವತಗಳನ್ನು] ಇಲ್ಲಿ ಭಗವಂತನೆಂಬ ಗೂಡು ಸೇರುವ ಹಕ್ಕಿಗಳು ಎಂದು ಕರೆದಿದ್ದಾರೆ. ಈ ಎಲ್ಲವನ್ನೂ ಧಾರಣೆ ಮಾಡಿರುವ ಶಕ್ತಿ ಪ್ರಾಣದೇವರು. ಈ ಶಕ್ತಿಯನ್ನೇ ನಾವು 'ಮುಖ್ಯಪ್ರಾಣ' ಎಂದು ಉಪಾಸನೆ ಮಾಡುತ್ತೇವೆ.

ಭಗವಂತ ತಾಯಿಯಂತೆ ಎಲ್ಲಾ ತತ್ವಾಭಿಮಾನಿ ದೇವತೆಗಳನ್ನು ನಿದ್ದೆಯ ಕಾಲದಲ್ಲಿ ತನ್ನೊಳಗೆ ಹುದುಗಿಸಿಕೊಂಡು ಮತ್ತೆ ಎಚ್ಚರವಾದಾಗ ಮರಳಿ ಅವರವರ ಕರ್ತವ್ಯಕ್ಕೆ ಕಳುಹಿಸಿ ಕೊಡುತ್ತಾನೆ. ಪಿಂಡಾಂಡ ಬ್ರಹ್ಮಾಂಡವನ್ನು ಧಾರಣೆ ಮಾಡಿ ಅಹೋರಾತ್ರಿ ಕಾರ್ಯನಿರ್ವಹಿಸುವ ಪ್ರಾಣದೇವರೂ ಸಹ, ಭಗವಂತನ ಮಡಿಲಲ್ಲಿ ಪುಟ್ಟ ಮಗುವಿದ್ದಂತೆ. ನಮಗೆ ಇಡೀ ಪ್ರಪಂಚವನ್ನು ಧಾರಣೆ ಮಾಡಿರುವ ಪ್ರಾಣಶಕ್ತಿಯೇ ಒಂದು ಅದ್ಭುತ. ಹಾಗಿರುವಾಗ ಈ ಪ್ರಾಣಶಕ್ತಿಯನ್ನೂ ಧಾರಣೆ ಮಾಡಿರುವ ಆ ಭಗವಂತನನ್ನು ನಾವು ಕಲ್ಪಿಸುವುದೂ ಅಸಾಧ್ಯ!

ಮೇಲೆ ಹೇಳಿದಂತೆ ಇಲ್ಲಿ ಹೇಳಿರುವುದು ಕೇವಲ ತತ್ತ್ವವನ್ನಷ್ಟೇ ಅಲ್ಲ, ತತ್ತ್ವಾಭಿಮಾನಿ ದೇವತೆಗಳನ್ನೂ ಕೂಡಾ ಹೌದು. ಈ ಹಿನ್ನೆಲೆಯಲ್ಲಿ ನಾವು ತತ್ತ್ವಾಭಿಮಾನಿ ದೇವತೆಗಳು ಯಾರು ಮತ್ತು ಅವರು ಯಾವ ಕಕ್ಷೆಯಲ್ಲಿದ್ದಾರೆ ಎನ್ನುವುದನ್ನು ಅರಿತು ಮುಂದುವರಿಯೋಣ.

ಮೊದಲನೆಯದಾಗಿ ಮಣ್ಣಿನ ದೇವತೆ. ಇಪ್ಪತ್ನಾಲ್ಕನೇ ಕಕ್ಷೆಯಲ್ಲಿರುವ 'ಶನಿ' ನೇರವಾಗಿ ಮಣ್ಣಿನ ಅಭಿಮಾನಿ ದೇವತೆ. ಶನಿಯ ನಂತರ ಶನಿಗಿಂತ ಎತ್ತರದಲ್ಲಿ ಹದಿನೆಂಟನೇ ಕಕ್ಷೆಯಲ್ಲಿರುವ ಪ್ರಥಿವೀ ಮಾತೆ, ಹತ್ತನೇ ಕಕ್ಷೆಯಲ್ಲಿರುವ ಅನಿರುದ್ಧ ಕೂಡಾ ಮಣ್ಣಿನ ಅಭಿಮಾನಿ ದೇವತೆಗಳು. ಎಲ್ಲಕ್ಕಿಂತ ಎತ್ತರದಲ್ಲಿ ಎರಡನೇ ಕಕ್ಷೆಯಲ್ಲಿರುವ ಸಾಕ್ಷಾತ್ ಶ್ರೀಲಕ್ಷ್ಮಿಯ ಭೂ ನಾಮಕ ರೂಪವೂ ಕೂಡಾ ಮಣ್ಣಿನ ದೇವತೆ.

ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧದ ಅಭಿಮಾನಿ ದೇವತೆಗಳು ಹದಿನೆಂಟನೇ ಕಕ್ಷೆಯಲ್ಲಿರುವ ಪ್ರಾಣದೇವರ ಪುತ್ರರಾದ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ. ಹೇಗೆ ಪ್ರಥಿವಿಯ ದೇವತೆ ಶ್ರೀಲಕ್ಷ್ಮಿಯೋ ಹಾಗೇ ಗಂಧದ ಅಭಿಮಾನಿ ದೇವತೆ ಏಳನೇ ಕಕ್ಷೆಯಲ್ಲಿರುವ ಪಾರ್ವತಿ. ನೀರಿನ ಅಭಿಮಾನಿ ದೇವತೆ ನೇರವಾಗಿ ಇಪ್ಪತ್ತೆರಡನೇ ಮೆಟ್ಟಿಲಲ್ಲಿರುವ ಬುಧ. ಇದಕ್ಕೂ ಮೇಲಕ್ಕೆ ಹದಿಮೂರನೇ ಮೆಟ್ಟಿಲಲ್ಲಿರುವ ವರುಣ ಮತ್ತು ಒಂಬತ್ತನೇ ಮೆಟ್ಟಿಲಲ್ಲಿರುವ ಅಹಂಕಾರಿಕ ಪ್ರಾಣ ಕೂಡಾ ನೀರಿನ ಅಭಿಮಾನಿ ದೇವತೆಯರು. ರಸದ ದೇವತೆ ಏಳನೇ ಮೆಟ್ಟಿಲಲ್ಲಿರುವ ಶೇಷಪತ್ನಿ ವಾರುಣಿ. ಸ್ಥೂಲವಾಗಿ ತೇಜಸ್ಸಿನ ಅಭಿಮಾನಿ ದೇವತೆ ಹತ್ತೊಂಬತ್ತನೇ ಕಕ್ಷೆಯಲ್ಲಿರುವ ಅಗ್ನಿಯ ಜೇಷ್ಠಪುತ್ರ ಪಾವಕ. ಇದಕ್ಕೂ ಎತ್ತರದಲ್ಲಿ ಹದಿನೈದನೇ ಕಕ್ಷೆಯಲ್ಲಿರುವ ಅಗ್ನಿ ಮತ್ತು ಎಂಟನೇ ಕಕ್ಷೆಯಲ್ಲಿರುವ ಇಂದ್ರ ತೇಜಸ್ಸಿನ ಅಭಿಮಾನಿ ದೇವತೆ. ಏಳನೇ ಕಕ್ಷೆಯಲ್ಲಿರುವ ಶೇಷಪತ್ನಿ ವಾರುಣಿ ರೂಪ ರಸಗಳ ಅಭಿಮಾನಿ ದೇವತೆ. ಹತ್ತೊಂಬತ್ತನೇ ಮೆಟ್ಟಿಲಲ್ಲಿರುವ ವಾಯುಪುತ್ರ ಮರೀಚಿ ಮತ್ತು ಹನ್ನೊಂದನೇ ಮೆಟ್ಟಿಲಲ್ಲಿರುವ ಪ್ರವಹವಾಯು ಗಾಳಿಯ ಅಭಿಮಾನಿ ದೇವತೆಯರು. ಎಲ್ಲಕ್ಕೂ ಮುಖ್ಯವಾಗಿ ಮೂರನೇ ಮೆಟ್ಟಿಲಲ್ಲಿರುವ ಮುಖ್ಯಪ್ರಾಣ ಗಾಳಿಯ ಪ್ರಧಾನ ಅಭಿಮಾನಿ ದೇವತೆ. ಏಳನೇ ಕಕ್ಷೆಯಲ್ಲಿರುವ ಗರುಡಪತ್ನಿ ಸುಪರ್ಣಿ ಶಬ್ದ ಮತ್ತು ಸ್ಪರ್ಶದ ಅಭಿಮಾನಿ ದೇವತೆ. ಹದಿನೆಂಟನೇ ಕಕ್ಷೆಯಲ್ಲಿರುವ ವಿನಾಯಕ ನೇರವಾಗಿ ಆಕಾಶದ ಅಭಿಮಾನಿ ದೇವತೆಯಾದರೆ, ಆತನಿಗಿಂತ ಎತ್ತರದಲ್ಲಿರುವ ಐದನೇ ಕಕ್ಷೆಯಲ್ಲಿರುವ ಶಿವ, ಮೂರನೇ ಕಕ್ಷೆಯಲ್ಲಿರುವ ಮುಖ್ಯಪ್ರಾಣ ಹಾಗೂ ಎರಡನೇ ಕಕ್ಷೆಯಲ್ಲಿರುವ ಶ್ರೀಲಕ್ಷ್ಮಿ ಕೂಡಾ ಆಕಾಶದ ಅಭಿಮಾನಿ ದೇವತೆಯರು. ಕಣ್ಣಿನ ಅಭಿಮಾನಿ ದೇವತೆ ಹನ್ನೆರಡನೇ ಕಕ್ಷೆಯಲ್ಲಿರುವ ಸೂರ್ಯ. ಕಿವಿಯ ಅಭಿಮಾನಿ ದೇವತೆ ಮುಖ್ಯವಾಗಿ ಹನ್ನೆರಡನೇ ಕಕ್ಷೆಯಲ್ಲಿರುವ ಚಂದ್ರ. ಇದಲ್ಲದೆ ಹದಿನೆಂಟನೇ ಕಕ್ಷೆಯಲ್ಲಿರುವ ಕುಬೇರ, ಹದಿನೇಳನೇ ಕಕ್ಷೆಯಲ್ಲಿರುವ ಮಿತ್ರ, ಹದಿಮೂರನೇ ಕಕ್ಷೆಯಲ್ಲಿರುವ ವರುಣ ಹಾಗೂ ಹನ್ನೆರಡನೇ ಕಕ್ಷೆಯಲ್ಲಿರುವ ಯಮ ಕೂಡಾ ಕಿವಿಯ ಅಭಿಮಾನಿ ದೇವತೆಯರು. ಇವರು ದಿಗ್ದೇವತೆಯರು ಕೂಡಾ ಹೌದು. ಹದಿನೆಂಟನೇ ಕಕ್ಷೆಯಲ್ಲಿರುವ ಅಶ್ವಿನೀ ದೇವತೆಗಳು ಮೂಗಿನ ಅಭಿಮಾನಿ ದೇವತೆಯರು. ಹದಿಮೂರನೇ ಕಕ್ಷೆಯಲ್ಲಿರುವ ವರುಣ ನಾಲಿಗೆಯ ಅಭಿಮಾನಿಯಾದರೆ, ಹದಿನೆಂಟನೇ ಕಕ್ಷೆಯಲ್ಲಿರುವ ಕುಬೇರ ಮತ್ತು ಹನ್ನೊಂದನೇ ಕಕ್ಷೆಯಲ್ಲಿರುವ ಪ್ರವಹವಾಯು ತ್ವಗೀಂದ್ರಿಯದ ಅಭಿಮಾನಿ ದೇವತೆಗಳು. ವಾಗೇಂದ್ರಿಯ ದೇವತೆ ಹದಿನೈದನೇ ಕಕ್ಷೆಯಲ್ಲಿರುವ ಅಗ್ನಿ. ಮಾತನಾಡುವ ಕ್ರಿಯೆಯ ಅಭಿಮಾನಿ ದೇವತೆ ಏಳನೇ ಕಕ್ಷೆಯಲ್ಲಿರುವ ಗರುಡಪತ್ನಿ ಸುಪರ್ಣಿ. ಕೈಯ ಅಭಿಮಾನಿ ದೇವತೆ ಎಂಟನೇ ಕಕ್ಷೆಯಲ್ಲಿರುವ ಇಂದ್ರ ಹಾಗೂ ಅವಾಂತರ ದೇವತೆಯಾಗಿ ಹತ್ತನೇ ಕಕ್ಷೆಯಲ್ಲಿರುವ ದಕ್ಷಪ್ರಜಾಪತಿ. ಕೈಯಿಂದ ನಡೆಯುವ ಕ್ರಿಯೆಯ ಅಭಿಮಾನಿ ದೇವತೆ ಗರುಡಪತ್ನಿ ಸುಪರ್ಣಿ. ಹತ್ತೊಂಬತ್ತನೇ ಮೆಟ್ಟಿಲಲ್ಲಿರುವ ಇಂದ್ರಪುತ್ರ ಜಯಂತ ಕಾಲಿನ ಅಭಿಮಾನಿ ದೇವತೆ. ಗಮನಕ್ರಿಯೆಯ ಅಭಿಮಾನಿ ದೇವತೆ ಶೇಷಪತ್ನಿ ವಾರುಣಿ. ವಿಸರ್ಜನಾಂಗ ಪಾಯುವಿನ ಅಭಿಮಾನಿ ದೇವತೆ

ಮಿತ್ರ(೧೭ನೇ ಕಕ್ಷೆ), ಯಮ(೧೨ನೇ ಕಕ್ಷೆ) ಮತ್ತು ನಿರ್ಋತಿ(೧೭ನೇ ಕಕ್ಷೆ). ವಿಸರ್ಜನ ಕ್ರಿಯೆಯ ದೇವತೆ ವಾರುಣಿ. ಹತ್ತನೇ ಕಕ್ಷೆಯಲ್ಲಿರುವ ಧಕ್ಷಪ್ರಜಾಪತಿ ಮತ್ತು ಸ್ವಾಯಂಭುವ ಮನು ಉಪಸ್ಥದ ದೇವತೆಗಳಾದರೆ ಸಂತಾನಕ್ರಿಯೆಯ ಅಭಿಮಾನಿ ದೇವತೆ ಶಿವ ಪತ್ನಿ ಪಾರ್ವತಿ(೭ನೇ ಕಕ್ಷೆ). ಮನಸ್ಸು-ಬುದ್ಧಿ ಮತ್ತು ಅಹಂಕಾರದ ದೇವತೆಗಳು ಎಂಟನೇ ಕಕ್ಷೆಯಲ್ಲಿರುವ ಇಂದ್ರ-ಕಾಮರಾದರೂ ಕೂಡಾ, ಮೂಲಭೂತವಾಗಿ ಇದರ ಅಭಿಮಾನಿ ದೇವತೆಗಳು ಐದನೇ ಕಕ್ಷೆಯಲ್ಲಿರುವ ಗರುಡ-ಶೇಷ-ರುದ್ರರು. ವಿಶೇಷವಾಗಿ ಬುದ್ಧಿಯ ಅಭಿಮಾನಿ ದೇವತೆಯರು ಸರಸ್ವತಿ ಮತ್ತು ಭಾರತಿಯರು. ಇವರು  ನಾಲ್ಕನೇ ಕಕ್ಷೆಯಲ್ಲಿನ ದೇವತೆಗಳು. ಚಿತ್ತದ ದೇವತೆ ಮೂರನೇ ಕಕ್ಷೆಯಲ್ಲಿರುವ ಬ್ರಹ್ಮ-ವಾಯು. ಕರ್ಮದ ದೇವತೆ ಇಪ್ಪತ್ತೈದನೇ ಕಕ್ಷೆಯಲ್ಲಿರುವ ಪುಷ್ಕರ. ತೇಜಸ್ಸಿನ ಅಥವಾ ಚೇತನದ ದೇವತೆ ಎರಡನೇ ಕಕ್ಷೆಯಲ್ಲಿರುವ ಶ್ರೀಲಕ್ಷ್ಮಿ. ಹೀಗೆ ಎರಡನೇ ಕಕ್ಷೆಯಲ್ಲಿರುವ ಶ್ರಿಲಕ್ಷ್ಮಿಯಿಂದ ಇಪ್ಪತ್ತೈದನೇ ಕಕ್ಷೆಯಲ್ಲಿರುವ ಪುಷ್ಕರನ ತನಕ ಎಲ್ಲಾ ದೇವತೆಗಳು, ಮೊತ್ತಮೊದಲಿಗನಾಗಿ ಮೊದಲ ಕಕ್ಷೆಯಲ್ಲಿರುವ ಭಗವಂತನ ಅಧೀನವಾಗಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ಹಕ್ಕಿಗಳು ಗೂಡು ಸೇರುವಂತೆ ಭಗವಂತನೆಂಬ ಗೂಡನ್ನು ಸೇರಿ ವಿಶ್ರಮಿಸುತ್ತಾರೆ.

*ಏಷ ಹಿ ದ್ರಷ್ಟ ಸ್ಪ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ ಮಂತಾ ಬೋದ್ಧಾ ಕರ್ತಾ ವಿಜ್ಞಾನಾತ್ಮಾ ಪುರುಷಃ ॥೯॥*

ಭಗವಂತ ವಿಶ್ವದಲ್ಲಿ ಎಲ್ಲವನ್ನೂ ಸಾಕ್ಷಾತ್ ನೋಡಬಲ್ಲ, ಕೇಳಬಲ್ಲ. ಅಂತರ್ಯಾಮಿಯಾಗಿದ್ದು, ಸರ್ವಗತನಾಗಿದ್ದು ಸಾಕ್ಷಾತ್ ಎಲ್ಲವನ್ನೂ ಮುಟ್ಟಬಲ್ಲ. ಆತ ಎಲ್ಲವನ್ನೂ ಆಘ್ರಾಣಿಸಬಲ್ಲ; ಎಲ್ಲಾ ಜೀವರೊಳಗಿರುವ ಭಗವಂತ ಸಾಕ್ಷಾತ್ ಎಲ್ಲಾ ರುಚಿಯನ್ನೂ ಸವಿಯಬಲ್ಲ. ಎಲ್ಲವನ್ನೂ ಮನನಮಾಡಬಲ್ಲ. ಎಲ್ಲವನ್ನೂ ತಿಳಿಯಬಲ್ಲವ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಎಲ್ಲವನ್ನೂ ಸೃಷ್ಟಿಸಿದ ಸ್ರಷ್ಟಾರ. ಎಲ್ಲಾ ಜ್ಞಾನಗಳಿಗಿಂತಲೂ ವಿಶಿಷ್ಠ ಜ್ಞಾನ ಉಳ್ಳವ ಆ 'ಪುರುಷಃ' ನಾಮಕ ಭಗವಂತ. [ಎಲ್ಲಾ ಪುರ(ದೇಹ)ದೊಳಗಿದ್ದು ಎಲ್ಲಾ ಕ್ರಿಯೆಗಳನ್ನು ನಿಯಂತ್ರಿಸುವವ  ಪುರುಷಃ]. ಎಲ್ಲಾ ದೇಹದೊಳಗಿದ್ದು ಎಲ್ಲಾ ಇಂದ್ರಿಯಗಳ ವ್ಯಾಪಾರವನ್ನು ಆಸ್ವಾದಿಸಿ, ಇಡೀ ವಿಶ್ವವನ್ನು ವ್ಯಾಪಿಸಿರುವ ಶಕ್ತಿ ಆ ಭಗವಂತ-'ಆತ್ಮಃ'. ಎಲ್ಲರಿಗೂ ಆಶ್ರಯನಾಗಿರುವ ಭಗವಂತನನ್ನು ಇಲ್ಲಿ ಹತ್ತು ಶಬ್ದಗಳಲ್ಲಿ ವಿವರಿಸಿರುವುದನ್ನು ನಾವು ಗಮನಿಸಬೇಕು[ದ್ರಷ್ಟ, ಸ್ಪ್ರಷ್ಟಾ, ಶ್ರೋತಾ, ಘ್ರಾತಾ, ರಸಯಿತಾ, ಮಂತಾ, ಬೋದ್ಧಾ ,ಕರ್ತಾ, ವಿಜ್ಞಾನಾತ್ಮಾ ಮತ್ತು ಪುರುಷಃ]. ಇವು ಹತ್ತು ರೂಪದ ಭಗವಂತನನ್ನು ವರ್ಣಿಸುವ ಹತ್ತು ಶಬ್ದಗಳು. ಇಲ್ಲಿ ಇನ್ನೊಂದು ವಿಶೇಷತೆ ಇದೆ. ಹಿಂದೆ ಜ್ಞಾನೇಂದ್ರಿಯದ ವಿವರಣೆ ಬಂದಿದೆ ಹಾಗೂ ಕರ್ಮೇಂದ್ರಿಯದ ವಿವರಣೆಯೂ ಬಂದಿದೆ. ನಂತರ ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಮನಸ್ಸು, ಅಂತಃಕರಣದ ಅಭಿಮಾನಿ ದೇವತೆಗಳೆಲ್ಲರೂ ಭಗವಂತನಲ್ಲಿ ಹೋಗಿ ಸೇರುತ್ತಾರೆ ಎಂದೂ ಹೇಳಿದ್ದರು. ಈಗ ಇಲ್ಲಿ ಭಗವಂತನ ಕುರಿತು ಹೇಳುವಾಗ ಮೊದಲು ಐದು ಜ್ಞಾನೇಂದ್ರಿಯದ ಕುರಿತು [ದ್ರಷ್ಟ, ಸ್ಪ್ರಷ್ಟಾ, ಶ್ರೋತಾ, ಘ್ರಾತಾ ಮತ್ತು ರಸಯಿತಾ] ಹೇಳುವುದನ್ನು ಕಾಣುತ್ತೇವೆ. ಇದೇ ವಿವರಣೆ ಗೀತೆಯಲ್ಲಿ ಕೂಡಾ ಬಂದಿದೆ: ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ। ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ ॥ಭಗವದ್ಗೀತಾ-೧-೧೫-೯॥. ಎರಡೂ ಕಡೆ ಕೇವಲ ಜ್ಞಾನೇಂದ್ರಿಯವನ್ನು ಹೇಳಿದ್ದಾರೆ ಹೊರತು ಕರ್ಮೇಂದ್ರಿಯವನ್ನು ಹೇಳಿಲ್ಲ. ಇದರರ್ಥ ಭಗವಂತ ಕೇವಲ ಜ್ಞಾನೇಂದ್ರಿಯದಲ್ಲಿದ್ದು ಆನಂದ ಪಾನ ಮಾಡುತ್ತಾನೆ ಆದರೆ ಕರ್ಮೇಂದ್ರಿಯದಿಂದ ಮಾಡುವುದಿಲ್ಲ ಎಂದಲ್ಲ. ಜ್ಞಾನಸ್ವರೂಪನಾದ ಭಗವಂತನಿಗೆ ಎಲ್ಲಾ ಇಂದ್ರಿಯಗಳೂ ಜ್ಞಾನೇಂದ್ರಿಯಗಳೇ. ಆದ್ದರಿಂದ ಇಲ್ಲಿ ಕರ್ಮೇಂದ್ರಿಯವನ್ನು ಪ್ರತ್ಯೇಕವಾಗಿ ಹೇಳಿಲ್ಲ ಅಷ್ಟೇ.  ನಂತರ 'ಬಯಕೆ' ಮತ್ತು 'ನಿಶ್ಚಯ' ಎರಡನ್ನೂ ಮಂತಾ ಮತ್ತು  ಬೋದ್ಧಾ ಎಂದು ಇಲ್ಲಿ ಹೇಳಿದ್ದಾರೆ [ಗೀತೆಯಲ್ಲಿ ಅಧಿಷ್ಠಾಯ

ಮನಶ್ಛಾಯ ಎಂದಿದ್ದಾರೆ]. ಭಗವಂತ ಬಯಕೆ ಮತ್ತು ನಿಶ್ಚಯ ಈ ಎರಡು ಮುಖದಿಂದ ಕಾರ್ಯ ನಿರ್ವಹಿಸುತ್ತಾನೆ. [ಉದಾಹರಣೆಗೆ: ಭಗವಂತ ಸೃಷ್ಟಿ ನಿರ್ಮಾಣ ಮಾಡಬೇಕೆಂದು ಬಯಸಿದ ಮತ್ತು ಸೃಷ್ಟಿ ಮಾಡಿದ]. ಹಿಂದೆ ದೇವತೆಗಳನ್ನು ಹೇಳುವಾಗ ಅಹಂಕರ್ತಾ ಎಂದು ಹೇಳಿದ್ದರೆ ಇಲ್ಲಿ ಭಗವಂತನನ್ನು ಹೇಳುವಾಗ ಕೇವಲ 'ಕರ್ತಾ' ಎಂದಿದ್ದಾರೆ. ಕಾರಣ ಏನೆಂದರೆ ಭಗವಂತನಿಗೆ ನಾನು ನನ್ನದು ಎನ್ನುವ ಅಹಂಕಾರವಿಲ್ಲ. ಆತ ಯಾವುದರ ಅಭಿಮಾನಿಯೂ ಅಲ್ಲ.

ಸಮಸ್ತ ವಿಶ್ವದ ಸಮಸ್ತ ಕ್ರಿಯೆಯನ್ನು ನಿರ್ವಹಿಸುವ, ಸಮಸ್ತ ಪದಾರ್ಥವನ್ನು ನಿರ್ಮಾಣ ಮಾಡಿದ ಭಗವಂತನನ್ನು ಇಲ್ಲಿ 'ವಿಜ್ಞಾನಾತ್ಮಾ' ಎಂದು ಸಂಬೋಧಿಸಿದ್ದಾರೆ. ಒಂದು ದೃಷ್ಟಿಯಿಂದ ವಿಜ್ಞಾನಾತ್ಮಾ ಎನ್ನುವುದು ವಿಷ್ಣುಃ ಶಬ್ದದ ವ್ಯಾಖ್ಯಾನ. ವಿಷ್ಣುಃ ಎನ್ನುವುದಕ್ಕೆ ಸಂಸ್ಕೃತದಲ್ಲಿ ಒಂದು ವಿಶಿಷ್ಠ ಅರ್ಥವಿದೆ. ವಿಷ್ಣು ಎನ್ನುವ ಶಬ್ದದಲ್ಲಿ ಒಟ್ಟು ನಾಲ್ಕು ಅಕ್ಷರಗಳಿವೆ. ಅವುಗಳೆಂದರೆ ವಿ, ಶ, ಣ ಮತ್ತು ಉ. ಇಲ್ಲಿ 'ವಿ'-ಎಲ್ಲಕ್ಕಿಂತ ವಿಶಿಷ್ಠ ಮತ್ತು ವಿಲಕ್ಷಣವಾದ ಶಕ್ತಿ ಎನ್ನುವ ಅರ್ಥವನ್ನು ಕೊಡುತ್ತದೆ. 'ಉ' ಸಹಜ ಸ್ವಭಾವವಾಗಿ ಉಳ್ಳವನು ಅಥವಾ ಸ್ವರೂಪ ಎನ್ನುವ ಅರ್ಥವನ್ನು ಕೊಡುತ್ತದೆ. [ಉದಾಹರಣೆಗೆ:ದಯಾಳು: ದಯೆಯೇ ಸಹಜ ಸ್ವಭಾವವಾಗಿ ಉಳ್ಳವನು-ದಯಾಳು]. ಐತರೆಯ ಉಪನಿಷತ್ತಿನಲ್ಲಿ ಹೇಳುವಂತೆ: ಣ-ಕಾರೋ ಬಲಂ ಶ-ಕಾರಃ ಪ್ರಾಣೋ ಆತ್ಮಾ. ಆದ್ದರಿಂದ 'ಣ' ಎಂದರೆ ಬಲ ಸ್ವರೂಪ. 'ಶ' ಎಂದರೆ ಸರ್ವಚಾಲಕ ಶಕ್ತಿ. ಇದನ್ನು 'ಚೇಷ್ಟೆ' ಅಥವಾ 'ಕ್ರಿಯೆ' ಎನ್ನಬಹುದು. ಸತ್ಯಸಂಕಲ್ಪನಾದ ಭಗವಂತನ ಕ್ರಿಯೆ ಇರುವುದು ಕೇವಲ ಜ್ಞಾನ ಮತ್ತು ಆನಂದದಲ್ಲಿ. ಆದ್ದರಿಂದ ವಿಷ್ಣುಃ ಎಂದರೆ 'ವಿಶಿಷ್ಟವಾದ ಜ್ಞಾನಾನಂದ ಬಲ ಸ್ವರೂಪನಾದ ಭಗವಂತ' ಎಂದರ್ಥ. ಇಂತಹ ಭಗವಂತ ಎಲ್ಲರ ಇಂದ್ರಿಯದಲ್ಲಿದ್ದು, ಎಲ್ಲಾ-ಪುರದಲ್ಲಿದ್ದು, ದುಃಖ ಮತ್ತು ಅಜ್ಞಾನದ ಸ್ಪರ್ಶವೇ ಇಲ್ಲದ ಕೇವಲ ಜ್ಞಾನಾನಂದವನ್ನು ಅನುಭವಿಸುವ 'ಪುರುಷಃ'.

*ಸಯೋ ಹ ವೈ ತದಚ್ಛಾಯಮಶರೀರಮ್ಲೋಹಿತಂ ಶುಭ್ರಮಕ್ಷರಂ ವೇದಯತೇ ಯಸ್ತು ಸೋಮ್ಯ ಸ ಸರ್ವಜ್ಞಃ ಸರ್ವೋ ಭವತಿ ॥೧೦॥*

ಭಗವಂತ ನೆರಳಿಲ್ಲದ ಪುರುಷಃ. ಅಂದರೆ ಬೆಳಕಿನ ಪುಂಜವಾದ ಭಗವಂತನಿಗೆ ನೆರಳಿನ ಸ್ಪರ್ಶವಿಲ್ಲ ಎನ್ನುವುದು ಒಂದು ಅರ್ಥವಾದರೆ, ಭಗವಂತ ಜ್ಞಾನಾನಂದ ಸ್ವರೂಪ; ತಮಸ್ಸಿನ(ಕತ್ತಲೆಯ) ಮತ್ತು ಅಜ್ಞಾನದ ಸ್ಪರ್ಶ ಆತನಿಗಿಲ್ಲ ಎನ್ನುವುದು ಇದರ ಇನ್ನೊಂದು ಅರ್ಥ. ಇದನ್ನೇ ಗಾಯತ್ರಿಯಲ್ಲಿ 'ಭರ್ಗ' ಎಂದಿದ್ದಾರೆ. ಭ+ರ+ಗ=ಭರ್ಗ. ಇಲ್ಲಿ ಭ=ಬೆಳಕು; ರ=ಆನಂದ; ಗ=ಜ್ಞಾನ. ಭಗವಂತ ಕತ್ತಲಿನ ಅಥವಾ ಅಜ್ಞಾನದ ಛಾಯೆ ಇಲ್ಲದ, ಶುದ್ಧ ಜ್ಞಾನದ ಬೆಳಕಿನ ಸ್ವರೂಪ.

ಭಗವಂತ ಅಶರೀರ. ಅಂದರೆ ಅವನಿಗೆ ನಮ್ಮಂತೆ ಪಾಂಚಭೌತಿಕವಾದ, ಒಂದುದಿನ ಬಿದ್ದುಹೋಗುವ, ವೃದ್ಧಿ-ಕ್ಷಯಗಳಿಗೆ ಒಳಪಡುವ ಸ್ಥೂಲ/ಸೂಕ್ಷ್ಮ/ಲಿಂಗ ಶರೀರವಿಲ್ಲ. ಆದರೆ ಭಗವಂತ ಅಹಃ-ಶರೀರ. ಅಂದರೆ ಆತನ ಶರೀರ ಜ್ಞಾನಾನಂದಮಯಸ್ವರೂಪವಾದುದು. ಇಲ್ಲಿ ಭಗವಂತನ ಶರೀರ 'ಅಲೋಹಿತಂ' ಎಂದಿದ್ದಾರೆ. ಲೋಹಿತಂ ಅಂದರೆ ನೆತ್ತರು. ನೆತ್ತರು ನಮ್ಮ ದೇಹದಲ್ಲಿನ ಸಪ್ತಧಾತುಗಳಲ್ಲಿ ಒಂದು. ನೆತ್ತರಿನಿಂದ ಕೂಡಿದ ಶರೀರ ಭಗವಂತನಿಗಿಲ್ಲ. ಅವತಾರ ರೂಪದಲ್ಲಿ ಕೂಡಾ ಭಗವಂತನ ದೇಹ ಜ್ಞಾನಾನಂದಸ್ವರೂಪವಾಗಿಯೇ ಇರುತ್ತದೆ. ಆದರೆ ನಮಗೆ ಸ್ವರೂಪಭೂತವಾದ ಭಗವಂತನ ಶರೀರವನ್ನು ನಮ್ಮ ಭೌತಿಕವಾದ ಕಣ್ಣಿನಿಂದ ಕಾಣಲು ಸಾಧ್ಯವಿಲ್ಲವಾದ್ದರಿಂದ ಆತ ನಮಗೆ ಪಾಂಚಭೌತಿಕ ಶರೀರಿಯಾಗಿ ಕಾಣಿಸಿಕೊಳ್ಳುತ್ತಾನೆ ಅಷ್ಟೇ. ಮಹಾಭಾರತದಲ್ಲಿ ತನ್ನ ಅಜ್ಜ ಭೀಷ್ಮಾಚಾರ್ಯರ

ಜೊತೆಗೆ ಯುದ್ಧ ಮಾಡುವಾಗ ಅರ್ಜುನ ಸಂಕೋಚದಿಂದ ತುಂಬಾ ನಿಧಾನವಾಗಿ ಯುದ್ಧ ಮಾಡುತ್ತಾನೆ. ಇದನ್ನು ಗಮನಿಸಿದ ಭೀಷ್ಮಾಚಾರ್ಯರು ಅರ್ಜುನನನ್ನು ಕೆಣಕಲು ಒಂದು ತಂತ್ರವನ್ನು ಮಾಡುತ್ತಾರೆ. ಅವರು ಅರ್ಜುನನ ಸಾರಥಿಯಾಗಿರುವ ಕೃಷ್ಣನ ಮೇಲೆ ಬಾಣ ಪ್ರಯೋಗ ಮಾಡುತ್ತಾರೆ. ಆ ಬಾಣ ಪ್ರಯೋಗದಿಂದ ಕೃಷ್ಣನ ಕವಚ ತುಂಡಾಗಿ ಕೃಷ್ಣನ ದೇಹದಿಂದ ರಕ್ತ ಧಾರಾಕಾರವಾಗಿ ಹರಿಯಿತು ಎನ್ನುವ ವರ್ಣನೆ ಭಾರತ ಮತ್ತು ಭಾಗವತ ಎರಡರಲ್ಲೂ ಬಂದಿರುವುದನ್ನು ಕಾಣಬಹುದು. ಈ ವರ್ಣನೆಗೆ ಉತ್ತರ ರೂಪವಾಗಿ ಇಲ್ಲಿ 'ಅಲೋಹಿತಂ' ಎಂದಿದ್ದಾರೆ. ಅಂದರೆ ಭಗವಂತನಿಗೆ ಪಾಂಚಭೌತಿಕವಾದ, ನೆತ್ತರಿನಿಂದ ಕೂಡಿದ, ತ್ರಿಗುಣಾತ್ಮಕವಾದ ಶರೀರವಿಲ್ಲ. ಅವತಾರ ರೂಪಿ ಭಗವಂತ ನಮಗೆ ಆ ರೀತಿ ತನ್ನ ಲೀಲೆಯನ್ನು ತೋರುತ್ತಾನೆ ಅಷ್ಟೇ. ಭಗವಂತ ಸ್ವಚ್ಛವಾದ ಬೆಳಕು. ಪರಿಶುದ್ಧವಾದ ಜ್ಞಾನಾನಂದಮಯವಾದ ರೂಪ ಆತನದು. ಭಗವಂತ ಅ-ಕ್ಷರ. ಅಂದರೆ ಎಂದೂ ನಾಶವಿಲ್ಲದ ಶರೀರ ಉಳ್ಳವನು. ಅಕ್ಷ(ಇಂದ್ರಿಯ)ಗಳಲ್ಲಿದ್ದು ರಮಿಸುವ, ಸ್ವತಂತ್ರವಾಗಿ ಎಲ್ಲಾ ದೇಶ ಕಾಲದಲ್ಲೂ ವ್ಯಾಪಿಸಿರುವ ಇಂತಹ ಓಂಕಾರವಾಚ್ಯ ಭಗವಂತನನ್ನು ಯಾರು ತಿಳಿದು, ಕರ್ಮಾನುಷ್ಠಾನ ಮಾಡಿ, ಕರ್ಮದಿಂದ ಜ್ಞಾನವನ್ನು ಪಡೆದು ಉಪಾಸನೆ ಮಾಡುತ್ತಾರೋ, ಅವರು ಭಗವಂತನನ್ನು ಕಾಣಬಲ್ಲರು ಎಂದಿದ್ದಾರೆ ಪಿಪ್ಪಲಾದರು.

ಇಲ್ಲಿ ಸರ್ವಜ್ಞಃ ಎಂದರೆ ಸರ್ವಂ ಪರಿಪೂರ್ಣಂ ಭಗವಂತಂ ಜ್ಞಾನಾತೀತಿ ಸರ್ವಜ್ಞಃ. ಮೂಲತಃ ಪರಿಪೂರ್ಣನಾದ, ಸರ್ವಶಕ್ತ ಭಗವಂತನನ್ನು ತಿಳಿದವನು ಎಂದರ್ಥ. ಎಲ್ಲವನ್ನೂ ತಿಳಿದವನು ಕೇವಲ ಭಗವಂತ ಮಾತ್ರ. ಅಪರೋಕ್ಷಜ್ಞಾನಿಗೂ ಕೂಡಾ ಕೇವಲ ಭಗವಂತನ ದರ್ಶನ ಸಾಧ್ಯವೇ ಹೊರತು, ಆತನಿಗೆ ಎಲ್ಲಾ ಕಾಲದಲ್ಲಿ ಎಲ್ಲವನ್ನೂ ತಿಳಿದಿರಲು ಸಾಧ್ಯವಿಲ್ಲ.

ಈ ರೀತಿ ಭಗವಂತನ ಅನುಗ್ರಹಕ್ಕೆ ಪಾತ್ರರಾದವರು ಬಯಸಿದ್ದನ್ನು ಪಡೆಯಬಲ್ಲರು ಹಾಗೂ ಎಲ್ಲವುದಕ್ಕೂ ಮುಖ್ಯವಾಗಿ ಸರ್ವಶಕ್ತ ಭಗವಂತನನ್ನು ಸೇರಬಲ್ಲರು. ಇಷ್ಟು ವಿವರಣೆ ಕೊಟ್ಟ ಪಿಪ್ಪಲಾದರು ಈ ಇಡೀ ಪೂರ್ವಪಕ್ಷಕ್ಕೆ ಉತ್ತರರೂಪವಾಗಿ, ತಾನು ಕೊಟ್ಟ ವಿವರಣೆಗೆ ಸಂವಾದಿಯಾಗಿ ಒಂದು ವೇದ ಮಂತ್ರವನ್ನು ಇಲ್ಲಿ ಉಲ್ಲೇಖಿಸುತ್ತಾರೆ. ಆ ಶ್ಲೋಕ ಹೀಗಿದೆ:

***ತದೇಷ ಶ್ಲೋಕಃ***

*ವಿಜ್ಞಾನಾತ್ಮಾ ಸಹ ದೇವೈಶ್ಚ ಸರ್ವೈಃ ಪ್ರಾಣಾ ಭೂತಾನಿ ಸಂಪ್ರತಿಷ್ಠಂತಿ ಯತ್ರ ।*
*ತದಕ್ಷರಂ ವೇದಯತೇ ಯಸ್ತು ಸೋಮ್ಯ ಸ ಸರ್ವಜ್ಞಃ ಸರ್ವಮೇವಾಽವಿವೇಶೇತಿ ॥೧೧॥*

ಪಿಪ್ಪಲಾದರು ಯಾವ ಅನುಭವವನ್ನು ಸೌರ್ಯಾಯಣಿ ಗಾರ್ಗ್ಯರಿಗೆ ಹೇಳಿದರೋ ಅದೇ ಅನುಭವವನ್ನು ಈ ಮಂತ್ರ ಹೇಳುತ್ತದೆ. ಇಲ್ಲಿ 'ವಿಜ್ಞಾನಾತ್ಮಾ' ಎಂದರೆ ಜ್ಞಾನಾನಂದಸ್ವರೂಪನಾದ ಪರಮಾತ್ಮ. ಇಲ್ಲಿ ಬಳಕೆಯಾದ 'ಸಹ' ಶಬ್ದ ಬಹಳ ವಿಶೇಷ ಅರ್ಥವನ್ನು ಕೊಡುತ್ತದೆ. ಇದು ಎಲ್ಲಾ ದೇವತಗಳೊಂದಿಗೆ ಎನ್ನುವ ಅರ್ಥದೊಂದಿಗೆ ದೋಷರಹಿತ ಮತ್ತು ಗುಣಸ್ವರೂಪ ಭಗವಂತ ಎನ್ನುವ ಅರ್ಥವನ್ನೂ ಕೊಡುತ್ತದೆ. [ಎಲ್ಲಾ ಗುಣಗಳ ಸಾರ ಸ್ವರೂಪನಾದ ಭಾಗವತ ಸ-ಕಾರ ವಾಚ್ಯ; ಎಲ್ಲಾ ದೋಷಗಳ ಹಾನ ಹ-ಕಾರ ವಾಚ್ಯ]

ಈ ಹಿಂದೆ ಹೇಳಿದ ತತ್ತ್ವಗಳು ಮತ್ತು ತತ್ತ್ವಾಭಿಮಾನಿ ದೇವತೆಗಳು ಯಾವ ಭಗವಂತನಲ್ಲಿ ಆಶ್ರಿತವಾಗಿರುತ್ತವೋ, ಅವನು ಎಲ್ಲಾ ಕಾಲ ದೇಶದಲ್ಲಿ ತುಂಬಿರುವವನು. ಆತ ಸರ್ವಗುಣಪೂರ್ಣ; ಎಲ್ಲವನ್ನೂ ಸೃಷ್ಟಿ ಮಾಡುವವನು ಆತ; ಸರ್ವಾಭೀಷ್ಟವನ್ನು ಕೊಡುವವನು ಆ ಭಗವಂತ. ಅಂತಹ ಸರ್ವಶಬ್ದವಾಚ್ಯನಾದ ಭಗವಂತನ ಅರಿವು

ಪಡೆದು(ಸೋಮ್ಯ) ಯಾರು ಪ್ರತ್ಯಕ್ಷ ಅನುಭವಿಸುತ್ತಾರೋ ಅವರು ಸರ್ವಶಕ್ತನಾದ ಭಗವಂತನನ್ನು ತಿಳಿಯುತ್ತಾರೆ ಮತ್ತು ಸರ್ವಶಕ್ತನಾದ ಭಗವಂತನನ್ನು ಮೋಕ್ಷದಲ್ಲಿ ಹೋಗಿ ಸೇರುತ್ತಾರೆ.

*ಇತಿ ಪ್ರಶ್ನೋಪನಿಷದಿ ಚತುರ್ಥಃ ಪ್ರಶ್ನಃ ॥*

ಇಲ್ಲಿಗೆ ಷಟ್ ಪ್ರಶ್ನ ಉಪನಿಷತ್ತಿನ ನಾಲ್ಕನೇ ಪ್ರಶ್ನೆ/ಅಧ್ಯಾಯ ಮುಗಿಯಿತು.

*******

# ಅಥ ಪಂಚಮಃ ಪ್ರಶ್ನಃ

ಹಿಂದಿನ ನಾಲ್ಕು ಅಧ್ಯಾಯಗಳಲ್ಲಿ, ನಾಲ್ಕು ಪ್ರಶ್ನೆಗಳಿಗೆ ಪಿಪ್ಪಲಾದರು ಕೊಟ್ಟ ಉತ್ತರದಲ್ಲಿ, ಭಗವಂತ ಮತ್ತು ಮುಖ್ಯಪ್ರಾಣದೇವರ ಮಹತ್ವ; ಅವರ ಸೃಷ್ಟಿ ಕ್ರಿಯೆ; ಎಚ್ಚರ ಕನಸು ನಿದ್ದೆ ಎನ್ನುವ ಮೂರು ಅವಸ್ಥೆಗಳಲ್ಲಿ ನಮ್ಮನ್ನು ನಿಯಂತ್ರಿಸುವ ಶಕ್ತಿಗಳ ವಿವರವನ್ನು ತಿಳಿದೆವು. ಈ ಅಧ್ಯಾಯ ಐದನೇ ಋಷಿ ತನ್ನ ಪ್ರಶ್ನೆಯನ್ನು ಪಿಪ್ಪಲಾದರ ಮುಂದಿಡುವುದರೊಂದಿಗೆ ಪ್ರಾರಂಭವಾಗುತ್ತದೆ. ಇಲ್ಲಿ ಮುಖ್ಯವಾಗಿ ಭಗವಂತನ ಉಪಾಸನೆ, ಉಪಾಸನೆಯ ಬೀಜಮಂತ್ರ ಮತ್ತು ಉಪಾಸನೆಯ ಫಲದ ಕುರಿತಾದ ವಿವರಣೆಯನ್ನು ಕಾಣಬಹುದು.

*ಅಥ ಹೈನಂ ಶೈಬ್ಯಃ ಸತ್ಯಕಾಮಃ ಪಪ್ರಚ್ಛ । ಸ ಯೋ ಹ ವೈ ತದ್ ಭಗವನ್ ಮನುಷ್ಯೇಷು ಪ್ರಾಯಣಾಂತಮೋಂಕಾರಮಭಿಧ್ಯಾಯೀತ ಕತಮಂ ವಾವ ಸ ತೇನ ಲೋಕಂ ಜಯತೀತಿ ॥೧॥*

ಶೈಬ್ಯಃ ಸತ್ಯಕಾಮಃ ಎನ್ನುವ ಋಷಿ ಐದನೇ ಪ್ರಶ್ನೆ ಹಾಕಿದ ಶಿಷ್ಯ. ಇಲ್ಲಿ 'ಶೈಬ್ಯ' ಎಂದರೆ ಶಿಬಿಯ ಮಗ ಅಥವಾ ಶಿಬಿಯ ವಂಶಸ್ಥ ಎನ್ನುವ ಅರ್ಥವನ್ನು ಕೊಡುತ್ತದೆ. [ಪ್ರಾಚೀನ ಸಂಸ್ಕೃತ ಪಾಠಗಳಲ್ಲಿ 'ಶೈವ್ಯ' ಎನ್ನುವ ಪದ ಬಳಕೆಯಾಗಿರುವುದನ್ನು ಕಾಣುತ್ತೇವೆ. ಶೈವ್ಯ ಎಂದರೆ ಶಿವಿಯ ಮಗ ಅಥವಾ ಶಿವಿಯ ವಂಶಸ್ಥ ಎಂದರ್ಥ.] ಇಲ್ಲಿ ಶಿಬಿ(ವಿ) ಪಿಪ್ಪಲಾದರಲ್ಲಿ ಕೇಳಿದ ಪ್ರಶ್ನೆ ಹೀಗಿದೆ: "ಗುರುಗಳೇ, ಭೂಮಿಯಲ್ಲಿ ಸಾಧನೆ ಮಾಡುವ ಮನನಶೀಲ(ಮನುಷ್ಯ), ಓಂಕಾರವಾಚ್ಯ ಭಗವಂತನನ್ನು, 'ಓಂ' ಎನ್ನುವ ಬೀಜಾಕ್ಷರದ ಮೂಲಕ, ಅಂತರಂಗ ಮತ್ತು ಬಹಿರಂಗ ಭಗವದರ್ಪಣಾ ಭಾವದಿಂದ, ತನ್ನ ಪ್ರತಿಯೊಂದು ಕ್ರಿಯೆಯನ್ನೂ ಭಗವಂತನ ಪೂಜೆ ಎಂದು(ಅಭಿಧ್ಯಾನ), ಸಾಯುವ ತನಕ ಉಪಾಸನೆ ಮಾಡಿದರೆ, ಅಂತಹ ವ್ಯಕ್ತಿ, ಓಂಕಾರವಾಚ್ಯ ಭಗವಂತನ ಅನುಗ್ರಹದಿಂದ, ಭೂಲೋಕ-ಸ್ವರ್ಗಲೋಕ-ವೈಕುಂಠಲೋಕ ಇವುಗಳಲ್ಲಿ ಯಾವ ಲೋಕವನ್ನು ಪಡೆಯುತ್ತಾನೆ?".

ಈ ಪ್ರಶ್ನೆ, ನಿರಂತರ ಆಳವಾದ ಚಿಂತನೆ ಮಾಡುವ ಮನುಷ್ಯರ ಸಾಧನೆಯ ಕುರಿತಾಗಿ ಕೇಳಿರುವ ಪ್ರಶ್ನೆ. ಇಲ್ಲಿ ಅಭಿಧ್ಯಾನ ಎಂದರೆ: ಎಲ್ಲಾ ವಿಧದಿಂದಲೂ ಅಥವಾ ಎಲ್ಲಾ ಕ್ರಿಯೆಯನ್ನು ಭಗವಂತನ ಪೂಜೆಯಾಗಿ ಮಾಡುವುದು ಮತ್ತು ಉಭಯತಃ [ಅಭಿತಃ=ಉಭಯತಃ=ಅಂತರಂಗ ಮತ್ತು ಬಹಿರಂಗ.] ಭಗವದರ್ಪಣೆ ಭಾವದಿಂದ ಉಪಾಸನೆ ಮಾಡುವುದು ಎಂದರ್ಥ. ಇನ್ನು 'ಪ್ರಾಯಾಣ' ಎಂದರೆ: ಪ್ರ+ಅಯನ; ಪ್ರಕೃಷ್ಟವನ್ನು ಹೊಂದುವುದು ಅಥವಾ ಎತ್ತರದ ಲೋಕಕ್ಕೆ ಹೋಗುವುದು ಎಂದರ್ಥ. ಎತ್ತರದ ಲೋಕಗಳು ಮೂರು: ಸಾಧನೆ ಮಾಡುವ ಭೂಲೋಕ, ಸ್ವರ್ಗಸುಖವನ್ನು ಅನುಭವಿಸುವ ಸ್ವರ್ಗಲೋಕ ಹಾಗೂ ಕೊನೆಯದಾಗಿ ಮೋಕ್ಷಲೋಕವಾದ ವೈಕುಂಠ. ಓಂಕಾರ ಉಪಾಸನೆಯಿಂದ ಈ ಮೂರು ಲೋಕಗಳಲ್ಲಿ ಯಾವ ಲೋಕ ಪ್ರಾಪ್ತಿಯಾಗುತ್ತದೆ ಎನ್ನುವುದು ಶಿವಿಯ ಪ್ರಶ್ನೆ.

ಪ್ರೀತಿಯ ಅಧ್ಯಾತ್ಮ ಬಂಧುಗಳೇ, ಈ ಅಪೂರ್ವವಾದ ಪ್ರಶ್ನೆಗೆ ಪಿಪ್ಪಲಾದರ ಉಪದೇಶವೇ ಈ ಅಧ್ಯಾಯದ ಮುಂದಿನ ಭಾಗ. ಬನ್ನಿ, ಆ ಭಗವಂತನ ಕೃಪೆ ಕೋರಿ, ಮುಖ್ಯಪ್ರಾಣದೇವರಿಗೆ ನಮಿಸಿ, ಅತ್ಯದ್ಭುತವಾದ ಈ ಗುರುಶಿಷ್ಯರ ಸಂಭಾಷಣೆಯನ್ನಾಲಿಸೋಣ.

*ತಸ್ಮೈ ಸ ಹೋವಾಚ: ।*
*ಏತದ್ ವೈ ಸತ್ಯಕಾಮ ಪರಂ ಚಾಪರಂ ಚ ಬ್ರಹ್ಮ ಯದೋಂಕಾರಸ್ತಸ್ಮಾದ್ ವಿದ್ವಾನೇತೇನೈವಾಯನೇನೈ-ಕತರಮನ್ವೇತಿ ॥೨॥*

ಉಪಾಸನೆಯಲ್ಲೇ ಅತಿಶ್ರೇಷ್ಠ ಉಪಾಸನೆಯಾದ ಓಂಕಾರದ ಉಪಾಸನೆ ಕುರಿತಾದ ಶೈಬ್ಯಃ ಸತ್ಯಕಾಮರ ಪ್ರಶ್ನೆಯನ್ನು ಕೇಳಿ ಪಿಪ್ಪಲಾದರಿಗೆ ಬಹಳ ಸಂತೋಷವಾಯಿತು. ಓಂಕಾರದ ಉಪಾಸನೆ ದೊಡ್ಡ ಸಾಧಕರಿಗೆ ಮಾತ್ರ ದಕ್ಕುವಂತಹ ಉಪಾಸನೆ. ಸಾಮಾನ್ಯವಾಗಿ ಓಂಕಾರದಿಂದ ಭಗವಂತನ ಉಪಾಸನೆಯನ್ನು ಮಾಡುವವರು ಯತಿಗಳು. ಗೃಹಸ್ಥರಾದವರು ಹತ್ತಕ್ಕಿಂತ ಹೆಚ್ಚು ಬಾರಿ ಓಂಕಾರ ಜಪ ಮಾಡುವುದರಿಂದ ಅವರಿಗೆ ಸಂಸಾರಿಕ ಜೀವನದಲ್ಲಿ ಜಿಗುಪ್ಸೆ ಬರಬಹುದು ಎನ್ನುತ್ತಾರೆ. ಆದರೆ ಓಂಕಾರದ ಅರ್ಥಾನುಸಂಧಾನ ಯಾರು ಬೇಕಾದರೂ ಮಾಡಬಹುದು. ಓಂಕಾರದ ಅರ್ಥಚಿಂತನೆ ಮಾಡಿ ಎತ್ತರಕ್ಕೇರಲು ಯಾವುದೇ ಅಡ್ಡಿ ಇಲ್ಲ.
'ಓಂ-ಕಾರ' ಅಂದರೆ 'ಓಂ' ಎನ್ನುವ ಅಕ್ಷರದಿಂದ ಕರೆಯಲ್ಪಡುವ ಪರತತ್ತ್ವ. ಇಲ್ಲಿ ಪಿಪ್ಪಲಾದರು ಹೇಳುತ್ತಾರೆ: "ಪರಬ್ರಹ್ಮ ಮತ್ತು ಅಪರಬ್ರಹ್ಮ ಎರಡೂ ಆ ಓಂಕಾರ ವಾಚ್ಯ ಭಗವಂತ" ಎಂದು. ಕಾಲತಃ, ದೇಶತಃ ದೂರವಿರುವ ಭಗವಂತ 'ಪರ'; ಕಾಲ ಮತ್ತು ದೇಶತಃ ಸಮೀಪವಿರುವ ಭಗವಂತ 'ಅಪರ'. ಉದಾಹರಣೆಗೆ: ಸ್ವಾಯಂಭುವ ಮನ್ವಂತರದಲ್ಲಿನ ಭಗವಂತನ ಅವತಾರವಾದ: ಕಪಿಲ, ದತ್ತಾತ್ರಯ, ಇತ್ಯಾದಿ ರೂಪಗಳು ಭಗವಂತನ ಬಹಳ ಹಿಂದಿನ ರೂಪವಾದುದರಿಂದ, ಇಂದು ಅದು ನಮಗೆ ಆತನ 'ಪರ-ರೂಪಗಳು'. ಈ ಮನ್ವಂತರದಲ್ಲಿ ಆದ 'ರಾಮ, ಕೃಷ್ಣ, ವೇದವ್ಯಾಸ'-ಇವೆಲ್ಲವೂ ಅಪರ ರೂಪಗಳು. ನನ್ನೊಳಗಿರುವ ಭಗವಂತ ನನಗೆ 'ಅಪರ', ನಿಮಗೆ 'ಪರ'; ಅದೇ ರೀತಿ ನಿಮ್ಮೊಳಗಿರುವ ಭಗವಂತ ನನಗೆ ಪರ ಆದರೆ ನಿಮಗೆ ಅಪರ. ಹೀಗಾಗಿ ಓಂಕಾರ ಹೇಳುವುದು ಒಬ್ಬನೇ ಒಬ್ಬ ಭಗವಂತನನ್ನು. ಅವನೇ ಕಾಲತಃ, ದೇಶತಃ ದೂರದಲ್ಲಿರುವವ; ಅವನೇ ಕಾಲತಃ ದೇಶತಃ ಸಮೀಪವಿರುವ ದೇವರು. ಓಂಕಾರ ಭಗವಂತನ ಯಾವುದೋ ಒಂದು ರೂಪವನ್ನಷ್ಟೇ ಹೇಳುವ ನಾಮವಲ್ಲ. ಇದು ಆತನ ಅನಂತ 'ಪರ-ಅಪರ' ರೂಪಗಳನ್ನು ಹೇಳತಕ್ಕಂತಹ ಏಕಮಾತ್ರ ಬೀಜಾಕ್ಷರ.
ಓಂಕಾರದ ಮೂರು ಅಕ್ಷರಗಳಾದ ಅ-ಕಾರ, ಉ-ಕಾರ ಮತ್ತು ಮ-ಕಾರ ಶಬ್ದದಿಂದ ವಾಚ್ಯನಾದ ಭಗವಂತನ ಗುಣವಿಶೇಷಗಳನ್ನು ತಿಳಿದು, ಉಪಾಸನೆ ಮಾಡುವ ಸಾಧಕ, ಭಗವಂತನ ಮಾರ್ಗದಲ್ಲಿ ನಡೆದು, ಭಗವಂತನನ್ನು ಸೇರುತ್ತಾನೆ. 'ಓಂ' ಎನ್ನುವುದು ಎಲ್ಲಾ ರೂಪಗಳ ಹೆಸರಾದರೂ ಕೂಡಾ, ಇದರಲ್ಲಿರುವ ಪ್ರತೀ ಅಕ್ಷರವೂ ಕೂಡಾ ವಿಶೇಷವಾಗಿ ಜಯ-ವಿಜಯರು ಧೈತ್ಯರಾಗಿ ಹುಟ್ಟಿದಾಗ ಅವರನ್ನು ಸಂಹಾರ ಮಾಡಿ ಶಾಪ ವಿಮೋಚನೆ ಮಾಡಿದ ರೂಪಗಳನ್ನು ಹೇಳುತ್ತವೆ. ಅ-ಕಾರ ಶಿಶುಪಾಲ-ದಂತವಕ್ರರನ್ನು ಸಂಹಾರ ಮಾಡಿದ ಕೃಷ್ಣ ರೂಪವನ್ನು ಹೇಳಿದರೆ, ಉ-ಕಾರ ರಾವಣ-ಕುಂಭಕರ್ಣರನ್ನು ಸಂಹಾರ ಮಾಡಿದ ರಾಮ ರೂಪವನ್ನೂ ಹಾಗೂ ಮ-ಕಾರ ಹಿರಣ್ಯಕಷಿಪುವನ್ನು ಸಂಹಾರ ಮಾಡಿದ ನರಸಿಂಹ ರೂಪವನ್ನೂ ಹೇಳುತ್ತದೆ. ಇದಲ್ಲದೆ, ಓಂಕಾರದಲ್ಲಿರುವ 'ನಾದ' ಹಿರಣ್ಯಾಕ್ಷನನ್ನು ಕೊಂದ ಭಗವಂತನ ವರಾಹ ರೂಪವನ್ನು ಹೇಳುತ್ತದೆ.
ಓಂಕಾರದ ಉಪಾಸನೆಯಲ್ಲಿ ಮೂರು ಮುಖ. ಮೊದಲು ಅ-ಕಾರದ ಉಪಾಸನೆ, ನಂತರ ಅ-ಕಾರದ ಜೊತೆಗೆ ಉ-ಕಾರದ ಉಪಾಸನೆ[ಅಂದರೆ ಓ-ಕಾರದ ಉಪಾಸನೆ]. ನಂತರ ಅ-ಉ ಮತ್ತು ಮ-ಕಾರದಿಂದ ಭಗವಂತನ ಉಪಾಸನೆ. ಈ ರೀತಿ ಓಂಕಾರದಿಂದ ಭಗವಂತನನ್ನು ಉಪಾಸನೆ ಮಾಡುವ ಜ್ಞಾನಿ, ಮೇಲೆ ಹೇಳಿದ ಮೂರು ಲೋಕಗಳಲ್ಲಿ ಒಂದು ಲೋಕವನ್ನು ಸೇರುತ್ತಾನೆ ಎನ್ನುತ್ತಾರೆ ಪಿಪ್ಪಲಾದರು. ಅ-ಕಾರದ ಉಪಾಸನೆಯಿಂದ

ಹೋಗತಕ್ಕ ಲೋಕ ಭೂ-ಲೋಕ; ಉ-ಕಾರದ ಉಪಾಸನೆಯಿಂದ ಸೇರತಕ್ಕ ಲೋಕ ಸ್ವರ್ಗಲೋಕ ಮತ್ತು ಮ-ಕಾರದ ಉಪಾಸನೆಯಿಂದ ಮೋಕ್ಷಲೋಕ ಸಿದ್ಧಿಯಾಗುತ್ತದೆ.

ಇನ್ನು ಉಪಾಸನೆಯ ದೃಷ್ಟಿಯಲ್ಲಿ ನೋಡಿದರೆ: ಓಂಕಾರ ಉಪಾಸನೆಯಲ್ಲಿ ಕೂಡಾ ಮೂರು ವಿಧ. ಅ-ಕಾರದಿಂದ ಉಪಾಸನೆ ಮಾಡುವವರಿಗೆ ಬಾಹ್ಯ ಪ್ರತಿಮೆಯಲ್ಲಿ ಭಗವಂತನ ಪೂಜೆ; ಉ-ಕಾರದಲ್ಲಿ ಉಪಾಸನೆ ಮಾಡುವವರಿಗೆ ಮನಸ್ಸಿನಲ್ಲಿ ಭಗವಂತನ ಪೂಜೆ; ಮ-ಕಾರದಲ್ಲಿ ಉಪಾಸನೆ ಮಾಡುವವರಿಗೆ ಸ್ವರೂಪದಿಂದ ಭಗವಂತನ ದರ್ಶನ. ಈ ಉಪಾಸನೆಗನುಗುಣವಾಗಿ ಭೂಲೋಕ, ಸ್ವರ್ಗಲೋಕ ಮತ್ತು ಮೋಕ್ಷಲೋಕದಲ್ಲಿ ಅದರ ಫಲ ಸಿಗುತ್ತದೆ.

[ಓಂಕಾರದ ವಿಶೇಷ ಅರ್ಥ ವಿವರಣೆಯನ್ನು ಈ ಅಧ್ಯಾಯದ ಕೊನೆಯಲ್ಲಿ ವಿಶೇಷ ಪರಿಶಿಷ್ಠದಡಿಯಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ. ಆಸಕ್ತ ಓದುಗರು ಮೊದಲು ಈ ಪರಿಶಿಷ್ಠವನ್ನು ಓದಿಕೊಂಡು ಮುಂದುವರಿಯಬೇಕಾಗಿ ವಿನಂತಿ].

*ಸ ಯದ್ಯೇಕಮಾತ್ರಮಭಿಧ್ಯಾಯೀತ ಸ ತೇನೈವ ಸಂವೇದಿತಸ್ತೂರ್ಣಮೇವ ಜಗತ್ಯಾಮಭಿಸಂಪದ್ಯತೇ । ತಮೃಚೋ ಮನುಷ್ಯಲೋಕಮುಪನಯಂತೇ । ಸ ತತ್ರ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ಸಂಪನ್ನೋ ಮಹಿ-ಮಾನಮನುಭವತಿ ॥೩॥*

ಓಂಕಾರದಲ್ಲಿ ಒಂದು ಮಾತ್ರೆಯ ಉಪಾಸನೆ ಮಾಡುವುದರ ಫಲವೇನು ಎನ್ನುವುದನ್ನು ಇಲ್ಲಿ ವಿವರಿಸಲಾಗಿದೆ. ಇಲ್ಲಿ ಒಂದು ಮಾತ್ರೆ ಎಂದರೆ ಓಂಕಾರದಲ್ಲಿ ಅ-ಕಾರ ವಾಚ್ಯನಾದ ಭಗವಂತನ ರೂಪದ ಉಪಾಸನೆ. ಒಂದು ಮಾತ್ರೆಯ ಉಪಾಸನೆಯಲ್ಲಿ ಜಪ ಮಾಡುವಾಗ 'ಓಂ' ಎಂದು ಜಪ ಮಾಡುವುದೇ ಹೊರತು, 'ಅ' ಎಂದಲ್ಲ. ಹಾಗೆ ಓಂಕಾರ ಜಪ ಮಾಡುವಾಗ ಅಲ್ಲಿ ಉಳಿದ ಅರ್ಥದ ಅನುಸಂಧಾನ ಮಾಡದೇ, ಕೇವಲ ಅ-ಕಾರಕ್ಕೆ ಒತ್ತುಕೊಟ್ಟು ಉಪಾಸನೆ ಮಾಡುವುದರಿಂದ, ಇದನ್ನು ಒಂದು ಮಾತ್ರೆಯ ಉಪಾಸನೆ ಎನ್ನುತ್ತಾರೆ. ಈ ರೀತಿ ಉಪಾಸನೆ ಮಾಡಿದವರು, ತಮ್ಮ ಉಪಾಸನೆಯ ಫಲವಾಗಿ, ಮುಂದಿನ ಜನ್ಮದಲ್ಲಿ ಋಗ್ವೇದದ ಮಂತ್ರಾಭಿಮಾನಿದೇವತೆಗಳ ಆಶೀರ್ವಾದದೊಂದಿಗೆ, ಭೂಲೋಕದಲ್ಲಿ, ಮನನಮಾಡುವ ಜ್ಞಾನಿಗಳ ಸಮುದಾಯದಲ್ಲಿ, ಬಹಳ ಎತ್ತರದ ವ್ಯಕ್ತಿಯಾಗಿ ಹುಟ್ಟುತ್ತಾರೆ. ಅಂದರೆ ಅತ್ಯಂತ ಶ್ರೇಷ್ಠವಾದ ಭಗವಂತನ ಬಾಹ್ಯ ಪ್ರತೀಕದ ಉಪಾಸನೆ ಮಾಡುವ ಭಾಗ್ಯ ಅ-ಕಾರ ಉಪಾಸಕರಿಗೆ ಸಿಗುತ್ತದೆ.

ಅ-ಕಾರ ಉಪಾಸನೆಯ ಫಲವಾಗಿ, ಭೂಲೋಕದಲ್ಲಿ ಮತ್ತೆ ಹುಟ್ಟಿಬಂದವರು ತಪಸ್ಸು, ಬ್ರಹ್ಮಚರ್ಯ ಮತ್ತು ಶ್ರದ್ಧೆ ಎನ್ನುವ ಮಹಾನ್ ಸಂಪತ್ತಿನೊಂದಿಗೆ, ಬಹಳ ಎತ್ತರದ ಸ್ಥಾನದಲ್ಲಿ, ಗೌರವಾನ್ವಿತ ವ್ಯಕ್ತಿಯಾಗಿ ಬದುಕುತ್ತಾರೆ. [ಉದಾಹರಣೆಗೆ ಉಡುಪಿಯ ಕೃಷ್ಣನನ್ನು ಪೂಜಿಸುವ ಯತಿಗಳು. ಅವರು ತಮ್ಮ ಹಿಂದಿನ ಜನ್ಮದಲ್ಲಿ ಅ-ಕಾರ ದಿಂದ ಭಗವಂತನನ್ನು ಆರಾಧಿಸಿ, ಇಂದು ಅಂತಹ ಪರಮ ಪವಿತ್ರ ಸ್ಥಾನವನ್ನು ಪಡೆದಿದ್ದಾರೆ ಎನ್ನಬಹುದು. ಅ-ಕಾರ ಉಪಾಸನೆಯ ಫಲವನ್ನು ಪೂರ್ಣಪ್ರಮಾಣದಲ್ಲಿ ಆಚರಣೆಗೆ ತರಬೇಕು ಎನ್ನುವ ಸಂಕಲ್ಪದಿಂದ ಆಚಾರ್ಯರು ಉಡುಪಿಯಲ್ಲಿ ಕೃಷ್ಣನನ್ನು ಪ್ರತಿಷ್ಠಾಪನೆ ಮಾಡಿದರು ಎಂದರೆ ತಪ್ಪಾಗಲಾರದು].

ಇಲ್ಲಿ ತಪಸ್ಸು, ಬ್ರಹ್ಮಚರ್ಯ ಮತ್ತು ಶ್ರದ್ಧೆ ಎನ್ನುವ ಸಂಪತ್ತು ಎಂದಿದ್ದಾರೆ. ತಪಸ್ಸು ಎಂದರೆ ಕಾಡಿಗೆ ಹೋಗಿ ಧ್ಯಾನ ಮಾಡುವುದು ಎಂದರ್ಥವಲ್ಲ. ನಿರಂತರ ಶಾಸ್ತ್ರ ಚಿಂತನೆ ಮಾಡಿ, ಶಾಸ್ತ್ರವನ್ನು ತಿಳಿದು, ಪಾಠಪ್ರವಚನದ ಮೂಲಕ, ಜ್ಞಾನವನ್ನು ಇನ್ನೊಬ್ಬರಿಗೆ ಹಂಚುವುದು ತಪಸ್ಸು. ಅದೇ ರೀತಿ ಬ್ರಹ್ಮಚರ್ಯ ಎಂದರೆ: ಇಂದ್ರಿಯ ನಿಗ್ರಹದ ಮೂಲಕ ವೇದಾಧ್ಯಯನ, ಹಾಗೂ ವೇದಾಧ್ಯಯನದ ಮೂಲಕ ಭಗವಂತನ ಜ್ಞಾನ. ತಪಸ್ಸು ಮತ್ತು ಬ್ರಹ್ಮಚರ್ಯದ ಹಿಂದೆ

ಅತ್ಯಂತ ಮುಖ್ಯವಾಗಿ ಬೇಕಾಗಿರುವ ಸಂಪತ್ತು ಶ್ರದ್ಧೆ. ಶ್ರದ್ಧೆ ಇಲ್ಲದೆ ಮಾಡುವ ಕ್ರಿಯೆ ಕೇವಲ ಭೂಟಾಟಿಕೆಯಾಗುತ್ತದೆ. ಶ್ರದ್ಧೆ ಅಂದರೆ ಆಸ್ತಿಕ್ಯ(ಶ್ರತ್)ದ ಧಾರಣೆ. ನಾವು ಏನನ್ನು ಹೇಳುತ್ತೇವೆ, ಮೊದಲು ಅದನ್ನು ನಂಬಬೇಕು. ನಂಬಿ ಹೇಳಬೇಕು. ಹೀಗೆ ನಂಬುವ ಮತ್ತು ನಂಬಿಸುವ ಕ್ರಿಯೆ ಶ್ರದ್ಧೆ. ಯಾರಿಗೆ ಶ್ರದ್ಧೆ ಇಲ್ಲವೋ ಅವರು ವೇದಾಂತ ಹೇಳಿದರೆ ಅದು ವ್ಯರ್ಥ!

*ಅಥ ಯದಿ ದ್ವಿಮಾತ್ರೇಣ ಮನಸಿ ಸಂಪದ್ಯತೇ ಸೋಽನ್ತರಿಕ್ಷಂ ಯಜುರ್ಭಿರುನ್ನೀಯತೇ ಸೋಮಲೋಕಂ ಸ ಸೋಮಲೋಕೇ ವಿಭೂತಿಮನುಭೂಯಪುನರಾವರ್ತತೇ ॥೪॥*

ಏಕ ಮಾತ್ರೆಯ ನಂತರ ದ್ವಿಮಾತ್ರೆ. ಅ-ಕಾರ ಮತ್ತು ಉ-ಕಾರ ಅಥವಾ ಓ-ಕಾರದಿಂದ ಭಗವಂತನ ಉಪಾಸನೆ. ಸರ್ವವಿಲಕ್ಷಣ, ಸರ್ವದೋಷದೂರ, ಸರ್ವಗುಣಪರಿಪೂರ್ಣ ಎನ್ನುವುದು ಅ-ಕಾರದ ಉಪಾಸನೆಯ ಒಂದು ಮುಖ. ಇದು ಎಚ್ಚರಾವಸ್ಥೆಯ ಪ್ರತಿಯೊಂದು ಹಂತದಲ್ಲಿ, ಎಚ್ಚರದ ಅನುಭವ ಕೊಡತಕ್ಕಂತಹ ಭಗವಂತನ ಉಪಾಸನೆ. ಇನ್ನು ಉ-ಕಾರ ಎಂದರೆ ಉತ್ಕರ್ಷ. ಹೊರಗಿನ ಪ್ರಪಂಚದಲ್ಲಿ ಕಂಡ ಅನುಭವವನ್ನು ಒಳಗೆ ಎಳೆದುಕೊಳ್ಳುವುದು. ಅಂದರೆ ಕನಸಿನ ಅವಸ್ಥೆಯಲ್ಲಿ ನಮ್ಮನ್ನು ನಿಯಮಿಸುವ ಭಗವಂತನ ಉಪಾಸನೆ. ಹೀಗೆ ಅ-ಕಾರ ಮತ್ತು ಉ-ಕಾರ ಎರಡರಿಂದಲೂ ಭಗವಂತನ ಉಪಾಸನೆ ಮಾಡಿದರೆ, ಆಗ ನಮ್ಮ ಮಾನಸಲೋಕದಲ್ಲಿ ಭಗವಂತನ ರೂಪ ಕಾಣಲಾರಂಭಿಸುತ್ತದೆ. ಆದರೆ ಇದು ಮನಸ್ಸೇ ಕಡೆದ ಭಗವಂತನ ಮಾನಸ ಪ್ರತೀಕವೇ ಹೊರತು, ಭಗವಂತನ ಸ್ವರೂಪರೂಪವಲ್ಲ. ಈ ರೀತಿ ದ್ವಿಮಾತ್ರೆಯಿಂದ ಭಗವಂತನ ಉಪಾಸನೆ ಮಾಡುವವರನ್ನು, ಯಜುರ್ವೇದದ ಮಂತ್ರಾಭಿಮಾನಿದೇವತೆಗಳು, ಸ್ವರ್ಗಲೋಕದಲ್ಲಿ ಅತ್ಯುನ್ನತ ಸ್ಥಾನವಾದ, ಚಂದ್ರಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ. ಚಂದ್ರಲೋಕವನ್ನು ಸೇರಿದ 'ಜೀವ' ಅಲ್ಲಿ ಹಲವು ಕಾಲ ದಿವ್ಯ ಸುಖವನ್ನು ಅನುಭವಿಸಿ, ಮರಳಿ ಭೂಮಿಯಲ್ಲಿ ಹುಟ್ಟಿ, ಭೂಲೋಕದಲ್ಲಿ ತನ್ನ ಸಾಧನೆ ಮುಂದುವರಿಸುತ್ತಾನೆ.

ಏಕಮಾತ್ರೆ ಉಪಾಸನೆ ಅಂದರೆ: ಋಗ್ವೇದದಿಂದ ಭಗವಂತನನ್ನು ಕಾಣುವುದು. ["ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಂ" ಎಂದು ಆರಂಭವಾಗುವ ಋಗ್ವೇದದ ಸಂಕ್ಷಿಪ್ತ ಅಕ್ಷರ(abbreviation) 'ಅ-ಕಾರ]. ಋಗ್ವೇದದಲ್ಲಿ ಅನೇಕ ಸ್ತುತಿಗಳಿವೆ. ಅವು ಅನೇಕ ದೇವತೆಗಳ ಹೆಸರನ್ನು ಹೇಳುತ್ತವೆ. ಉದಾಹರಣೆಗೆ ಅಗ್ನಿ, ವಾಯು ಇತ್ಯಾದಿ. ಇಲ್ಲಿ ಈ ಶಬ್ದಗಳನ್ನು ಭಗವಂತನ ಪರ ಅರ್ಥಮಾಡಿಕೊಂಡಾಗ, ಇಡೀ ಋಗ್ವೇದ ಭಗವಂತನ ಪರವಾಗಿ ಅರ್ಥವಾಗುತ್ತದೆ. ಅಗ್ನಿ= ಅ+ಗ+ನಿ. ಚಲನೆ ಇಲ್ಲದ ವಸ್ತುವಿಗೆ(ಅಗ) ಚಲನೆ ಕೊಡುವವನು-ಅಗ-ನಿ. ಭಗವಂತ ಇಡೀ ವಿಶ್ವಕ್ಕೆ ಚಲನೆ ಕೊಡುವವ. ಆದ್ದರಿಂದ ಆತ ಅಗ್ನಿ. ಹೀಗೆ ಋಗ್ವೇದದಲ್ಲಿ ಬರುವ ಪ್ರತೀ ದೇವತಗಳ ಹೆಸರನ್ನು ಭಗವಂತನ ಪರ ಮಾಡಿ, ಉಪಾಸನೆ ಮಾಡಿದಾಗ, ಅದು ಏಕಮಾತ್ರೆ ಉಪಾಸನೆಯಾಗುತ್ತದೆ.

ದ್ವಿಮಾತ್ರೆ ಉಪಾಸನೆ ಎಂದರೆ ಅದು ಯಜುರ್ವೇದದಿಂದ ಭಗವಂತನನ್ನು ಕಾಣುವುದು. ಇದು ಏಕಮಾತ್ರೆ ಉಪಾಸನೆಗಿಂತ ಕಷ್ಟದ ಉಪಾಸನೆ. ಏಕೆಂದರೆ ಯಜುರ್ವೇದ ಋಗ್ವೆದದಂತೆ ಭಗವಂತನ ಸ್ತುತಿ ಅಲ್ಲ. ಅಲ್ಲಿ ಹೆಚ್ಚಾಗಿ 'ಕರ್ಮಕಾಂಡ'ವನ್ನು ಕಾಣುತ್ತೇವೆ. ಉದಾಹರಣೆಗೆ: "ವಸಂತೇ ವಸಂತೇ ಜ್ಯೋತಿಷಾ ಯಜೇತಾ": ಇದರ ನೇರ ಅರ್ಥ: "ಪ್ರತಿಯೊಂದು ವಸಂತದಲ್ಲೂ ಜ್ಯೋತಿಷ್ಟೋಮಯಾಗ ಮಾಡು" ಎಂದರ್ಥ. ಇದನ್ನು ಭಗವಂತನ ಪರ ಮಾಡುವುದು ಹೇಗೆಂದರೆ: ಇಲ್ಲಿ ಬರುವ ಪ್ರತಿಯೊಂದು ಪದವನ್ನೂ ಭಗವಂತನ ಪರ ಮಾಡಿ ಅರ್ಥ ಮಾಡಬೇಕು. ಹಾಗೆ ಮಾಡಿದಾಗ: ವಸಂತೇ ಅಂದರೆ: ಎಲ್ಲವುದರ ಒಳಗೂ ವಾಸ ಮಾಡುವವನು, ಎಲ್ಲೆಡೆ ತುಂಬಿರುವವನು

ಎನ್ನುವ ಅರ್ಥವನ್ನು ಕೊಡುತ್ತದೆ. ಅದೇ ರೀತಿ 'ಜ್ಯೋತಿಷಾ'. ಇಲ್ಲಿ ಷ-ಕಾರೋ ಪ್ರಾಣೋ ಆತ್ಮಾ. ಅಂದರೆ ಸರ್ವಚೇಷ್ಟಕತ್ವ. ಆದ್ದರಿಂದ ಸ್ವಯಂ ಪ್ರಕಾಶಸ್ವರೂಪನೂ ಸರ್ವಚೇಷ್ಟಕನೂ ಆದವ ಜ್ಯೋತಿಷಾ. ಇನ್ನು 'ಆಯುಜೇತಾ' ಎಂದರೆ: ಎಲ್ಲಾ ಯಜ್ಞಗಳಿಂದ ಪೂಜಿತನಾದವನು ಎಂದರ್ಥ. ಈ ಎಲ್ಲಾ ಅರ್ಥಗಳಿಂದ ನೋಡಿದಾಗ, ಮೇಲಿನ ಮಂತ್ರ ಸಂಪೂರ್ಣ ಭಗವದ್ ಪರ ಅರ್ಥವನ್ನು ಕೊಡುತ್ತದೆ. ಇದು ದ್ವಿಮಾತ್ರೆಯಿಂದ ಭಗವಂತನ ಉಪಾಸನೆ ಮಾಡುವವರು ಯಜುರ್ವೇದದಲ್ಲಿ ಭಗವಂತನನ್ನು ಕಾಣುವ ವಿಧಾನ.

ಎಲ್ಲಕ್ಕಿಂತ ಕ್ಲಿಷ್ಟಕರವಾದುದು ತ್ರಿಮಾತ್ರೆ ಉಪಾಸನೆ. ಇದು ಮ-ಕಾರದ ಉಪಾಸನೆ ಅಥವಾ ಸಾಮವೇದದಿಂದ ಭಗವಂತನನ್ನು ಕಾಣುವ ಉಪಾಸನೆ. ಸಾಮವೇದದಲ್ಲಿ ಯಾವುದೇ ಸ್ವತಂತ್ರವಾದ ವಿಶೇಷ ಮಂತ್ರಗಳಿಲ್ಲ. ಅಲ್ಲಿರುವುದು ಋಗ್ವೇದದ ಮಂತ್ರಗಳು ಮತ್ತು ಕೆಲವು ಯಜುರ್ವೇದದ ಮಂತ್ರಗಳು. ಸಾಮವೇದದ ವಿಶೇಷತೆ 'ನಾದ'. ಕೇವಲ ಶಬ್ದಗಳಲ್ಲಷ್ಟೇ ಭಗವಂತನನ್ನು ಹೇಳುವುದಲ್ಲ, ಈ ಪ್ರಪಂಚದಲ್ಲಿನ ಎಲ್ಲಾ ನಾದಗಳೂ ಭಗವಂತನನ್ನು ಹೇಳುತ್ತವೆ- ಎಂದು ಉಪಾಸನೆ ಮಾಡುವುದು ತ್ರಿಮಾತ್ರೆ ಉಪಾಸನೆ. "ಸರ್ವೈಃ ಶಬ್ದ್ಯೈಃ ಘೋಷ್ಯಸ್ಯ ನೀಯತೇ ಇತಿ ಮಃ". ಅಂದರೆ ಎಲ್ಲಾ ನಾದಗಳಿಂದ ವಾಚ್ಯನಾದವನು ಮ-ಕಾರ ವಾಚ್ಯ ಭಗವಂತ ಎಂದರ್ಥ. ನಾದದಿಂದ ಭಗವಂತನ ಉಪಾಸನೆ ಬಹಳ ಕಷ್ಟದ ಕೆಲಸ! ಇದನ್ನು ಅರ್ಥ ಮಾಡಿಕೊಳ್ಳಲು ಆಚಾರ್ಯರು ಕೊಟ್ಟ ಒಂದು ಉದಾಹರಣೆಯನ್ನು ನೋಡಿದರೆ, ನಮಗೆ ನಾದದಲ್ಲಿ ಭಗವಂತನನ್ನು ಹೇಗೆ ಕಾಣಬಹುದು ಎನ್ನುವುದು ಕಿಂಚಿತ್ ಅರ್ಥವಾಗಬಹುದು. ನಮಗೆ ತಿಳಿದಂತೆ ಆಗಾಗ ನಮ್ಮ ಮನೆಗಳಲ್ಲಿ ಹಲ್ಲಿ ಲೊಚಗುಟ್ಟುತ್ತಿರುತ್ತದೆ. ಇದನ್ನು ನಾವು ಸೂಕ್ಷ್ಮವಾಗಿ ಗಮನಿಸಿದರೆ, ನಾವೂ ಕೂಡಾ ನಮಗೆ ಬಹಳ ಆಶ್ಚರ್ಯವಾದಾಗ 'ಅದ್ಭುತ' ಎನ್ನುವುದನ್ನು ವ್ಯಕ್ತಪಡಿಸಲು ನಮ್ಮ ಬಾಯಿಯಿಂದ ಹಲ್ಲಿಯಂತೆ ಶಬ್ದ ಮಾಡುತ್ತೇವೆ. ಈ ರೀತಿ ಸಂಬಂಧಕಲ್ಪಿಸಿ ಯೋಚಿಸಿದರೆ: "ಭಗವಂತ ಅದ್ಭುತ" ಎನ್ನುವುದು ಹಲ್ಲಿಯ ನಾದದ ಅರ್ಥ! ಹೀಗೆ ಭಗವಂತನನ್ನು ಹೇಳದೇ ಇರುವ ಒಂದು ಶಬ್ದ, ಒಂದು ನಾದ ಈ ಪ್ರಪಂಚದಲ್ಲಿಲ್ಲ. ಮೂರು ಮಾತ್ರೆಯ ಉಪಾಸಕರು ನಾದೋಪಾಸನೆಯಿಂದ ತಮ್ಮ ಸ್ವರೂಪದಲ್ಲಿ ಭಗವಂತನನ್ನು ಕಂಡು, ಯಾವ ಫಲವನ್ನು ಪಡೆಯುತ್ತಾರೆ ಎನ್ನುವುದನ್ನು ಮುಂದಿನ ಗದ್ಯ ಭಾಗದಲ್ಲಿ ಪಿಪ್ಪಲಾದರು ವಿವರಿಸುತ್ತಾರೆ.

*ಯಃ ಪುನರೇತಂ ತ್ರಿಮಾತ್ರೇಣೋಮಿತ್ಯೇತೇನೈವಾಕ್ಷರೇಣ ಪರಂ ಪುರುಷಮಭಿಧ್ಯಾಯೀತ ಸ ತೇಜಸಿ ಸೂರ್ಯೇ ಸಂಪನ್ನೋ ಯಥಾ ಪಾದೋದರಸ್ತ್ವಚ ವಿನಿರ್ಮುಚ್ಯತೇ ಏವಂ ಹ ವೈ ಸ ಪಾಪ್ಮನಾ ವಿನಿರ್ಮುಕ್ತಃ ಸ ಸಾಮಭಿರುನ್ನೀಯತೇ ಬ್ರಹ್ಮಲೋಕಮ್ ॥೫॥*

ಮೇಲೆ ವಿವರಿಸಿದಂತೆ ತ್ರಿಮಾತ್ರೆ ಉಪಾಸನೆ ಅಂದರೆ 'ಮ' ಕಾರದ ಉಪಾಸನೆ; ನಾದ ಅಥವಾ ಸಂಗೀತದಿಂದ ಭಗವಂತನ ಉಪಾಸನೆ; ಸಾಮವೇದದಿಂದ ಭಗವಂತನ ಉಪಾಸನೆ. ಈ ಪ್ರಪಂಚದಲ್ಲಿರುವ ಎಲ್ಲಾ ನಾದಗಳೂ, ಎಲ್ಲಾ ಭಾಷೆಗಳೂ, ಭಗವಂತನನ್ನೇ ಹೇಳುತ್ತವೆ. ಪಕ್ಷಿಗಳ ಚಿಲಿಪಿಲಿ, ಪ್ರಾಣಿಗಳ ಕೂಗು, ನೀರಿನ ಝುಳು-ಝುಳು, ಸಮುದ್ರದ ಮೊರೆತ, ಗಾಳಿಯ ಸುಯಿಲು, ಎಲೆಗಳ ಮರ್ಮರ, ಎಲ್ಲಾ ಸಮಸ್ತ ನಾದದಲ್ಲೂ ಭಗವಂತನನ್ನು ಕಂಡು ಉಪಾಸನೆ ಮಾಡುವುದು ತ್ರಿಮಾತ್ರೆಯ ಉಪಾಸನೆ.

ಋಗ್ವೇದದ ಮಂತ್ರಗಳಲ್ಲಿ ಬರುವ ಶಬ್ದಗಳನ್ನು ಒಡೆದು, ಅದರಲ್ಲಿ ನಾದವನ್ನು ತುಂಬಿ, ನಾದದ ಅರ್ಥವನ್ನು ಹುಡುಕತಕ್ಕ ಉಪಾಸನೆ ಸಾಮವೇದದ ಉಪಾಸನೆ. ಉದಾಹರಣೆಗೆ: ಋಗ್ವೇದದಲ್ಲಿ ಅಗ್ನಿಮೀಳೇ... ಎಂದು

ಹೇಳಿದರೆ, ಸಾಮವೇದದಲ್ಲಿ ಅಗ್ನಿ ಪದವನ್ನು ಒಡೆದು "ಅಗ್ನಆಯಾಹೀ" ಎಂದು ನಾದ ತುಂಬಿ ಹೇಳುತ್ತಾರೆ. ಇದು ಸಂಗೀತದ ಉಪಾಸನೆ.

ಒಂದು ಕಡೆ ಯಾಜ್ಞವಲ್ಕ್ಯರು ಹೇಳುತ್ತಾರೆ: "ವೀಣಾವಾದನ ತತ್ತ್ವಜ್ಞಃ ಪರಮ್ ಬ್ರಹ್ಮಾದಿಗಚ್ಛತಿ" ಎಂದು. ಅಂದರೆ "ವೀಣೆ ಬಾರಿಸಲು ಬಂದರೆ ಭಗವಂತನನ್ನು ಕಾಣುವುದು ಸುಲಭ" ಎಂದರ್ಥ! ಏಕೆಂದರೆ ವೀಣೆ ಬಾರಿಸಲು ನಾದ ಜ್ಞಾನ ಬೇಕು. ಶ್ರುತಿ, ಲಯದ ಜೊತೆಗೆ ತನ್ಮಯತೆ, ಏಕಾಗ್ರತೆ ಬೇಕು. ಅದು ಬಂದರೆ ಭಗವಂತನನ್ನು ತಿಳಿಯುವುದು ಸುಲಭ. ನಾದದ ಬಗ್ಗೆ ಹಿಂದಿನ ವೈದಿಕ ಪರಂಪರೆಯಲ್ಲಿ ಅಪಾರ ಕಾಳಜಿ ಇತ್ತು. ವೀಣಾವಾದನ ತಿಳಿದವರು ವೇದವನ್ನು ಸ್ಪಷ್ಟವಾಗಿ ಶ್ರುತಿಬದ್ಧವಾಗಿ ಹೇಳಬಲ್ಲರು. ತ್ರಿಮಾತ್ರೆ ಉಪಾಸನೆ ಅಂದರೆ ಮಂತ್ರಗಳನ್ನು, ಪದಗಳನ್ನು, ಅಕ್ಷರಗಳನ್ನು ಮತ್ತು ನಾದವನ್ನೂ ಕೂಡಾ ಭಗವಂತನಪರ ಮಾಡುವಂತಹ 'ಮ'-ಕಾರ ವಾಚ್ಯ ಭಗವಂತನ ಉಪಾಸನೆ. ಇದು ನಿದ್ರೆಯಲ್ಲೂ ಕೂಡಾ ಭಗವಂತ ನಮಗೆ ಆನಂದವನ್ನಿತ್ತು ರಕ್ಷಿಸುತ್ತಾನೆ ಎನ್ನುವ ಉಪಾಸನೆ.

ಈ ಹಿಂದೆ ಹೇಳಿದಂತೆ ಮ-ಕಾರ ನರಸಿಂಹ ರೂಪದಲ್ಲಿ ಪ್ರತಿಪಾದ್ಯನಾದ ಭಗವಂತನನ್ನು ಹೇಳುತ್ತದೆ. ಇದು ದುಷ್ಟರನ್ನು ನಿರ್ನಾಮ ಮಾಡತಕ್ಕ ಮಹಾಶಕ್ತಿ. ನಮ್ಮೆಲ್ಲಾ ದೋಷಗಳನ್ನು ಕಳೆದುಕೊಂಡು, ಪುಟಕ್ಕಿಟ್ಟ ಚಿನ್ನದಂತೆ ಅಪ್ಪಟ ಬಂಗಾರವಾಗುವುದು 'ಮ'ಕಾರ ಉಪಾಸನೆಯಿಂದ. ಈ ರೀತಿ ಒಳಗೂ ಹೊರಗೂ ಮ-ಕಾರದಿಂದ ಓಂಕಾರ ವಾಚ್ಯನಾದ ಭಗವಂತನನ್ನು ಉಪಾಸನೆ ಮಾಡಿದರೆ, ಸೂರ್ಯಲೋಕವನ್ನು ಸೇರಿ, ಅಲ್ಲಿಂದ ಭಗವಂತನೆಂಬ ಮಹಾಜ್ಯೋತಿಕಡೆಗೆ ನಾವು ಸಾಗಬಹುದು. ಇಲ್ಲಿ ಸೂರ್ಯಲೋಕ ಎಂದರೆ ನಮಗೆ ಕಾಣುವ ಸೂರ್ಯಗ್ರಹವಲ್ಲ. ಇದು ದೇವತೆಗಳಿರುವ ಸೂಕ್ಷ್ಮಲೋಕ. ಇಲ್ಲಿ ನಾವು ಹಾವು ತನ್ನ ಪೊರೆಯನ್ನು ಕಳಚಿಕೊಂಡಂತೆ ನಮ್ಮೆಲ್ಲಾ ಪಾಪಗಳನ್ನು ಕಳಚಿಕೊಂಡು, ಪರಿಶುದ್ಧರಾಗುತ್ತೇವೆ. ಇಲ್ಲಿಂದ ಸಾಮವೇದದ ಮಂತ್ರಾಭಿಮಾನಿ ದೇವತೆಗಳು ಜೀವನನ್ನು ಸತ್ಯಲೋಕಕ್ಕೆ ಕೊಂಡೊಯ್ಯುತ್ತಾರೆ. ಇದು ಈ ವಿಶ್ವದಲ್ಲಿರುವ ಲೋಕಗಳಲ್ಲೆಲ್ಲಾ ಅತ್ಯುನ್ನತವಾದ ಲೋಕ. ಇಲ್ಲಿಗೆ ತಲುಪಿದ ಜೀವ ಎಂದೂ ಮರಳಿ ಭೂಲೋಕದಲ್ಲಿ ಹುಟ್ಟುವುದಿಲ್ಲ.

*ಸ ಏತಸ್ಮಾಜ್ಜೀವಘನಾತ್ ಪರಾತ್ಪರಂ ಪುರಿಶಯಂ ಪುರುಷಮೀಕ್ಷತೇ ॥೬॥*

ತ್ರಿಮಾತ್ರೆ ಉಪಾಸನೆಯ ಫಲವಾಗಿ ಸತ್ಯಲೋಕವನ್ನು ಸೇರಿದ ಜೀವ, ಸತ್ಯಲೋಕದಲ್ಲಿ, ಜೀವಕಲಾಭಿಮಾನಿಯಾದ ಚತುರ್ಮುಖನ ಉಪದೇಶ ಪಡೆದು, ತನ್ನ ಲಿಂಗಶರೀರವನ್ನೂ ಕಳಚಿಕೊಂಡು, ಸಾಕ್ಷಾತ್ ಭಗವಂತನನ್ನು ಕಾಣುತ್ತಾನೆ ಮತ್ತು ಚತುರ್ಮುಖನೊಂದಿಗೆ ಮೋಕ್ಷವನ್ನು ಸೇರುತ್ತಾನೆ. [ಇಲ್ಲಿ ಭಗವಂತನನ್ನು 'ಪರಿಶಯ' ಎಂದಿದ್ದಾರೆ. ಪರಿಶಯ ಎಂದರೆ ನಮ್ಮ ಹೃದಯವೆಂಬ ಪುರದಲ್ಲಿರುವ ಭಗವಂತ ಎಂದರ್ಥ].

*ತದೇತೌ ಶ್ಲೋಕೌ ಭವತಃ -*

*ತಿಸ್ರೋ ಮಾತ್ರಾ ಮೃತ್ಯುಮತ್ಯಃ ಪ್ರಯುಕ್ತಾ ಅನ್ಯೋನ್ಯಸಕ್ತಾ ಅನವಿಪ್ರಯುಕ್ತಾಃ ।*
*ಕ್ರಿಯಾಸು ಬಾಹ್ಯಾಂತರಮಧ್ಯಮಾಸು ಸಮ್ಯಕ್ ಪ್ರಯುಕ್ತಾಸು ನ ಕಂಪತೇ ಜ್ಞಃ ॥೭॥*

*ಋಗ್ಭಿರೇತಂ ಯಜುರ್ಭಿರಂತರಿಕ್ಷಂ ಸಾಮಭಿರ್ಯತ್ ತತ್ ಕವಯೋ ವೇದಯಂತೇ ।*
*ತಮೋಂಕಾರೇಣಯನೇನಾನ್ವೇತಿ ವಿದ್ವಾನ್ ಯತ್ ತಚ್ಛಾಂತಮಜರಮಮೃತಮಭಯಂ ಪರಂ ಚೇತಿ ॥೮॥*

ಮೇಲೆ ವಿವರಿಸಲಾದ ವಿಷಯಗಳಿಗೆ ಸಂವಾದಿಯಾಗಿ/ಪೂರಕವಾಗಿ ಪಿಪ್ಪಲಾದರು ಎರಡು ವೇದ ಮಂತ್ರಗಳನ್ನು ಉಲ್ಲೇಖ ಮಾಡುತ್ತಾರೆ. ಇಲ್ಲಿ "ತದೇತೌ ಶ್ಲೋಕೌ ಭವತಃ" ಎನ್ನುವಲ್ಲಿ 'ಶ್ಲೋಕ' ಅಂದರೆ ೩೨ ಅಕ್ಷರ ಎಂದರ್ಥವಲ್ಲ. ಭಗವಂತನ ಗುಣಗಾನ ಮಾಡುವ ಮಂತ್ರ ಎಂದರ್ಥ. ಶ್ಲೋಕ ಎಂದರೆ ಕೀರ್ತಿ ಅಥವಾ ಕೀರ್ತನ ಎನ್ನುವ ಅರ್ಥ ಸಂಸ್ಕೃತದಲ್ಲಿದೆ. ಅ-ಕಾರದ ಉಪಾಸನೆಯಾಗಲೀ, ಓ-ಕಾರದ (ಅ ಮತ್ತು ಉ ಕಾರದ) ಉಪಾಸನೆಯಾಗಲೀ, ಅವು ಮೋಕ್ಷವನ್ನು ಕೊಡುವ ಉಪಾಸನೆಗಳಲ್ಲ. ಆದರೆ ಮೂರು ಅಕ್ಷರಗಳನ್ನು ಜೋಡಿಸಿ, ಓಂಕಾರದಿಂದ ಭಗವಂತನ ಮೂರು ರೂಪಗಳ ಉಪಾಸನೆ ಮಾಡಿದರೆ, [ಮೂರು ರೂಪಗಳು ಎಂದರೆ: ಕೃಷ್ಣ, ರಾಮ, ನರಸಿಂಹ ಅಥವಾ ವಿಶ್ವ, ತೈಜಸ, ಪ್ರಾಜ್ಞ ಅಥವಾ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೂಪ ಇತ್ಯಾದಿ] ಆ ಉಪಾಸನೆಯ ಫಲದಿಂದ ನಾವು ಮೃತ್ಯುವನ್ನು ದಾಟಬಹುದು. ಆದ್ದರಿಂದ ಮೃತ್ಯುವನ್ನು ದಾಟಿಸಿ ಮೋಕ್ಷವನ್ನು ಕೊಡುವ ವಿದ್ಯೆ ಈ ತ್ರಿಮಾತ್ರಾ ಉಪಾಸನೆ.

ಉಪಾಸನೆ ಮಾಡುವಾಗ ಓಂಕಾರವನ್ನು ಉಚ್ಛಾರ ಹೇಗೆ ಮಾಡಬೇಕು ಎನ್ನುವುದನ್ನು ವಿವರಿಸುತ್ತಾ, ಇಲ್ಲಿ "ಅನ-ವಿಪ್ರಯುಕ್ತಾಃ" ಎಂದಿದ್ದಾರೆ. ಅಂದರೆ ಉಚ್ಛಾರ ಮಾಡುವಾಗ ಪ್ರಾಣಶಕ್ತಿಯನ್ನು ತುಂಬಿ ಉಚ್ಛಾರ ಮಾಡಬೇಕು. ಆ ಉಚ್ಛಾರದಲ್ಲಿ ಗಾಂಭೀರ್ಯವಿರಬೇಕು. [ಒಂದು ಅಕ್ಷರವನ್ನು ಉಚ್ಛರಿಸುವಾಗ ಎಷ್ಟು ನಿಗಾ ಇರಬೇಕು ಎನ್ನುವುದು ನಮಗೆ ಈ ವಿವರಣೆಯಿಂದ ತಿಳಿಯುತ್ತದೆ. ಹಿಂದಿನ ಕಾಲದಲ್ಲಿ ಜ್ಯೋತಿಷ್ಯ ಮತ್ತು ಆಯುರ್ವೇದಕ್ಕೆ ವ್ಯಕ್ತಿಯ ಬಾಯಿಂದ ಬರುವ ಉಚ್ಛಾರವನ್ನು ಆಧಾರವಾಗಿ ಬಳಸುತ್ತಿದ್ದರು ಎನ್ನುವುದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು].

"ಓಂಕಾರದ ಮೂರು ಅಕ್ಷರಗಳನ್ನು ಒಟ್ಟಿಗೆ ಸೇರಿಸಿ, ಹೊಸ ನಾದವನ್ನು ಸೃಷ್ಟಿಮಾಡಿ, ಬಾಹ್ಯವಾಗಿ, ಮಾನಸಿಕವಾಗಿ, ಅಂತಃಪ್ರಜ್ಞೆಯಿಂದ, ತನ್ಮಯತೆಯಿಂದ, ಓಂಕಾರದಿಂದ ಭಗವಂತನ ಉಪಾಸನೆ ಮಾಡಿದರೆ, ಭಗವಂತನ ರಕ್ಷೆಯಲ್ಲಿ ನಾವು ಸುರಕ್ಷ" ಎನ್ನುತ್ತದೆ ಈ ವೇದಮಂತ್ರ.

ಋಗ್ವೇದದ ದೇವತೆಗಳ ಸಹಾಯದಿಂದ ಅ-ಕಾರದ ಉಪಾಸನೆ ಮಾಡಿದವರು, ಭೂಲೋಕದಲ್ಲಿ ಭಗವಂತನ ಶ್ರೇಷ್ಠವಾದ ಪ್ರತೀಕದ ಆರಾದಕರಾಗಿ ಹುಟ್ಟುತ್ತಾರೆ. ಶತಮಾನಗಳಿಂದ ಜ್ಞಾನಿಗಳು ಪೂಜೆಮಾಡಿ, ವಿಶೇಷ ಸನ್ನಿಧಾನ ತುಂಬಿರುವ, ಪುಣ್ಯಸ್ಥಳದಲ್ಲಿನ ಭಗವಂತನ ಪ್ರತಿಮೆಯ ಆರಾದಕರಾಗಿ, ಇವರು ತಮ್ಮ ಸಾಧನೆಯನ್ನು ಮುಂದುವರಿಸುತ್ತಾರೆ. ಅ-ಕಾರ ಮತ್ತು ಉ-ಕಾರದ ಉಪಾಸನೆ ಮಾಡಿದವರಿಗೆ ಹೃದಯಾಕಾಶದಲ್ಲಿ ಭಗವಂತನ ಪ್ರತೀಕದ ದರ್ಶನವಾಗುತ್ತದೆ. ಮತ್ತು ಅಂತರಿಕ್ಷದಲ್ಲಿನ ಊರ್ಧ್ವಲೋಕ ಪ್ರಾಪ್ತಿಯಾಗುತ್ತದೆ. ಅವರಿಗೆ ಯಜುರ್ವೇದದ ದೇವತೆಗಳು ಇಂತಹ ಭಾಗ್ಯವನ್ನು ಒದಗಿಸಿಕೊಡುತ್ತಾರೆ. ಇನ್ನು ಮೂರೂ ಅಕ್ಷರಳನ್ನು ಸೇರಿಸಿ, ಓಂಕಾರದಿಂದ ಭಗವಂತನ ಉಪಾಸನೆ ಮಾಡಿದರೆ: "ನಮ್ಮ ಹೃತ್ಕಮಲ ಮಧ್ಯದಲ್ಲಿ ಮತ್ತು ಕ್ಷೀರಸಾಗರದಲ್ಲಿ ನೆಲೆಸಿರುವ ಭಗವಂತನ ಸ್ಥಾನವಾದ ಮೋಕ್ಷ ಪ್ರಾಪ್ತಿಯಾಗುತ್ತದೆ.

ಇಲ್ಲಿ ಭಗವಂತನನ್ನು ಶಾಂತಃ, ಅಜರಃ, ಅಮೃತಃ, ಅಭಯಃ ಮತ್ತು ಪರಮ್ ಎಂದು ವಿಶೇಷವಾದ ಹೆಸರಿನಿಂದ ಸಂಬೋಧಿಸಿರುವುದನ್ನು ಕಾಣುತ್ತೇವೆ. ಇವು ಭಗವಂತನ ಗುಣವಾಚಕ ನಾಮಗಳು. ಶಾಂತಃ ಎನ್ನುವಲ್ಲಿ 'ಶ' ಎಂದರೆ ಆನಂದ. ಅಂತಹ ಆನಂದದ ತುತ್ತತುದಿ ಶಾಂತಿ. ಆನಂದದ ಪರಾಕಾಷ್ಠೆಯಲ್ಲಿರುವ ಭಗವಂತ 'ಶಾಂತಃ'. ಸಂಸಾರ ಸಾಗರದಲ್ಲಿರುವ ನಾವು ಒಂದಲ್ಲಾ ಒಂದು ಭಯದಲ್ಲಿ ಬದುಕುತ್ತೇವೆ. ಆದರೆ ದುಃಖದ ಸ್ಪರ್ಶವೇ ಇಲ್ಲದ ಪೂರ್ಣಾನಂದ ಸ್ವರೂಪ ಭಗವಂತ ಅಭಯಃ. ಮುಪ್ಪು ಮತ್ತು ಸಾವಿಗೆ ಒಳಗಾಗದ ಭಗವಂತ 'ಅಮೃತಃ ಮತ್ತು ಅಜರಃ'. ಎಲ್ಲಕ್ಕಿಂತ ಹಿರಿದಾದ ಮತ್ತು ಪರಿಪೂರ್ಣನಾದ ಭಗವಂತ 'ಪರಮ್'.

ವಿ.ಸೂ: ಭಗವಂತನ ಗುಣವಾಚಕ ನಾಮಗಳ ಸುಂದರ ವಿವರಣೆಯನ್ನು ಆಸಕ್ತ ಓದುಗರು 'ವಿಷ್ಣುಸಹಸ್ರನಾಮ ಅರ್ಥಸಹಿತ' ಪುಸ್ತಕದಲ್ಲಿ ಕಾಣಬಹುದು.

*ಇತಿ ಪ್ರಶ್ನೋಪನಿಷದಿ ಪಂಚಮಃ ಪ್ರಶ್ನಃ ॥*

ಇಲ್ಲಿಗೆ ಷಟ್ ಪ್ರಶ್ನ ಉಪನಿಷತ್ತಿನ ಐದನೇ ಪ್ರಶ್ನೆ/ಅಧ್ಯಾಯ ಮುಗಿಯಿತು.

# ಪಂಚಮಃ ಪ್ರಶ್ನಃ ಪರಿಶಿಷ್ಠ-೧

## ॐ-ಓಂಕಾರ ಎನ್ನುವ ಬೀಜಾಕ್ಷರ

ಓಂಕಾರ ಒಂದು ಬೀಜಾಕ್ಷರ. ಈ ಬೀಜಾಕ್ಷರವನ್ನು ಬಿಡಿಸಿದರೆ ಅದು ಸಮಸ್ತ ಭಾರತೀಯ ತತ್ತ್ವ ಶಾಸ್ತ್ರವನ್ನು ತನ್ನ ಗರ್ಭದಲ್ಲಿ ಧರಿಸಿದೆ ಎನ್ನುವುದು ನಮಗೆ ತಿಳಿಯುತ್ತದೆ. ವೇದದ ಸಾರ 'ಓಂಕಾರ'-ಅದೇ ಪ್ರಣವಃ.

ವೇದಗಳು ಅನೇಕ. ಋಗ್ವೇದದಲ್ಲಿ 24 ಶಾಖೆ, ಯಜುರ್ವೇದದಲ್ಲಿ 101 ಶಾಖೆ, ಸಾಮವೇದದಲ್ಲಿ 1000 ಶಾಖೆ, ಅಥರ್ವವೇದದಲ್ಲಿ 12 ಶಾಖೆ. ಹೀಗೆ ಒಟ್ಟು 1137 ಸಂಹಿತೆಗಳು. ಅದಕ್ಕೆ ಅಷ್ಟೇ ಬ್ರಾಹ್ಮಣಗಳು, ಅರಣ್ಯಕಗಳು, ಉಪನಿಷತ್ತುಗಳು. ಹೀಗೆ ವೇದವೆಂದರೆ ವಿಪುಲವಾದ ವೈದಿಕ ವಾಙ್ಮಯ. ಎಷ್ಟೇ ವೇದಗಳಿದ್ದರೂ ಕೂಡಾ, ಮೂಲತಃ ವೇದದಲ್ಲಿ ಪ್ರಮುಖವಾದ ಮೂರು ವಿಭಾಗವಿದೆ. ಪದ್ಯರೂಪ(ಋಗ್ವೇದ), ಗದ್ಯರೂಪ(ಯಜುರ್ವೇದ) ಮತ್ತು ಗಾನರೂಪ(ಸಾಮವೇದ). ಈ ಮೂರು ವೇದಗಳ, ಮೂರು ಅಕ್ಷರಗಳನ್ನು ತೆಗೆದುಕೊಂಡು ನಿರ್ಮಾಣವಾಗಿರುವುದು ಓಂಕಾರ.

"ಓಂಕಾರಕ್ಕೆ ಸಾರತ್ವವನ್ನು ಕೊಟ್ಟು ಸಾರಭೂತನಾಗಿ 'ಪ್ರಣವಃ' ಶಬ್ದವಾಚ್ಯನಾಗಿ ನಾನು ಓಂಕಾರದಲ್ಲಿ ನೆಲೆಸಿದ್ದೇನೆ" ಎಂದು ಗೀತೆಯಲ್ಲಿ ಸ್ವಯಂ ಭಗವಂತನೇ ಹೇಳಿದ್ದಾನೆ(ಗೀತಾ-೭-೦೮). ಇದು ಬಹಳ ವಿಚಾರಗರ್ಭಿತ ಸಂಗತಿ. ಪ್ರಾಚೀನರು ಮೂರು ವೇದಗಳನ್ನು ಭಟ್ಟಿ ಇಳಿಸಿ, ಅದರ ಸಾರವಾದ ಮೂರು ವರ್ಗಗಳ ಒಂದು ಸೂಕ್ತ ಮಾಡಿದರು. ಅದೇ ಪುರುಷಸೂಕ್ತ. ಈ ಕಾರಣದಿಂದ ವೇದಸೂಕ್ತಗಳಲ್ಲೇ ಪುರುಷಸೂಕ್ತ ಅತ್ಯಂತ ಶ್ರೇಷ್ಠವಾದ ಸೂಕ್ತ. ಈ ಸೂಕ್ತವನ್ನು ಮತ್ತೆ ಭಟ್ಟಿಇಳಿಸಿ, ಮೂರು ಪಾದಗಳ ಗಾಯತ್ರಿ ಮಂತ್ರ(ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋನಃ ಪ್ರಚೋದಯಾತ್) ನಿರ್ಮಾಣವಾಯಿತು. ಇಲ್ಲಿ 'ತತ್ ಸವಿತುರ್ ವರೇಣ್ಯಂ' ಋಗ್ವೇದಕ್ಕೆ ಸಂಬಂಧಪಟ್ಟಿದ್ದು, 'ಭರ್ಗೋ ದೇವಸ್ಯ ಧೀಮಹಿ' ಯಜುರ್ವೇದಕ್ಕೆ ಸಂಬಂಧಪಟ್ಟಿದ್ದು, 'ಧೀಯೊ ಯೊ ನಃ ಪ್ರಚೋದಯಾತ್' ಸಾಮವೇದಕ್ಕೆ ಸಂಬಂಧಪಟ್ಟಿದ್ದು. ಹೀಗೆ ಮೂರು ವೇದಗಳ ಸಾರ ಗಾಯತ್ರಿಯ ಮೂರುಪಾದಗಳುಳ್ಳ ಒಂದು ಮಂತ್ರದಲ್ಲಿದೆ. ಇದಕ್ಕಾಗಿ ಗಾಯತ್ರಿ ಮಂತ್ರವನ್ನು 'ವೇದಮಾತಾ' ಎನ್ನುತ್ತಾರೆ. ಈ ಗಾಯತ್ರಿಯಿಂದ ರಸ ತೆಗೆದಾಗ ಮೂರು ಪಾದಗಳಿಂದ ಮೂರು ಪದಗಳುಳ್ಳ ವ್ಯಾಹೃತಿ: "ಭೂಃ ಭುವಃ ಸ್ವಃ". ಈ ಮೂರು ಪದಗಳ ಸಾರ ಮೂರು ಅಕ್ಷರದ(ಅ, ಉ, ಮ) ಓಂಕಾರ-ॐ.

ಓಂಕಾರದಲ್ಲಿ 'ಅ'ಕಾರ ಋಗ್ವೇದಕ್ಕೆ, 'ಉ'ಕಾರ ಯಜುರ್ವೇದಕ್ಕೆ ಮತ್ತು 'ಮ'ಕಾರ ಸಾಮವೇದಕ್ಕೆ ಸಂಬಂಧಪಟ್ಟಿದ್ದು. ಋಗ್ವೇದ " ಅಗ್ನಿಮೀ"ಳೇ ಪುರೋಹಿತಂ ಯಜ್ಞಸ್ಯ ದೇವಂ-ಋತ್ವಿಜಂ" | ಹೋತಾ"ರಂ ರತ್ನ ಧಾತಮಂ |..." ಎಂದು 'ಅ' ಕಾರದಿಂದ ಪ್ರಾರಂಭವಾಗುತ್ತದೆ. ಮತ್ತು "....ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ಹಃ: | ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ ॥" ಎಂದು 'ಇ'ಕಾರದಲ್ಲಿ ಕೊನೆಗೊಳ್ಳುತ್ತದೆ. ಅಲ್ಲಿಂದ

ಮುಂದುವರಿದು ಯಜುರ್ವೇದ "ಇಷೇ ತ್ವೋರ್ಜೆ ತ್ವಾ ..." ಎಂದು 'ಇ'ಕಾರದಿಂದ ಪ್ರಾರಂಭವಾಗಿ "........ಸಮುದ್ರೋ ಬಂಧುಃ" ಎಂದು 'ಉ'ಕಾರದಲ್ಲಿ ಕೊನೆಗೊಳ್ಳುತ್ತದೆ. ಹೀಗೆ ಓಂಕಾರದಲ್ಲಿನ 'ಅ'ಕಾರ ಮತ್ತು 'ಉ'ಕಾರ ಋಗ್ವೇದ ಮತ್ತು ಯಜುರ್ವೇದವನ್ನು ಪೂರ್ಣವಾಗಿ ಸೂಚಿಸುವ ಸಂಕ್ಷೇಪಣಾ(abbreviation)ರೂಪ. ಇಲ್ಲಿಂದ ಮುಂದೆ ಸಾಮವೇದ. ಸಾಮವೇದ "ಅಗ್ನ ಆ ಯಾಹಿ ........." ಎಂದು 'ಅ'ಕಾರದಿಂದ ಆರಂಭವಾಗಿ "......ಬ್ರ್ಹಸ್ಪತಿರ್ದಧಾತು" ಎಂದು 'ಉ'ಕಾರದಲ್ಲಿ ಕೊನೆಗೊಳ್ಳುತ್ತದೆ. ಆದ್ದರಿಂದ ಇಲ್ಲಿ 'ಮ' ಕಾರ ಬಂದಿಲ್ಲ. ಆದರೆ ನಮಗೆ ತಿಳಿದಂತೆ ಸಾಮವೇದ ನಾದ ರೂಪದಲ್ಲಿದೆ. ಓಂಕಾರದಲ್ಲಿ ಕೂಡಾ 'ಮ' ಎನ್ನುವುದು ನಾದರೂಪದಲ್ಲಿ ಹೊರ ಹೊಮ್ಮುವ ಅಕ್ಷರ- ಅದು ಸಂಗೀತ. ಹೀಗೆ ಓಂಕಾರ ವೇದದ ಸಂಕ್ಷೇಪಣಾರೂಪವಾದ ಬೀಜಾಕ್ಷರ. ಇದು ನಮಗೆ ವೇದವನ್ನು ಗುರುತಿಸುವ ಮಾರ್ಗದರ್ಶಿ. ಆದ್ದರಿಂದ ಇದು ಭಗವಂತನನ್ನು ಸ್ತೋತ್ರ ಮಾಡುವ ಮಂತ್ರಗಳಲ್ಲಿ ಅತ್ಯಂತ ಪ್ರಕೃಷ್ಟವಾದುದ್ದು. ಇದಕ್ಕಿಂತ ದೊಡ್ಡ ಸ್ತೋತ್ರಮಾಡುವ ಶಬ್ದ ಈ ಪ್ರಪಂಚದಲ್ಲಿ ಇನ್ನೊಂದಿಲ್ಲ.

ಒಂದು ಮಂತ್ರದ ಕೊನೆಯಲ್ಲಿ ಹೇಳುವ ಓಂಕಾರಕ್ಕೆ ವ್ಯಾಕರಣದ ಪರಿಭಾಷೆಯಲ್ಲಿ 'ಪ್ರಣವಃ' ಎನ್ನುತ್ತಾರೆ. ಆದಿಯಿಂದ ಅಂತದ ತನಕ ಸಮಸ್ತನಾಮ ಪ್ರತಿಪಾದ್ಯ 'ಭಗವಂತ' ಎಂದು ತೋರಿಸುವುದಕ್ಕೆ ಓಂಕಾರವನ್ನು ಆದಿ-ಅಂತದಲ್ಲಿ ಉಚ್ಚಾರ ಮಾಡುತ್ತಾರೆ. ಈ ಕಾರಣಕ್ಕಾಗಿ ಮಂತ್ರದ ಆದಿಯಲ್ಲಿ ಮತ್ತು ಅಂತದಲ್ಲಿ ಬಳಸುವ ಓಂಕಾರವನ್ನು ಎಂದೂ ಪ್ರತ್ಯೇಕವಾಗಿ ಹೇಳಬಾರದು. ಉದಾಹರಣೆಗೆ ವಿಷ್ಣು ಸಹಸ್ರನಾಮದ ಕೊನೆಯಲ್ಲಿ "ಸರ್ವಪ್ರಹರಣಾಯುಧಃ ಓಂ ನಮಃ ಇತಿ" ಎಂದು ಹೇಳದೇ, "ಸರ್ವಪ್ರಹರಣಾಯುಧೋಂ ನಮಃ ಇತಿ" ಎಂದು ಹೇಳಬೇಕು. ಆಯುಧಃ ಎನ್ನುವಲ್ಲಿನ ವಿಸರ್ಗ(ಃ)ವನ್ನು ತೆಗೆದು ಅಲ್ಲಿ 'ಓಂ' ಸೇರಿಸಿ ಅದನ್ನು ಸಮಸ್ತವಾಗಿ ಹೇಳಬೇಕು.

ಪ್ರಣವಃ ವಿಸ್ತೃತವಾದಾಗ ವ್ಯಾಹೃತಿ, ವ್ಯಾಹೃತಿ ವಿಸ್ತಾರವಾಗಿ ಗಾಯತ್ರಿ, ಗಾಯತ್ರಿ ವಿಸ್ತಾರವಾಗಿ ಕುರುಡ ಸೂಕ್ತ, ನಂತರ ಮೂರು ವೇದಗಳು, ಅಲ್ಲಿಂದ ಸಮಸ್ತ ವೇದಗಳು. ಹೀಗೆ ಪ್ರಣವದಲ್ಲಿ, ವ್ಯಾಹೃತಿಯಲ್ಲಿ, ಪುರುಷ ಸೂಕ್ತದಲ್ಲಿ, ಸಮಸ್ತವೇದಗಳಲ್ಲಿ ಭಗವಂತ ನೆಲೆಸಿದ್ದಾನೆ.

ವೇದಗಳಿಂದಲೇ ಹುಟ್ಟಿ ಬಂದ ಪ್ರಪಂಚದ ಎಲ್ಲಾ ಶಬ್ದದಲ್ಲೂ, ಎಲ್ಲಾ ಲೌಕಿಕ ನಾದದಲ್ಲೂ ಭಗವಂತ ತುಂಬಿದ. ಆತ ಆಕಾಶದಲ್ಲಿ ಅನಂತ ಶಬ್ದಗಳನ್ನೂ, ಅನಂತ ನಾದಗಳನ್ನೂ ಸೃಷ್ಟಿ ಮಾಡಿದ. ನಮಗೆ ಶಬ್ದದಿಂದ ಅನಂತ ಅನುಭವವನ್ನು ಕೊಟ್ಟು, ಆ ಶಬ್ದವನ್ನು ಗ್ರಹಿಸುವ ಮತ್ತು ಗ್ರಹಿಸಿ ಪುನರುಚ್ಚರಿಸುವ ವಿಶೇಷ ಶಕ್ತಿಯನ್ನು ಕರುಣಿಸಿದ. ಜ್ಞಾನದ ಮೂಲಕ ಈ ಶಬ್ದ ನಾಮಕ ಭಗವಂತನನ್ನು ತಿಳಿಯುವ ವಿಶೇಷ ಶಕ್ತಿ ಮಾನವನಿಗೆ ಭಗವಂತನ ವಿಶೇಷ ಕೊಡುಗೆ.

ಮೇಲೆ ಹೇಳಿದಂತೆ ಸಮಸ್ತ ವೇದದಲ್ಲಿ ನಾವು ಉಪಾಸನೆ ಮಾಡುವ ಭಗವಂತನ ಎಲ್ಲಾ ಗುಣಗಳನ್ನು ಓಂಕಾರ ಹೇಳುತ್ತದೆ. ಓಂ(ॐ) ಎನ್ನುವುದಕ್ಕೆ ಒಂದು ಅಖಂಡ ಅರ್ಥವಿದೆ. ಓಂಕಾರ 'ಅವ' ಅಥವಾ 'ಉಯಿ' ಎನ್ನುವ ಎರಡು ಧಾತುವಿನಿಂದ ನಿಷ್ಪನ್ನವಾಯಿತು. 'ಅವತಿ ಇತಿ ಓಂ'-ಇಲ್ಲಿ 'ಅವತಿ' ಪದಕ್ಕೆ ಅನೇಕ ಅರ್ಥವಿಶೇಷಗಳಿವೆ.

- 'ಅವ ವ್ಯಾಪ್ತೋ' ಧಾತು; ಅವತಿ ಎಂದರೆ ಎಲ್ಲಾ ಕಡೆ ತುಂಬಿರುವ ಎಂದರ್ಥ. ಆದ್ದರಿಂದ ಓಂ ಎಂದರೆ ಸರ್ವಗತ(Omnipresent).
- 'ಅವ' ಎಂದರೆ ಜ್ಞಾನ. 'ಅವತಿ' ಎಂದರೆ ಎಲ್ಲವನ್ನೂ ತಿಳಿದವನು; ಆದ್ದರಿಂದ ಓಂ ಎಂದರೆ ಸರ್ವಜ್ಞ(Omniscient).
- 'ಅವ ಸಾಮರ್ಥ್ಯೇ' ಧಾತು; ಆದ್ದರಿಂದ ಅವತಿ ಎಂದರೆ ಸರ್ವಸಮರ್ಥ(Omnipotent).

ಹೀಗೆ ದೇವರು ಸರ್ವಸಮರ್ಥ, ಸರ್ವಗತ, ಸರ್ವಜ್ಞ ಎನ್ನುವ ಪ್ರಮುಖ ಮೂರು ಮುಖವನ್ನು ಓಂಕಾರ ತಿಳಿಸುತ್ತದೆ. ಇದು ಭಗವಂತನನ್ನು ಗುರುತಿಸುವ ಮೂರು ಮೂಲಭೂತ ಗುಣಗಳು. ಜೀವ 'ಅಣು'ವಾದರೆ ಭಗವಂತ ಸರ್ವಗತ; ಜೀವ ಅಲ್ಪಜ್ಞನಾದರೆ ಭಗವಂತ ಸರ್ವಜ್ಞ; ಜೀವ ಅಲ್ಪ ಸಾಮರ್ಥ್ಯ ಉಳ್ಳವನಾದರೆ ಭಗವಂತ ಸರ್ವಸಮರ್ಥ. ಹೀಗೆ ಜೀವನಿಗಿಂತ ಭಿನ್ನವಾಗಿರುವ ಆ ಶಕ್ತಿ ಎಷ್ಟು ಭಿನ್ನ ಎನ್ನುವುದನ್ನು ಓಂಕಾರ ತಿಳಿಸುತ್ತದೆ.

'ಅವ ಪ್ರವೇಶೇ' ಎನ್ನುವ ಧಾತುವನ್ನು ನೋಡಿದರೆ- ಇಲ್ಲಿ ಅವತಿ ಎಂದರೆ 'ಪ್ರವೇಶ ಮಾಡುತ್ತಾನೆ' ಎಂದರ್ಥ. ಭಗವಂತ ಸರ್ವಗತ. ಆದ್ದರಿಂದ ಆತ ಎಲ್ಲರ ಒಳಗೂ(Indweller) ಹೊರಗೂ ಇದ್ದಾನೆ. ಇದನ್ನು ನಾರಾಯಣ ಸೂಕ್ತದಲ್ಲಿ "ಅಂತರ್ ಬಹಿಶ್ಚ ತತ್ ಸರ್ವಂ ವ್ಯಾಪ್ಯ ನಾರಾಯಣ ಸ್ಥಿತಃ" ಎಂದಿದ್ದಾರೆ. 'ಅವ ವದೇ' ಅನ್ನುವ ಇನ್ನೊಂದು ಧಾತುವಿದೆ. ಅಲ್ಲಿ ಅವತಿ ಎಂದರೆ ರಕ್ಷಣೆ ಮಾಡುವವ ಎನ್ನುವುದು ಒಂದು ಅರ್ಥ, ಸಂಹಾರ ಮಾಡುವವ ಎನ್ನುವುದು ಇನ್ನೊಂದು ಅರ್ಥ. ಆದ್ದರಿಂದ ಓಂ ಎಂದರೆ ಸರ್ವರಕ್ಷಕ, ಸರ್ವಸಂಹಾರಕ ಶಕ್ತಿ. "ಭಗವಂತ ನಮ್ಮಲ್ಲಿರುವ ಅಜ್ಞಾನವನ್ನು, ನಮ್ಮಲ್ಲಿರುವ ದುಃಖವನ್ನು, ನಮ್ಮಲ್ಲಿರುವ ದೋಷವನ್ನು ಸಂಹಾರ ಮಾಡುವ ಸರ್ವ ದೋಷ ನಾಶಕ". ಇದು ನಾವು ಓಂಕಾರದಲ್ಲಿ 'ಸಂಹಾರಕಶಕ್ತಿ' ಭಗವಂತನನ್ನು ಉಪಾಸನೆ ಮಾಡುವಾಗ ತಿಳಿದಿರಬೇಕಾದ ವಿಚಾರ.

ಸಮಷ್ಟಿಯಾಗಿ ಹೇಳಬೇಕೆಂದರೆ: 'ಅವ' ಧಾತುವಿನಿಂದ ಹುಟ್ಟಿದ ಓಂ- ಭಗವಂತ ಸರ್ವ ಸಂಹಾರಕ, ಸರ್ವ ದೋಷನಿವಾರಕ, ಸರ್ವಾಂತರ್ಯಾಮಿ, ಸರ್ವಾಂತರ್ನಿಯಾಮಕ, ಸರ್ವಜ್ಞ, ಸರ್ವಸಮರ್ಥ, ಹೀಗೆ ನಾವು ಉಪಾಸನೆ ಮಾಡಬೇಕಾದ ಭಗವಂತನ ಮುಖ್ಯ ಗುಣಗಳೆಲ್ಲವನ್ನು ಹೇಳುತ್ತದೆ. ಸಮಸ್ತ ವೇದಗಳು ಹೇಳುವುದು ಭಗವಂತನ ಈ ಗುಣಗಳ ವಿವರವನ್ನು.

ಎರಡನೇ ಧಾತು 'ಊಯತೇ ಇತೀ ಓಂ'. ಜಗತ್ತು ಯಾರಲ್ಲಿ ಓತವಾಗಿದೆಯೋ ಅವನು ಓಂ. ಅಂದರೆ ಇಡೀ ಜಗತ್ತು ಯಾರಲ್ಲಿ ಆಶ್ರಿತವಾಗಿದೆಯೋ ಅವನು 'ಓಂಕಾರ' ವಾಚ್ಯ ಭಗವಂತ. ಅದೇ ರೀತಿ ಎಲ್ಲಾ ಗುಣಗಳು ಯಾರಲ್ಲಿ ಓತವಾಗಿದೆಯೋ(ಹೆಣೆದುಕೊಂಡಿದೆಯೋ) ಅವನು ಓಂ. ಅಂದರೆ ಭಗವಂತ ಸರ್ವಾಧಾರ-ಸರ್ವಗುಣಪೂರ್ಣ.

ಓಂಕಾರವನ್ನು ಸಮಷ್ಟಿಯಾಗಿ ನೋಡಿದ ಮೇಲೆ ಅದನ್ನು ಬೇರೆಬೇರೆ ಅಕ್ಷರವಾಗಿ ವಿಂಗಡಿಸಿಕೊಂಡು, ಅದರಲ್ಲಿರುವ ಮೂರು ಅಕ್ಷರ(ಅ, ಉ, ಮ)ಏನನ್ನು ಹೇಳುತ್ತದೆ ಎನ್ನುವುದನ್ನು ನೋಡೋಣ. ಪ್ರಣವ ಪದದ ಒಂದೊಂದು ಅಕ್ಷರ ಓಂಕಾರದ ಒಂದೊಂದು ಅಕ್ಷರದ ವಿವರಣಾರೂಪದಲ್ಲಿದೆ. ಓಂಕಾರದ ಮೊದಲನೇ ಅಕ್ಷರ 'ಅ'. 'ಅ' ಅಂದರೆ ಅಧಿಕ. ಎಲ್ಲಕ್ಕಿಂತ ಅಧಿಕನಾದ ಭಗವಂತ 'ಅ'. ಇದನ್ನು ಪ್ರಣವದ 'ಪ್ರ' ಅಕ್ಷರ ವಿವರಿಸುತ್ತದೆ. 'ಪ್ರ' ಎಂದರೆ ಪ್ರಕೃಷ್ಟವಾದ ಎಂದರ್ಥ. ಎಲ್ಲಕ್ಕಿಂತ ಪ್ರಕೃಷ್ಟವಾದ ಅನಂತ ಶಕ್ತಿ ಭಗವಂತ 'ಅ'. ಓಂಕಾರದ ಎರಡನೇ ಅಕ್ಷರ 'ಉ'. 'ಉ' ಅಂದರೆ ಉತ್ತಮವಾದ, ಜ್ಞಾನಾನಂದಗಳಿಂದ ತುಂಬಿ ಉನ್ನತವಾದದ್ದು. ಇದನ್ನು ಪ್ರಾಣವದ 'ಣ' ಅಕ್ಷರ ವಿವರಿಸುತ್ತದೆ. 'ಣ' ಎಂದರೆ ಜ್ಞಾನಾನಂದದ ಆತ್ಮಬಲ. ಭಗವಂತ ಸರ್ವಸರ್ಮರ್ಥ- ಆದ್ದರಿಂದ ಜ್ಞಾನಾನಂದ ಸ್ವರೂಪ ಭಗವಂತ 'ಉ'. ಓಂಕಾರದ ಮೂರನೇ ಅಕ್ಷರ 'ಮ'. 'ಮ' ಎಂದರೆ ಜ್ಞಾನಸ್ವರೂಪ. ಇದನ್ನು ಪ್ರಣವದ 'ವ' ಅಕ್ಷರ ವಿವರಿಸುತ್ತದೆ. 'ವ' ಎಂದರೆ ಜ್ಞಾನ-ಅದು ಸರ್ವಜ್ಞ ಎನ್ನುವ ಅರ್ಥವನ್ನು ಕೊಡುತ್ತದೆ. ಹೀಗೆ ಓಂಕಾರದ ಒಂದು ಮುಖವನ್ನು 'ಪ್ರಣವಃ' ವಿವರಿಸುತ್ತದೆ.

ಉಪನಿಷತ್ತಿನಲ್ಲಿ ಹೇಳುವಂತೆ: "ನೇತಿ ನೇತಿ ಆತ್ಮಾ ಅಗ್ರಹ್ಯಃ ನ ಹಿ ಗೃಹ್ಯತೆ"-ಅಂದರೆ ಭಗವಂತನನ್ನು ಮೊದಲು ತಿಳಿಯುವುದೇನೆಂದರೆ "ಭಗವಂತ ಪೂರ್ಣವಾಗಿ ತಿಳಿಯಲಿಕ್ಕಾಗುವ ವಸ್ತುವಲ್ಲ" ಎಂದು! ಅವನನ್ನು ಪೂರ್ಣವಾಗಿ

ತಿಳಿಯುವುದು ಅಸಾಧ್ಯ ಎಂದು ತಿಳಿಯುವುದೇ ಮೊದಲು ನಾವು ಭಗವಂತನ ಬಗ್ಗೆ ತಿಳಿಯಬೇಕಾದ ವಿಷಯ. ಇದನ್ನು ಓಂಕಾರ ವಿವರಿಸುತ್ತದೆ. ಇಲ್ಲಿ 'ಅ' ಎಂದರೆ ಅಲ್ಲ ಅಥವಾ ಇಲ್ಲ . ಭಗವಂತ ಅಲ್ಲ, ಭಗವಂತ ಇಲ್ಲ! ಅಂದರೆ ಭಗವಂತ ಪೂರ್ಣವಾಗಿ ತಿಳಿಯಲು ಆಗುವ ಸಂಗತಿಯಲ್ಲ; ಏಕೆಂದರೆ ನಾವು ತಿಳಿದಿರುವ ವಸ್ತುವಿನಲ್ಲಿ ಏನಿದೆಯೋ ಅದು ಅವನಲ್ಲಿಲ್ಲ. ನಮಗೆ ತ್ರಿಗುಣಾತ್ಮಕ ಪ್ರಪಂಚದ ಪರಿಚಯ ಮಾತ್ರ ಇದೆ, ಆದರೆ ಭಗವಂತ ತ್ರಿಗುಣಾತೀತ. ತ್ರಿಗುಣಾತ್ಮಕವಾದ ನಮ್ಮ ಮನಸ್ಸು ತ್ರಿಗುಣಾತೀತವನ್ನು ಗ್ರಹಿಸಲಾರದು. ಭಗವಂತನಲ್ಲಿ ಯಾವ ದೋಷವೂ ಇಲ್ಲ. ಆತ ಸರ್ವಗುಣಪೂರ್ಣ. ಭಗವಂತ ನಮ್ಮ ನಿಲುವಿನಿಂದ ಅತೀತ.

ಭಗವಂತ 'ಉ'. ಆತ ನಮ್ಮ ಮನಸ್ಸು ಏರಬಹುದಾದ ಎತ್ತರಕ್ಕಿಂತಲೂ ಉನ್ನತವಾಗಿರುವ ವಸ್ತು. ನಮ್ಮ ಮನಸ್ಸು ಆ ಎತ್ತರಕ್ಕೆ ಏರಲು ಸಾಧ್ಯವಿಲ್ಲ. ಆದರೂ ಆತ 'ಮ'-ಅಂದರೆ ಆತನನ್ನು ತಿಳಿಯಬಹುದು! ಅಂದರೆ ಭಗವಂತ ಸಮುದ್ರದಂತೆ. ನಾವು ಪೂರ್ಣ ಸಮುದ್ರವನ್ನು ತಂದು ನಮ್ಮ ಮನೆಯ ಪಾತ್ರೆಯಲ್ಲಿ ತುಂಬಿಡಲು ಸಾಧ್ಯವಿಲ್ಲ. ಆದರೆ ನಮ್ಮ ಪಾತ್ರೆಯಲ್ಲಿ ಎಷ್ಟು ತುಂಬಬಹುದೋ ಅಷ್ಟು ನೀರನ್ನು ತುಂಬಿ ತರಬಹುದು. ಅದೇ ರೀತಿ ಭಗವಂತನನ್ನು ನಾವು ಪೂರ್ಣ ಗ್ರಹಿಸಲು ಅಸಾಧ್ಯ, ಆದರೆ ನಮ್ಮ ನಮ್ಮ ಸಾಮರ್ಥ್ಯಕ್ಕನುಗುಣವಾಗಿ ಆತನನ್ನು ತಿಳಿಯಬಹುದು. ಓಂಕಾರ "ಭಗವಂತನನ್ನು ಪೂರ್ಣ ತಿಳಿಯಲು ಅಸಾಧ್ಯ, ಆದರೆ ನಿಮ್ಮ ನಿಮ್ಮ ಯೋಗ್ಯತೆಗೆ ತಕ್ಕಂತೆ ಭಗವಂತನನ್ನು ತಿಳಿಯಲು ಪ್ರಯತ್ನಿಸಿ" ಎನ್ನುವ ವೇದದ ಸಂದೇಶವನ್ನು ನಮಗೆ ತಿಳಿಸುತ್ತದೆ.

ಭಗವಂತನನ್ನು ಯಾವ ರೀತಿ ಅನುಸಂಧಾನ ಮಾಡಬೇಕು ಎನ್ನುವುದನ್ನು ಓಂಕಾರ ಹೇಳುತ್ತದೆ. ಭಗವಂತ 'ಅ' ಅಂದರೆ ಆತ ಅತೀತ. ಯಾವುದು ಸೃಷ್ಟಿಯ ಪೂರ್ವದಲ್ಲಿ ಇತ್ತೋ ಅದು 'ಅ'. ನಾವು ಉತ್ಪನ್ನರಾದ ನಂತರ ಇರುವ ಭಗವಂತ 'ಉ'; ಎಲ್ಲವೂ ನಾಶವಾದ ಮೇಲೆ ಇರುವ ಭಗವಂತ 'ಮ'. ತ್ರಿಕಾಲದಲ್ಲಿ ಏಕರೂಪವಾಗಿರುವ ಭಗವಂತ ಓಂ.

ಭಗವಂತ 'ಅ' ಅಂದರೆ ಭೂಃ (ಭೂಮಿ); ಆತ 'ಉ' –ಭೂಮಿಯ ಉಪರಿಯಲ್ಲಿರುವ ಅಂತರಿಕ್ಷ(ಭುವಃ); ಆತ 'ಮ' ಅಂದರೆ ಜ್ಞಾನಪ್ರದವಾದ ಸ್ವರ್ಗ(ಸ್ವಃ). ಮೂರು ಲೋಕವನ್ನು ನಿಯಮಿಸುವ ಶಕ್ತಿ ಭಗವಂತ ಓಂ. ನಮ್ಮ ಮೂರು ಅವಸ್ಥೆಗಳಾದ 'ಅ'-ಎಚ್ಚರ, 'ಉ'-ಕನಸು; 'ಮ'-ನಿದ್ದೆಯನ್ನು ನಿಯಂತ್ರಿಸುವ ಅನಂತ ಶಕ್ತಿ ಭಗವಂತ ಓಂ.

ಹೀಗೆ ಸಮಸ್ತ ವೈದಿಕ ವಾಙ್ಮಯ ಯಾವ ಗುಣವನ್ನು ಭಗವಂತನಲ್ಲಿ ಉಪಾಸನೆ ಮಾಡಬೇಕೆಂದು ಹೇಳುತ್ತದೋ; ಸರ್ವನಾಮ ವಾಚ್ಯನಾದ ಭಗವಂತನಲ್ಲಿ ಸರ್ವ ನಾಮಗಳು ಯಾವ ಗುಣವನ್ನು ಹೇಳುತ್ತವೋ- ಅವೆಲ್ಲವನ್ನೂ ಸಂಗ್ರಹ ಮಾಡಿ ಭಟ್ಟಿ ಇಳಿಸಿ ಸಾರಯುಕ್ತವಾಗಿ ಹೇಳತಕ್ಕಂತಹ ಬೀಜಾಕ್ಷರ ಓಂಕಾರ. ಇದು ಭಗವಂತನ ಸ್ತೋತ್ರದಲ್ಲೇ ಅತ್ಯಂತ ಶ್ರೇಷ್ಠವಾದ ಸ್ತುತಿ. ಭಗವಂತನನ್ನಲ್ಲದೆ ಇನ್ಯಾರನ್ನೂ 'ಓಂ' ಎಂದು ಕರೆಯಲು ಸಾಧ್ಯವಿಲ್ಲ. ಈ ಕಾರಣಕ್ಕಾಗಿ ಸಾಮಾನ್ಯವಾಗಿ 'ಓಂ' ನ್ನು ಯಾರೂ ತಮ್ಮ ಹೆಸರಾಗಿ ಬಳಸುವುದಿಲ್ಲ, ಬಳಸಬಾರದು.

ಓಂಕಾರ ಜಪ ಅತ್ಯಂತ ಪರಿಣಾಮಕಾರಿ. ಸಾಮಾನ್ಯವಾಗಿ ಓಂಕಾರ ಜಪವನ್ನು ಸನ್ಯಾಸಿಗಳು ಮಾಡುತ್ತಾರೆ. ಅವರಿಗೆ ಯಾವ ರೀತಿಯ ಸಮಸ್ಯೆಯೂ ಇಲ್ಲ. ಆತ ತನ್ನ ದೇಹ ತಡೆದುಕೊಳ್ಳುವಷ್ಟು(೧೨,೦೦೦) ಬಾರಿ ಓಂಕಾರ ಜಪ ಮಾಡಬಹುದು. ಗೃಹಸ್ಥನಾದವನು ನಿರಂತರ ಓಂಕಾರ ಜಪ ಮಾಡುವುದು ಅಷ್ಟು ಸೂಕ್ತವಲ್ಲ. ಗರಿಷ್ಠ ಹತ್ತುಬಾರಿ ಮಾಡಬಹುದು. ಸಂಸಾರ ಜೀವನ ನಡೆಸುವ ಹೆಂಗಸರು ಓಂಕಾರ ಜಪ ಮಾಡದಿರುವುದು ಒಳ್ಳೆಯದು. ಏಕೆಂದರೆ ಓಂಕಾರವನ್ನು ಪೂರ್ಣ ತೊಡಗಿಸಿಕೊಂಡು, ಅರ್ಥಾನುಸಂಧಾನದಿಂದ ಜಪ ಮಾಡುವುದರಿಂದ, ಅದು ಮನಸ್ಸಿನ ಮೇಲೆ ಮಹತ್ತರವಾದ ಪರಿಣಾಮವನ್ನು ಬೀರುತ್ತದೆ. ಇದು ಒಂದು ರೀತಿಯ ಧ್ಯಾನವಿದ್ದಂತೆ. ಇದರಿಂದ ಮನಸ್ಸು

ಮಗ್ನವಾಗಿ, ಸಂಸಾರಿಕ ಜೀವನದಲ್ಲಿ ವೈರಾಗ್ಯ ಬರುವ ಅಪಾಯವಿದೆ. ಆದರೆ ಓಂಕಾರದ ಅರ್ಥಾನುಸಂಧಾನ ಯಾರು ಬೇಕಾದರೂ ಮಾಡಬಹುದು. ಓಂಕಾರದ ಅರ್ಥಚಿಂತನೆ ಮಾಡಿ ಎತ್ತರಕ್ಕೇರಲು ಯಾವುದೇ ಅಡ್ಡಿ ಇಲ್ಲ.

*******

# ಅಥ ಷಷ್ಠಃ ಪ್ರಶ್ನಃ

*ಅಥ ಹೈನಂ ಸುಕೇಶಾ ಭಾರದ್ವಾಜಃ ಪಪ್ರಚ್ಛ । ಭಗವನ್ ಹಿರಣ್ಯನಾಭಃ ಕೌಸಲ್ಯೋ ರಾಜಪುತ್ರೋ ಮಾಮುಪೇತ್ಯೈತಂ ಪ್ರಶ್ನಮಪೃಚ್ಛತ । ಷೋಡಶಕಲಂ ಭಾರದ್ವಾಜ ಪುರುಷಂ ವೇತ್ಥ । ತಮಹಂ ಕುಮಾರಂಬ್ರುವಂ । ನಾಹಮಿಮಂ ವೇದ ಯದ್ಯಹಮಿಮಮವೇದಿಷ್ಯಂ ಕಥಂ ತೇ ನಾವಕ್ಷ್ಯಮಿತಿ । ಸಮೂಲೋ ವಾ ಏಷ ಪರಿಶುಷ್ಯತಿ ಯೋಽನೃತಮಭಿವದತಿ ತಸ್ಮಾನ್ನಾರ್ಹಮ್ಯನೃತಂ ವಕ್ತುಂ । ಸ ತೂಷ್ಣೀಂ ರಥಮಾರುಹ್ಯ ಪ್ರವವ್ರಾಜ । ತಂ ತ್ವಾ ಪೃಚ್ಛಾಮಿ ಕ್ವಾಸೌಪುರುಷ ಇತಿ ॥೧॥*

ಆರು ಜನ ಋಷಿಗಳಲ್ಲಿ ಶ್ರೇಷ್ಠರಾದ ಸುಕೇಶಾ ಭಾರದ್ವಾಜರು ತಮ್ಮ ಪ್ರಶ್ನೆಯನ್ನು ಕೇಳುವುದರೊಂದಿಗೆ ಈ ಅಧ್ಯಾಯ ಆರಂಭವಾಗುತ್ತದೆ. ಅವರು ತಮ್ಮ ಪ್ರಶ್ನೆಯ ಮಹತ್ವವನ್ನು ವಿವರಿಸುವುದಕ್ಕೊಸ್ಕರ, ತಮ್ಮ ಪ್ರಶ್ನೆಗೆ ಸಂಬಂಧಿಸಿದ, ಅವರ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಮೊದಲು ವಿವರಿಸುತ್ತಾರೆ. ಅವರು ಹೇಳುತ್ತಾರೆ: "ನಾನು ಇಲ್ಲಿ ಕೇಳುವ ಪ್ರಶ್ನೆ ನನ್ನಲ್ಲಿ ಹಿಂದೆ ಒಬ್ಬರು ಕೇಳಿದ ಪ್ರಶ್ನೆ" ಎಂದು. ಒಮ್ಮೆ ಕೋಸಲ ದೇಶದ ರಾಜಕುಮಾರ 'ಹಿರಣ್ಯನಾಭ' ನನ್ನ ಬಳಿ ಬಂದು, ನನ್ನಲ್ಲಿ ಈ ರೀತಿ ಪ್ರಶ್ನೆ ಹಾಕಿದ: "ಹದಿನಾರು ಕಲೆಯ ಒಡೆಯನಾದ ಒಬ್ಬ ಪರಮಪುರುಷನ ಉಪಾಸನೆ ಹೇಗೆ ಮಾಡಬೇಕು" ಎಂದು. ನಾವು ಪುರುಷಸೂಕ್ತವನ್ನು ನೋಡಿದಾಗ ಅಲ್ಲಿ "ಸಹಸ್ರಶೀರ್ಷಾ ಪುರುಷಃ" ಎಂದು ನಾರಾಯಣನನ್ನು ಸ್ತುತಿಸಿರುವುದನ್ನು ಕಾಣುತ್ತೇವೆ. ಆದ್ದರಿಂದ ಪುರುಷಃ ಎಂದರೆ ನಾರಾಯಣ. ಆದರೆ ಹದಿನಾರು ಕಲೆಗಳು ಯಾವುದು? ಅವುಗಳನ್ನು ನಿಯಂತ್ರಿಸುವ ಭಗವಂತನನ್ನು ಎಲ್ಲಿ ಹೇಗೆ ಉಪಾಸನೆ ಮಾಡಬೇಕು ಎನ್ನುವುದು ಇಲ್ಲಿರುವ ಪ್ರಶ್ನೆ. "ಈ ಪ್ರಶ್ನೆಗೆ ಉತ್ತರ ನನಗೆ ತಿಳಿಯದು" ಎಂದು ಸುಕೇಶಾ ಭಾರದ್ವಾಜರು ಹೇಳಿದಾಗ, ಹಿರಣ್ಯನಾಭ ಪುನಃ "ನಿಮಗೆ ಖಂಡಿತವಾಗಿ ತಿಳಿದಿದೆ. ಅದನ್ನು ನನಗೆ ಹೇಳಿ" ಎಂದು ಒತ್ತಾಯಿಸುತ್ತಾನೆ.[ಇಲ್ಲಿ ಅಬ್ರವಂ ಎನ್ನುವ ಪದವನ್ನು 'ಅಬ್ರುವಮ್' ಎಂದು ಬಳಸಿದ್ದಾರೆ. ಇದು ತಾತ್ಪರ್ಯಪೂರ್ವಕ ಅಥವಾ ಒತ್ತುಕೊಟ್ಟು ಹೇಳುವುದನ್ನು ಸೂಚಿಸುತ್ತದೆ. ಉದಾಹರಣೆಗೆ: ಬಹಳ→ಬಹಾಳ] ಆಗ ಸುಕೇಶಾ ಭಾರದ್ವಾಜರು ಹೇಳುತ್ತಾರೆ: "ನನಗೆ ಈ ಜ್ಞಾನ ತಿಳಿದಿಲ್ಲ. ನಾನು ಸುಳ್ಳು ಹೇಳುತ್ತಿಲ್ಲ. ಯಾರು ಸುಳ್ಳುಹೇಳುತ್ತಾನೋ ಅವನ ಬದುಕು ಬೇರುಸಹಿತ ಒಣಗಿದ ಮರದಂತೆ ವ್ಯರ್ಥ ಎನ್ನುವುದು ನನಗೆ ತಿಳಿದಿದೆ. ಆದ್ದರಿಂದ ನನಗೆ ತಿಳಿಯದ್ದನ್ನು ನಿನಗೆ ಹೇಗೆ ಹೇಳಲಿ" ಎಂದು. ಇಲ್ಲಿ 'ಅಭಿವದತಿ' ಎನ್ನುವ ಪದ ಬಳಕೆಯಾಗಿದೆ. ಅಬಿವದತಿ ಅಂದರೆ ಒಳಗಿನಿಂದ ಮತ್ತು ಹೊರಗಿನಿಂದ ಸುಳ್ಳು ಹೇಳುವುದು. ಮೋಸಮಾಡಬೇಕೆನ್ನುವ ಉದ್ದೇಶದಿಂದ ಹೇಳುವ ಸುಳ್ಳು-ಅಭಿವದತಿ. ಇನ್ನೊಬ್ಬರ ಶ್ರೇಯಸ್ಸಿಗಾಗಿ ಹೇಳುವ ಸುಳ್ಳು ಸುಳ್ಳಲ್ಲ. ಇಲ್ಲಿ ಸುಕೇಶಾ ಭಾರದ್ವಾಜರು ಮುಂದುವರಿದು: "ನಾನು ಅಪ್ರಾಮಾಣಿಕತೆಯಿಂದ ಸುಳ್ಳು ಹೇಳಿದರೆ, ನನ್ನ ಎಲ್ಲಾ ಪುಣ್ಯಗಳು ನಾಶವಾಗಿ, ನಾನು ನಿರ್ನಾಮವಾಗಿ ಹೋಗುತ್ತೇನೆ. ಸುಳ್ಳು ಹೇಳುವುದರಿಂದ ಇಡೀ ಮನುಷ್ಯನ ವ್ಯಕ್ತಿತ್ವ ನಾಶವಾಗಿ ಹೋಗುತ್ತದೆ. ಅವನು ಮಾಡಿದ ಪುಣ್ಯಕರ್ಮಗಳು ಕರಗಿ ಹೋಗುತ್ತವೆ. ಹೀಗಾಗಿ ಸುಳ್ಳು ಹೇಳುವುದರ ಅಪಾಯದ ಅರಿವು ನನಗಿದೆ. ಪ್ರಾಮಾಣಿಕವಾಗಿ ನನಗೆ ನಿನ್ನ ಪ್ರಶ್ನೆಗೆ ಉತ್ತರ ತಿಳಿದಿಲ್ಲ" ಎನ್ನುತ್ತಾರೆ. ಸುಕೇಶಾ ಭಾರದ್ವಾಜರು ಈ ರೀತಿ ನುಡಿದಾಗ ಹಿರಣ್ಯನಾಭ ತನ್ನ ಪ್ರಶ್ನೆಗೆ ಉತ್ತರ ಸಿಗಲಿಲ್ಲವಲ್ಲಾ ಎಂದು ಬೇಸರದಿಂದ ತನ್ನ ರಥವನ್ನು ಏರಿ ಅಲ್ಲಿಂದ ಹೊರಟುಹೋಗುತ್ತಾನೆ.

"ಆ ರಾಜಕುಮಾರ ಕೇಳಿರುವ ಪ್ರಶ್ನೆಗೆ ಉತ್ತರ ನಿಮಗೆ ತಿಳಿದಿದೆ. ಆದ್ದರಿಂದ ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಆ ಷೋಡಶ ಕಲೆಗಳು ಯಾವುದು? ಷೋಡಶ ಕಲೆಗಳಿಗೂ ಭಗವಂತನಿಗೂ ಯಾವ ಸಂಬಂಧ? ಷೋಡಶಕಲಾ ಪುರುಷನನ್ನು ಎಲ್ಲಿ ಹೇಗೆ ಉಪಾಸನೆ ಮಾಡಬೇಕು?" ಇದು ಈ ಉಪನಿಷತ್ತಿನಲ್ಲಿರುವ ಆರನೆಯ ಮತ್ತು ಕೊನೇಯ ಪ್ರಶ್ನೆ. ಬನ್ನಿ, ಆರುಮಂದಿ ಋಷಿಗಳೊಂದಿಗೆ ಸೇರಿ, ನಾವೂ ಈ ಪ್ರಶ್ನೆಗೆ ಉತ್ತರ ರೂಪವಾಗಿರುವ ಅತ್ಯದ್ಭುತ ಜ್ಞಾನ ಸಂದೇಶವನ್ನು ಭಗವಂತನ ಕೃಪೆಬೇಡಿ, ಪಿಪ್ಪಲಾದರಿಂದ ಕೇಳಿ ತಿಳಿದು ಧನ್ಯರಾಗೋಣ.

*ತಸ್ಮೈ ಸ ಹೋವಾಚ । ಇಹೈವಾಂತಃ ಶರೀರೇ ಸೋಮ್ಯ ಸ ಪುರುಷೋ ಯಸ್ಮಿನ್ನೇತಾಃ ಷೋಡಶಕಲಾಃ ಪ್ರಭವಂತೀತಿ ॥೨॥*

ಒಬ್ಬ ಸಾಧಕ ತಿಳಿಯಲೇಬೇಕಾಗಿರುವ ಅತ್ಯುತ್ತಮ ಪ್ರಶ್ನೆ ಇದಾಗಿರುವುದರಿಂದ, ಪಿಪ್ಪಲಾದರಿಗೆ ಬಹಳ ಸಂತೋಷವಾಯಿತು[ಹ-ಕಾರ ಇದನ್ನು ಸೂಚಿಸುತ್ತದೆ]. ಅವರು ಹೇಳುತ್ತಾರೆ: ಭಗವಂತನನ್ನು ನಾವು ನಮ್ಮ ದೇಹದೊಳಗೇ ಕಂಡು ಉಪಾಸನೆ ಮಾಡಬೇಕೇ ಹೊರತು, ಆತನನ್ನು ಎಲ್ಲೆಲ್ಲೋ ಹುಡುಕುವುದಲ್ಲ" ಎಂದು. ಇಲ್ಲಿ ಪಿಪ್ಪಲಾದರು ಸುಕೇಶಾ ಭಾರದ್ವಾಜರನ್ನು 'ಸೋಮ್ಯ' ಎಂದು ಸಂಬೋಧಿಸಿದ್ದಾರೆ. ಸೋಮ+ಇವ=ಸೋಮ್ಯ. ಅಂದರೆ ಚಂದ್ರನಂತೆ ತುಂಬಾ ತಂಪಾದ ಸ್ವಭಾವ ಉಳ್ಳವನು, ಯಾರ ಮನಸ್ಸಿಗೂ ನೋವಾಗದಂತೆ ಪ್ರೀತಿಯಿಂದ ಮಾತನಾಡುವವನು, ಮೃದು ಸ್ವಭಾವದವನು ಎಂದರ್ಥ. ಒಬ್ಬ ಶಾಸ್ತ್ರಜ್ಞ ಎಷ್ಟು ಸೌಮ್ಯನಾಗಿರಬೇಕೆಂದರೆ: ಆತ ಯಾರನ್ನೂ ದ್ವೇಷ ಮಾಡುವಂತಿಲ್ಲ, ಇನ್ನೊಬ್ಬರನ್ನು ಅವಮಾನಗೊಳಿಸುವ ಕೆಟ್ಟ ಮಾತನ್ನಾಡುವಂತಿಲ್ಲ. ಇದು ಶಾಸ್ತ್ರದ ನಿಯಮ. "ಇದನ್ನೇ ವಿದ್ಯಾ ದದಾತಿ ವಿನಯಮ್" ಎನ್ನುತ್ತಾರೆ. ಇದು ಅಧ್ಯಾತ್ಮದ ಮಾರ್ಗದಲ್ಲಿ ಮೊದಲು ಗಳಿಸಬೇಕಾದಂತಹ ಅರ್ಹತೆ. 'ಸೋಮ್ಯ' ಎಂದರೆ ಸೋಮಯಾಗ ಮುಂತಾದಂತಹ ವೇದೋಕ್ತವಾದ ಕರ್ಮಾನುಷ್ಠಾನ ಮಾಡುತ್ತಾ, ಕರ್ಮದಲ್ಲಿ ಪರಿಣತಿ ಪಡೆದವ ಎನ್ನುವುದು ಇನ್ನೊಂದು ಅರ್ಥ.

ಎಲ್ಲರ ಒಳಗೂ ಅಂತರ್ಯಾಮಿಯಾಗಿರುವ ಭಗವಂತ 'ಪುರುಷಃ'. ನಮ್ಮ ಹೃತ್ಕಮಲ ಮಧ್ಯದಲ್ಲಿರುವ ಬಿಂಬರೂಪಿ ಪರಮಪುರುಷನನ್ನು, ಅಂತಃದೃಷ್ಟಿಯಿಂದ ಕಂಡು ಮಾಡುವ ಉಪಾಸನೆಯೇ ಷೋಡಶಕಲಾ ಉಪಾಸನೆ. ಪರಮಪುರುಷ ಭಗವಂತ ಷೋಡಶಕಲೆಯ ಒಡೆಯ ಮತ್ತು ಆತ ಈ ಹದಿನಾರು ಕಲೆಗಳಿಂದ ಈ ಪ್ರಪಂಚವನ್ನು ನಿರ್ಮಾಣ ಮಾಡಿದ್ದಾನೆ.

*ಸ ಈಕ್ಷಾಚಕ್ರೇ । ಕಸ್ಮಿನ್ ನ್ವಹಮುತ್ಕ್ರಾಂತ ಉತ್ಕ್ರಾಂತೋ ಭವಿಷ್ಯಾಮಿ ಕಸ್ಮಿನ್ ವಾ ಪ್ರತಿಷ್ಠಿತೇ ಪ್ರತಿಷ್ಠಸ್ಯಾಮೀತಿ ॥೩॥*

ಸೃಷ್ಟಿಯ ಆರಂಭದಲ್ಲಿ ಭಗವಂತ ತನ್ನ ಸೃಷ್ಟಿಯ ಕುರಿತು ಹೀಗೆ ಆಲೋಚಿಸಿದ: "ನಾನು ಸೃಷ್ಟಿಮಾಡಿದ ಮೇಲೆ ಪ್ರತಿಯೊಂದು ವಸ್ತುವಿನ ಒಳಗೂ ನಾನು ತುಂಬುತ್ತೇನೆ. ಜೀವನನ್ನು ಧಾರಣೆ ಮಾಡಿ ನಾನು ದೇಹವನ್ನು ಪ್ರವೇಶಿಸುತ್ತೇನೆ ಮತ್ತು ಆ ಜೀವದ ಆಯುಸ್ಸು ಮುಗಿದಾಗ ಹೊರಬರುತ್ತೇನೆ" ಎಂದು. ಆದ್ದರಿಂದ ಹುಟ್ಟುವುದು ಎಂದರೆ ಜೀವನ ಜೊತೆಗೆ ಭಗವಂತ ದೇಹ ಪ್ರವೇಶ ಮಾಡುವುದು ಹಾಗೂ ಸಾಯುವುದು ಎಂದರೆ ಜೀವನನ್ನು ಹಿಡಿದುಕೊಂಡು ದೇಹದಿಂದ ಹೊರಬರುವುದು. ಇದೇ ಕಾರಣಕ್ಕಾಗಿ ಭಗವಂತನನ್ನು 'ಶತರ್ಚಿ' ಎಂದು ಕರೆಯುತ್ತಾರೆ.

*ಸ ಪ್ರಾಣಮಸೃಜತ । ಪ್ರಾಣಾಚ್ಛ್ರದ್ಧಾಂ ಖಂ ವಾಯುರ್ಜ್ಯೋತಿರಾಪಃ ಪೃಥಿವೀಂದ್ರಿಯಂ ಮನೋಽನ್ನಮನ್ನಾದ್ ವೀರ್ಯಂ ತಪೋ ಮಂತ್ರಾಃ ಕರ್ಮ ಲೋಕಾ ಲೋಕೇಷು ನಾಮ ಚ ॥೪॥*

ಸೃಷ್ಟಿ ಪ್ರಾರಂಭದಲ್ಲಿ ಭಗವಂತ ತನ್ನೊಂದಿಗೆ ಸದಾ ಇರುವ ಒಬ್ಬ ಒಡನಾಡಿ ಬೇಕು ಎಂದು ಇಚ್ಛೆಪಟ್ಟು ಪ್ರಾಣದೇವರನ್ನು ಸೃಷ್ಟಿ ಮಾಡಿದ. ಪ್ರಪಂಚ ಸೃಷ್ಟಿಯಲ್ಲಿ ಪ್ರಾಣದಸೃಷ್ಟಿ ಎಂದರೆ ಜೀವಕಲೆಯ ಸೃಷ್ಟಿ. ಅಂದರೆ ಜೀವರುಗಳ ಸೃಷ್ಟಿ. ಈ ಸಮಸ್ತ ಜೀವರುಗಳಿಗೆ ಅಭಿಮಾನಿ ದೇವತೆ ಪ್ರಾಣದೇವರು.  ಷೋಡಶಕಲೆಗಳಲ್ಲಿ 'ಜೀವ' ಹದಿನಾರನೇ ಕಲೆ ಹಾಗೂ ಇದೊಂದೇ ಚೇತನ. ಇದಲ್ಲದೆ ಇನ್ನು ಹದಿನೈದು ಕಲೆಗಳು. ಅವುಗಳೆಂದರೆ: ಶ್ರದ್ಧೆ, ಖಂ, ವಾಯು, ಜ್ಯೋತಿ, ಆಪಃ, ಪ್ರಥಿವೀ, ಇಂದ್ರಿಯ, ಮನಃ, ಅನ್ನ, ವೀರ್ಯ, ತಪಃ, ಮಂತ್ರಾಃ, ಕರ್ಮ, ಲೋಕಾಃ ಮತ್ತು ನಾಮ.

ಮೊದಲು ಭಗವಂತ ಜೀವನಿಗೆ ಶ್ರದ್ಧೆಯನ್ನು ಸೃಷ್ಟಿಮಾಡಿದ. ಇದು ಮಾನಸಿಕ ಸ್ಥಿತಿ; ಜೀವದ ಅಂತರಂಗದ ಸ್ಥಿತಿ. ಪ್ರತಿಯೊಂದು ಜೀವಕ್ಕೆ ಅದರದ್ದೇ ಆದ ಸ್ವಭಾವವಿದೆ. ಅದು ಶ್ರದ್ಧೆ. ನಮ್ಮನಮ್ಮ ಶ್ರದ್ಧೆ ನಮನಮಗೆ. ನಾವು ಏನನ್ನು ನಂಬುತ್ತೇವೋ ಅದು ನಮಗೆ ಸತ್ಯ. ನಾವು ಏನನ್ನು ನಂಬುವುದಿಲ್ಲವೋ ಅದು ನಮ್ಮ ಪಾಲಿಗೆ ಇಲ್ಲ. ಆದ್ದರಿಂದ ಜೀವದ ಇಡಿಯ ಬೆಳವಣಿಗೆಗೆ ಮೂಲಭೂತವಾಗಿರತಕ್ಕಂತಹದ್ದು 'ನಂಬಿಕೆ'. ನಂಬಿಕೆ ನಿಜವಾದರೆ ಏಳಿಗೆ. ಇಲ್ಲದಿದ್ದರೆ ಇಲ್ಲ! ಹಾಗಾಗಿ ನಮ್ಮ ಇಡೀ ಜೀವನದ ಏರಿಳಿತಗಳಿಗೆ ಮೂಲಭೂತವಾಗಿರುವುದು ನಮ್ಮ ನಂಬಿಕೆ. ಉದಾಹರಣೆಗೆ ಕೆಲವರು ದೇವರೇ ಇಲ್ಲಾ ಎಂದು ಗಟ್ಟಿಯಾಗಿ ನಂಬಿರುತ್ತಾರೆ. ಆಗ ಅವರು ಮೋಕ್ಷಮಾರ್ಗದಲ್ಲಿ ಸಾಗಲು ಸಾಧ್ಯವಾಗುವುದಿಲ್ಲ. ಹೀಗಾಗಿ 'ಶ್ರದ್ಧೆ' ಹುಟ್ಟುವುದಕ್ಕೂ ಮೊದಲು ಇರುವ ಮೊಳಕೆ. ಆನಂತರ ಹುಟ್ಟಿದಮೇಲೆ ಆ ಮೊಳಕೆಯ ಮೇಲೆ ಅನುವಂಶೀಯ ಮತ್ತು ಪರಿಸರದ ಪ್ರಭಾವ ಇತ್ಯಾದಿ ನಂಬಿಕೆಗಳು ಮುಚ್ಚಳವಾಗಿ ಸೇರಿಕೊಳ್ಳುತ್ತವೆ.

'ಜೀವ ಮತ್ತು ಅದಕ್ಕೊಂದು ನಂಬಿಕೆ'. ಇಂತಹ ಜೀವ ತಾಯಿಯ ಹೊಟ್ಟೆಯನ್ನು ಪ್ರವೇಶಿಸುತ್ತದೆ. ಅಲ್ಲಿ ಆ ಜೀವಕ್ಕೆ ಪಂಚಭೂತಗಳಿಂದ ಕೂಡಿದ ಶರೀರ ಬರುತ್ತದೆ. ಇಲ್ಲಿ ಖಂ ಅಂದರೆ ಆಕಾಶ, ವಾಯು ಅಂದರೆ ಗಾಳಿ, ಜ್ಯೋತಿ ಅಂದರೆ ಬೆಂಕಿ, ಆಪಃ ಎಂದರೆ ನೀರು, ಪ್ರಥಿವೀ ಎಂದರೆ ಮಣ್ಣು. ಹೀಗೆ ಮಣ್ಣು-ನೀರು-ಬೆಂಕಿ-ಗಾಳಿ-ಆಕಾಶ ಎನ್ನುವ ಐದು ಕಲೆಗಳು ಸೇರಿ ಶರೀರ ನಿರ್ಮಾಣವಾಗುತ್ತದೆ. ಇದನ್ನು ಅನ್ನಮಯಕೋಶ ಎನ್ನುತ್ತಾರೆ. ಪಂಚಭೂತಗಳಿಂದಾದ ಶರೀರ ಪ್ರಪಂಚದಲ್ಲಿರುವುದನ್ನು ಅನುಭವಿಸಲು ಇಂದ್ರಿಯಗಳು ಬೇಕು. ಪ್ರಪಂಚದಲ್ಲಿರುವ ರೂಪವನ್ನು ನೋಡಲು ಕಣ್ಣು, ನಾದವನ್ನು ಕೇಳಲು ಕಿವಿ, ಸುಗಂಧ ಮೂಸಲು ಮೂಗು, ರುಚಿ ನೋಡಲು ನಾಲಿಗೆ, ಸ್ಪರ್ಶದ ಅನುಭವಕ್ಕೆ ತ್ವಗೀಂದ್ರಿಯ. ಹೀಗೆ ಪಂಚೇಂದ್ರಿಯಗಳ ಸೃಷ್ಟಿಯಾಯಿತು. ನಂತರ ಕುಸುರಿಕೆಲಸ, ಶಿಲ್ಪಕಲೆ ಇತ್ಯಾದಿ ಕರ್ಮವನ್ನು ಮಾಡಲು ಕೈ, ಒಂದುಕಡೆಯಿಂದ ಇನ್ನೊಂದು ಕಡೆಗೆ ಹೋಗಿ ತನ್ನ ಅನುಭವವನ್ನು ವಿಸ್ತರಿಸಿಕೊಳ್ಳಲು ಕಾಲು, ನುಡಿಯಲು ಬಾಯಿ, ದೇಹಕ್ಕೆ ಬೇಡವಾದುದ್ದನ್ನು ಹೊರಹಾಕಲು ಪಾಯು ಮತ್ತು ಉಪಸ್ಥ; ಸೃಷ್ಟಿ ವಿಸ್ತಾರಕ್ಕೆ, ಸಂತಾನ ವೃದ್ಧಿಗೆ-ಜನನೇಂದ್ರಿಯ. ಹೀಗೆ ಪಂಚಕರ್ಮೇಂದ್ರಿಯದ ಸೃಷ್ಟಿಯಾಯಿತು.  ಆನಂತರ ಇಂದ್ರಿಯಾನುಭವಗಳನ್ನು ಗ್ರಹಿಸಲು ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಚೇತನ ಎನ್ನುವ ಐದು ಅಂತಃಕರಣಗಳನ್ನೊಳಗೊಂಡ ಮನೋಮಯಕೋಶ ಸೃಷ್ಟಿಯಾಯಿತು. ಹೀಗೆ ಶ್ರದ್ಧೆ, ಪಂಚಭೂತಗಳು, ಇಂದ್ರಿಯಗಳು(ಐದು ಜ್ಞಾನೇಂದ್ರಿಯ ಮತ್ತು ಐದು ಕರ್ಮೇಂದ್ರಿಯ) ಮತ್ತು  ಮನೋಮಯಕೋಶ ಎನ್ನುವ ಎಂಟು ಕಲೆಗಳಿಂದ ವ್ಯಕ್ತಿತ್ವದ ಪೂರ್ಣ ಬೆಳವಣಿಗೆಯಾಯಿತು. ಹೀಗೆ ರೂಪುಗೊಂಡ ದೇಹದ ಭೋಗಕ್ಕಾಗಿ ಜಡಪ್ರಪಂಚದ ಸೃಷ್ಟಿಯಾಯಿತು.

ಜಡಪದಾರ್ಥವನ್ನು ಆಹಾರವಾಗಿ ಸೇವಿಸಿದಾಗ ಅದರಿಂದ ದೇಹದಲ್ಲಿ ಶಕ್ತಿ ಬೆಳೆಯುತ್ತದೆ. ಅದರಿಂದ ಮುಂದಿನ ಸಂತಾನಕ್ಕೆ ಕಾರಣಭೂತವಾಗಿರುವ ವೀರ್ಯ ದೇಹದಲ್ಲಿ ನಿಷ್ಪನ್ನವಾಗುತ್ತದೆ. ಇದು ಹತ್ತನೇ ಕಲೆ.

ಜೀವ ದೇಹದಿಂದ ಬೆಳೆಯುವಾಗ ಜೀವನದ ನಡೆಯಲ್ಲಿ ಮೂರು ಕಲೆಗಳಿವೆ. ಅವುಗಳೆಂದರೆ ತಪಃ, ಮಂತ್ರ ಮತ್ತು ಕರ್ಮ. ಮನಸ್ಸಿನಲ್ಲಿ ತಾನು ಏನುಮಾಡಬೇಕು, ಏನಾಗಬೇಕು, ಇತ್ಯಾದಿ ಆಲೋಚನೆ ಮಾಡುವುದು ತಪಃ. ಹಾಗೆ ಯೋಚಿಸಿರುವುದನ್ನು ಇನ್ನೊಬ್ಬರೊಂದಿಗೆ ಮಂತ್ರಾಲೋಚನೆ ಮಾಡುವುದು ಮಂತ್ರ. ನಂತರ ತಾನು ಆಲೋಚಿಸಿರುವುದನ್ನು, ಹೇಳಿರುವುದನ್ನು ಮಾಡುವುದು ಕರ್ಮ. ಇವು ಬೆಳವಣಿಗೆಯಲ್ಲಿರುವ ಮೂರು ಕಲೆಗಳು. ಕರ್ಮವನ್ನು ಮಾಡುತ್ತಾ ನಾವು ಲೋಕವನ್ನು ಗಳಿಸುತ್ತೇವೆ. ಇಲ್ಲಿ ಲೋಕ ಅಂದರೆ ಸ್ಥಿರ-ಚರ ಸೊತ್ತುಗಳು. ಇನ್ನು ಹದಿನೈದನೇ ಕಲೆ ನಾಮ. ಇಲ್ಲಿ ನಾಮ ಅಂದರೆ ಹುಟ್ಟಿದಾಗ ಇಟ್ಟ ಹೆಸರು, ಜೀವನದಲ್ಲಿ ಪಡೆದ ಕೀರ್ತಿ, ಅಪಕೀರ್ತಿ ಇತ್ಯಾದಿ.

ಒಟ್ಟಿನಲ್ಲಿ ಹೇಳಬೇಕೆಂದರೆ ಶ್ರದ್ಧೆ, ಪಂಚಭೂತಗಳು, ಇಂದ್ರಿಯಗಳು, ಮನೋಮಯಕೋಶ, ಆಹಾರ, ವೀರ್ಯ, ಆಲೋಚನೆ, ಮಾತು, ಕರ್ಮ, ಲೋಕ ಮತ್ತು ನಾಮ ಇವು ಜೀವದ ಮುಂದಿರುವ ಹದಿನೈದು ಬೇಲಿಗಳು. ಈ ಹದಿನೈದು ಬೇಲಿಗಳೊಳಗೆ ಸಿಕ್ಕಿಹಾಕಿಕೊಂಡಿರುವ ಜೀವ ಹದಿನಾರನೆ ಕಲೆ.

ಇಲ್ಲಿ ನಿಮಗೊಂದು ಪ್ರಶ್ನೆ ಬರಬಹುದು. ಅದೇನೆಂದರೆ: ಇಂದ್ರಿಯ, ಮನಸ್ಸು, ಇತ್ಯಾದಿ ನಮಗೆ ಬೇಲಿಯಾಗುವುದು ಹೇಗೆ ಎಂದು. ಇಂದ್ರಿಯಗಳಿಂದ ಮನುಷ್ಯ ಜ್ಞಾನಗಳಿಸುತ್ತಾನೆ, ಎತ್ತರಕ್ಕೇರುತ್ತಾನೆ. ಮನಸ್ಸಿನಿಂದ ಉಚ್ಛ ವಿಚಾರಗಳನ್ನು ಚಿಂತನೆ ಮಾಡುತ್ತಾನೆ. ಹೀಗಿರುವಾಗ ಇದು ಬೇಲಿಯಾಗುವುದು ಹೇಗೆ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ನಾವು ಸ್ವಲ್ಪ ಅಂತರಂಗದ ವಿಚಾರವನ್ನು ವಿಶ್ಲೇಷಿಸಬೇಕಾಗುತ್ತದೆ. ಉದಾಹರಣೆಗೆ ಕಣ್ಣು. ಕಣ್ಣಿನಿಂದ ನಾವು ನೋಡುತ್ತೇವೆ. ಆದರೆ ಈ ಕಣ್ಣು ನಮ್ಮ ಅಂತರಂಗವನ್ನು, ಸೂಕ್ಷ್ಮಪ್ರಪಂಚವನ್ನು ಗ್ರಹಿಸಲಾರದು. ಇದರಿಂದಾಗಿ ನಾವು ನಮ್ಮ ಒಳಗಣ್ಣನ್ನು ಮರೆತು ಹೊರಪ್ರಪಂಚದಲ್ಲೇ ಬದುಕಿಬಿಡುತ್ತೇವೆ. ಅದೇ ರೀತಿ ಮನಸ್ಸು. ಮನಸ್ಸು ನಮಗೆ ಸತ್ಯವನ್ನು ತಿಳಿಯದಂತೆ ನಮ್ಮನ್ನು ಹೊರಗೆಳೆದು ನಮ್ಮ ದಿಕ್ಕನ್ನು ಬದಲಿಸುತ್ತದೆ. ಎಲ್ಲವುದಕ್ಕೂ ಮೊದಲು ನಮ್ಮ ನಂಬಿಕೆ. ಒಂದು ವೇಳೆ ನಮ್ಮ ನಂಬಿಕೆ ತಪ್ಪಾಗಿದ್ದರೆ ನಮ್ಮ ಇಡೀ ಜೀವನವೇ ವ್ಯರ್ಥವಾಗುತ್ತದೆ. ಹೀಗೆ ಈ ಎಲ್ಲಾ ಹದಿನೈದು ಕಲೆಗಳೂ ಕೂಡಾ ಜೀವನನ್ನು ಬೇಲಿಯಂತೆ ಸುತ್ತುವರಿದಿರುತ್ತವೆ. ಈ ಹದಿನೈದು ಬೇಲಿಗಳನ್ನು ಹದಿನಾರನೇ ಜೀವನಿಗೆ ಕೊಟ್ಟವಳು ಹದಿನೇಳನೇ ಪ್ರಕೃತಿ. ಅದರಿಂದ ಬಿಡುಗಡೆಗೊಳಿಸಿ ಮೋಕ್ಷಕೊಡುವವ ಹದಿನೆಂಟನೇ ನಾರಾಯಣ. ಹಾಗಾಗಿ ವೇದಾಂತದಲ್ಲಿರುವ ಒಟ್ಟು ವಿಷಯಗಳು ಹದಿನೆಂಟೇ.

ಮೇಲೆ ಹೇಳಿದ ಹದಿನಾರು ಕಲೆಗಳಲ್ಲಿ ಹದಿನೈದು ಜಡಕಲೆ. ನಮಗೆ ತಿಳಿದಂತೆ ಅಧ್ಯಾತ್ಮದಲ್ಲಿ ಎಲ್ಲೂ ಕೇವಲ ಜಡವನ್ನು ಹೇಳುವ ಪದ್ಧತಿ ಇಲ್ಲ. ಆದ್ದರಿಂದ ಈ ಹದಿನೈದು ಕಲೆಗಳು ಅದರ ತತ್ತ್ವಾಭಿಮಾನಿ ದೇವತೆಗಳನ್ನು ಹೇಳುತ್ತವೆ. ಈ ತತ್ತ್ವಾಭಿಮಾನಿ ದೇವತೆಗಳು ಜೀವದ ಸಾಧನೆಯ ಹಾದಿಯಲ್ಲಿನ ವಿವಿಧ ಹಂತದಲ್ಲಿರುವ ಮೆಟ್ಟಿಲುಗಳು. ಈ ದೇವತೆಗಳನ್ನು ನಾವು ಅವರ ತಾರತಮ್ಯಕ್ಕನುಗುಣವಾಗಿ ವಿವಿಧ ಹಂತದಲ್ಲಿ ಕಾಣಬೇಕು. ಮೊದಲಿಗೆ ಪುಷ್ಕರ. ಈತ ಕರ್ಮದ ಅಭಿಮಾನಿ ದೇವತೆ. ಈತ ನಮಗೆ ಸಾಧನೆಯ ಹಾದಿಯಲ್ಲಿ ಮೊದಲ ಮೆಟ್ಟಿಲು. ನಂತರ ಶನಿ. ಈತ ಭೂಮಿಯ ಅಭಿಮಾನಿ ದೇವತೆ. ಹಾಗೇ ಉಷಾದೇವಿ ನಾಮದ ದೇವತೆ; ಅಗ್ನಿಪತ್ನಿ ಸ್ವಾಹಾ-ಮಂತ್ರದ ದೇವತೆ; ಬುಧ ನೀರಿನ ದೇವತೆ; ಅಗ್ನಿ ಪುತ್ರ ಪಾವಕ ಬೆಂಕಿಯ ದೇವತೆ; ವಾಯುಪುತ್ರ ಮರೀಚಿ ಗಾಳಿಯ ದೇವತೆ; ಗಣಪತಿ ಆಕಾಶದ ದೇವತೆ; ವರುಣ ವೀರ್ಯದ ದೇವತೆ; ಚಂದ್ರ ಅನ್ನದ ಅಭಿಮಾನಿ ದೇವತೆ; ಇಂದ್ರ-ಇಂದ್ರಿಯಗಳ ಅಭಿಮಾನಿ ದೇವತೆ; ಗರುಡ-ಶೇಷ ರುದ್ರರು ಮನಸ್ಸಿನ ಅಭಿಮಾನಿ ದೇವತೆಯರು. ನಂತರ ಭಾರತಿ

ಅಥವಾ ಶ್ರದ್ಧಾದೇವಿ ಶ್ರದ್ಧೆಯ ಅಭಿಮಾನಿದೇವತೆ. ಪ್ರಾಣದೇವರು ಪ್ರಾಣದ ಅಭಿಮಾನಿದೇವತೆ. ಇದು ನಮ್ಮ ಸಾಧನೆಯ ಹಾದಿಯಲ್ಲಿನ ಅತ್ಯಂತ ಎತ್ತರದ ಮೆಟ್ಟಿಲು. ಈ ಮೆಟ್ಟಿಲಿನ ನಂತರ ನಮಗೆ ನೇರವಾಗಿ ಲಕ್ಷ್ಮೀ-ನಾರಾಯಣರ ದರ್ಶನ. ಈ ಎಲ್ಲಾ ಅಭಿಮಾನಿ ದೇವತೆಗಳ/ಕಲೆಗಳ ಸ್ವಾಮಿ ಆ ಭಗವಂತ. ಒಟ್ಟಿನಲ್ಲಿ ಹೇಳಬೇಕೆಂದರೆ ಇದು ನಮ್ಮ ಉಪಾಸನೆಯ ಹದಿನೆಂಟು ಮಜಲುಗಳನ್ನು ಹೇಳುತ್ತದೆ. ಹದಿನೆಂಟು ಭಾರತೀಯ ತತ್ತ್ವಶಾಸ್ತ್ರದ ಅಪೂರ್ವ ಸಂಖ್ಯೆ. ಇದು 'ಜಯ'ವನ್ನು ಹೇಳುತ್ತದೆ. ಇಲ್ಲಿ ಈ ಹದಿನೆಂಟು ಮೆಟ್ಟಿಲುಗಳು ಸಂಸಾರದಿಂದ ಜಯಪಡೆಯಲಿಕ್ಕಾಗಿ ಇರುವ ಸಾಧನೆಯ ಮೆಟ್ಟಿಲುಗಳು.

*ಸ ಯಥೇಮಾ ನದ್ಯಃ ಸ್ಯಂದಮಾನಾಃ ಸಮುದ್ರಾಯಣಾಃ ಸಮುದ್ರಂ ಪ್ರಾಪ್ಯಾಸ್ತಂ ಗಚ್ಛಂತಿ ಭಿದ್ಯೇತೇ ತಾಸಾಂ ನಾಮರುಪೇ ಸಮುದ್ರ ಇತ್ಯೇವಂ ಪ್ರೋಚ್ಯತೇ । ಏವಮೇವಾಸ್ಯ ಪರಿದ್ರಷ್ಟುರಿಮಾಃ ಷೋಡಶಕಲಾಃ ಪುರುಷಾಯಣಾಃ ಪುರುಷಂ ಪ್ರಾಪ್ಯಾಸ್ತಂ ಗಚ್ಛಂತಿ ಭಿದ್ಯೇತೇ ಚಾಽಸಾಂ ನಾಮರುಪೇ ಪುರುಷ ಇತ್ಯೇವಂ ಪ್ರೋಚ್ಯತೇ ಸ ಏಷೋಽಕಲೋಽಮೃತೋ ಭವತಿ ॥೫॥*

ಹೇಗೆ ಹರಿಯುವ ನದಿಯ ಕೊನೆಯ ಗುರಿ ಸಮುದ್ರವೋ ಹಾಗೇ, ಪ್ರತಿಯೊಬ್ಬ ಮೋಕ್ಷಯೋಗ್ಯ ಜೀವ ಹಾಗೂ ಸಕಲ ತತ್ತ್ವಾಭಿಮಾನಿ ದೇವತೆಗಳ ಕೊನೆಯ ಗುರಿ ಆ ಭಗವಂತ. ಮೋಕ್ಷವನ್ನು ಸೇರಿದ ಎಲ್ಲಾ ಜೀವರು ಭಗವಂತನನ್ನು ಸೇರುತ್ತಾರೆ. ಈ ರೀತಿ ಮೋಕ್ಷವನ್ನು ಸೇರಿದ ಮೇಲೆ ಅವರ ಸ್ವರೂಪರೂಪ, ಲಿಂಗ ಬದಲಾಗುವುದಿಲ್ಲ. ಆದರೆ ಅವರು ಲೋಕದಲ್ಲಿ ಕಂಡಂತೆ ಬೇರೆಯಾಗಿ ಕಾಣಿಸಿಕೊಳ್ಳದೇ ಆ ಪರಮ ಪುರುಷನೊಂದಿಗಿರುತ್ತಾರೆ. ಇಲ್ಲಿ ಆ ಪರಮಪುರುಷ ಭಗವಂತನನ್ನು ಪಿಪ್ಪಲಾದರು 'ಅಕಲಃ, ಅಮೃತಃ' ಎಂದು ಸಂಬೋಧಿಸಿದ್ದಾರೆ. ಅಕಲಃ ಎಂದರೆ ಯಾವ ಕಲೆಗಳ ಸ್ಪರ್ಶವೂ ಇಲ್ಲದವ ಎಂದರ್ಥ. ಸಾವಿಲ್ಲದ ನಿತ್ಯಮುಕ್ತ ಭಗವಂತ ಅಮೃತಃ. ಮೋಕ್ಷಯೋಗ್ಯ ಜೀವ ಭಗವಂತನ ಅನುಗ್ರಹದಿಂದ ಹದಿನೈದು ಬೇಲಿಗಳನ್ನು ಕಳಚಿಕೊಂಡು ಸಕಲ ಕಲಾಭಿಮಾನಿದೇವತೆಗಳ ನೆರವಿನಿಂದ ಮೋಕ್ಷವನ್ನು ಪಡೆಯುತ್ತಾನೆ.

*ತದೇಷ ಶ್ಲೋಕಃ*

*ಅರಾ ಇವ ರಥನಾಭೌ ಕಲಾ ಯಸ್ಮಿನ್ ಪ್ರತಿಷ್ಠಿತಾಃ ।*
*ತಂ ವೇದ್ಯಂ ಪುರುಷಂ ವೇದಯಥಾ ಮಾ ವೋ ಮೃತ್ಯುಃ ಪರಿವ್ಯಥಾ ಇತಿ ॥೬॥*

ಮೇಲೆ ವಿವರಿಸಲಾದ ವಿಷಯಗಳಿಗೆ ಸಂವಾದಿಯಾಗಿ/ಪೂರಕವಾಗಿ ಪಿಪ್ಪಲಾದರು ಈ ವೇದ ಮಂತ್ರವನ್ನು ಉಲ್ಲೇಖ ಮಾಡುತ್ತಾರೆ. "ಎಲ್ಲಾ ಕಲೆಗಳು, ಕಲಾಭಿಮಾನಿ ದೇವತೆಗಳು ಯಾರಲ್ಲಿ ಆಶ್ರಯರಾಗಿದ್ದಾರೋ 'ಅವನು ಭಗವಂತ'. ಹೇಗೆ ರಥದ ಚಕ್ರದ ಅರಗಿಲುಗಳು ಮಧ್ಯದ ನಾಭಿಯಲ್ಲಿ ನೆಲೆಗೊಂಡಿದ್ದಾವೋ ಹಾಗೇ, ಇಡೀ ವಿಶ್ವ ಭಗವಂತನಲ್ಲಿ ನೆಲೆಗೊಂಡಿದೆ. ಸಮಸ್ತ ವೇದಗಳಿಂದ ವೇದ್ಯನಾದವ, ಸಾಧನೆಯಿಂದ ತಿಳಿದುಕೊಳ್ಳಲೇಬೇಕಾದ ಪರಮಪುರುಷ ಆ ಭಗವಂತ. ಇಂಥಹ ಪರಮಪುರುಷ ಭಗವಂತನನ್ನು ತಿಳಿದುಕೊಂಡವನಿಗೆ ಸಾವು ದುಃಖವಾಗಿ ಕಾಡುವುದಿಲ್ಲ ಮತ್ತು ಆತ ಸತ್ತ ಮೇಲೆ ಅಮೃತತ್ತ್ವವನ್ನು ಪಡೆಯುತ್ತಾನೆ".

*ತಾನ್ ಹೋವಾಚ । ಚೈತಾವದೇವಾಹಮೇತತ್ ಪರಂ ಬ್ರಹ್ಮ ವೇದ ನಾತಃ ಪರಮಸ್ತೀತಿ ॥೭॥*

ಇಂಥಹ ಅತ್ಯದ್ಭುತ ಜ್ಞಾನ ಸಂದೇಶವನ್ನು ತನ್ನ ಆರುಮಂದಿ ಶಿಷ್ಯರಿಗೆ ನೀಡಿದ ಪಿಪ್ಪಲಾದರು ಕೊನೆಯಲ್ಲಿ ಹೇಳುತ್ತಾರೆ: "ನನಗೆ ತಿಳಿದಿರುವ ಎಲ್ಲಾ ಅಧ್ಯಾತ್ಮದ ರಹಸ್ಯವನ್ನು ನಾನು ನಿಮ್ಮ ಮುಂದೆ ತೆರೆದಿಟ್ಟೆ. ಇದರಿಂದಾಚೆಗೆ ನನಗೆ ಏನೂ ತಿಳಿದಿಲ್ಲ." ಎಂದು. ಪಿಪ್ಪಲಾದರ ಈ ಮಾತಿನ ಹಿಂದಿನ ಸೌಜನ್ಯ ಅಪೂರ್ವವಾದುದು.

*ತೇ ತಮರ್ಚಯಂತಸ್ತ್ವಂ ಹಿ ನಃ ಪಿತಾ ಯೋಽಸ್ಮಾಕಮವಿದ್ಯಾಯಾಃ ಪರಂ ಪಾರಂ ತಾರಯಸೀತಿ ।ನಮಃ ಪರಮಋಷಿಭ್ಯೋ ನಮಃ ಪರಮಋಷಿಭ್ಯಃ ॥೮॥*

ಪಿಪ್ಪಲಾದರ ಉಪದೇಶವನ್ನು ಕೇಳಿದ ಆರು ಮಂದಿ ಋಷಿಗಳು ಬಹಳ ಸಂತೋಷದಿಂದ ಹೇಳುತ್ತಾರೆ: "ಗುರುಗಳೇ, ನಮ್ಮ ಬಾಳು ಧನ್ಯವಾಯಿತು. ನಿಮ್ಮಿಂದ ನಮಗೆ ಸತ್ಯದ ದರ್ಶನವಾಯಿತು. ನೀವು ನಮಗೆ ಜ್ಞಾನದ ದೇಹವನ್ನು ಕೊಟ್ಟ ತಂದೆ. ಅಜ್ಞಾನದ ಕಡಲಲ್ಲಿದ್ದ ನಮಗೆ ನೀವು ಜ್ಞಾನದ ತಡಿಯನ್ನು ತೋರಿದಿರಿ. ನಮಗಿನ್ನೇನು ಬೇಕು" ಎಂದು. ಮನುಷ್ಯಜನ್ಮದ ಏಕಮಾತ್ರ ಸಾರ್ಥಕ್ಯ ಎಂದರೆ ಅಜ್ಞಾನದಿಂದ ಜ್ಞಾನದ ಕಡೆಗೆ, ಕತ್ತಲಿನಿಂದ ಬೆಳಕಿನ ಕಡೆಗೆ ಪಯಣಿಸಿ, ಸಾವಿನಿಂದ ಅಮೃತತತ್ವವನ್ನು ಪಡೆಯುವುದು. "ನೀವು ನಮ್ಮನ್ನು ಸಂಸಾರದ ಗಡಿ ದಾಟಿಸಿ ಮೋಕ್ಷದತ್ತ ಹಾಯಿಸಿದಿರಿ" ಎಂದು ಹೇಳಿದ ಋಷಿಗಳು, ಕೊನೆಯಲ್ಲಿ ಹೇಳುತ್ತಾರೆ: "ಪರಮಋಷಿಭ್ಯೋ ನಮಃ ಪರಮಋಷಿಭ್ಯಃ" ಎಂದು. ಅಂದರೆ "ಪರಮಋಷಿಗಳಿಗೆ ನಮಸ್ಕಾರ, ಪರಮ ಋಷಿಗಳಿಗೆ ನಮಸ್ಕಾರ" ಎಂದರ್ಥ. ಋಷಿ ಎಂದರೆ ಜ್ಞಾನಿ. ಪರಮಋಷಿ ಎಂದರೆ ಪೂರ್ಣಜ್ಞಾನಿ. ಭಗವಂತ ಒಬ್ಬನೇ ಪೂರ್ಣಜ್ಞಾನಿ. "ಸರ್ವಜ್ಞನಾದ ಭಗವಂತನ ಅನಂತರೂಪಗಳಿಗೆ ನಮ್ಮ ನಮಸ್ಕಾರ; ಭಗವಂತನನ್ನು ತಿಳಿದ ಎಲ್ಲಾ ಜ್ಞಾನಿ ಶ್ರೇಷ್ಠರಿಗೆ ನಮಸ್ಕಾರ; ವಿಶೇಷವಾಗಿ ನಮಗೆ ಜ್ಞಾನವನ್ನು ಕೊಟ್ಟ ಪಿಪ್ಪಲಾದರಿಗೆ ನಮಸ್ಕಾರ" ಎಂದು ನಮಸ್ಕರಿಸಿದರು ಎನ್ನುವಲ್ಲಿಗೆ ಪ್ರಶ್ನೋಪನಿಷತ್ತಿನ ಈ ಅತ್ಯದ್ಭುತ ಉಪದೇಶ ಕೊನೆಗೊಳ್ಳುತ್ತದೆ.

*ಇತಿ ಪ್ರಶ್ನೋಪನಿಷದಿ ಷಷ್ಠಃ ಪ್ರಶ್ನಃ ॥*

ಇಲ್ಲಿಗೆ ಷಟ್ ಪ್ರಶ್ನ ಉಪನಿಷತ್ತಿನ ಆರನೇ ಪ್ರಶ್ನೆ/ಅಧ್ಯಾಯ ಮುಗಿಯಿತು

*******

|| ಸರ್ವೇ ಜನಾಃ ಸುಖಿನೋ ಭವಂತು - ಶ್ರೀ ಕೃಷ್ಣಾರ್ಪಣಮಸ್ತು ||

ನಿಮ್ಮ ಅನಿಸಿಕೆಗಳನ್ನು ನಮಗೆ ತಲುಪಿಸಲು ಈ ಕೆಳಗಿನ ವೆಬ್ ಸೈಟ್ ಸಂದರ್ಶಿಸಿರಿ:

http://prashnopanishat-in-kannada.blogspot.in